ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 10 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 349 | ಪುಟಗಳು: 12 + IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಚಾಮುಂಡಿಬೆಟ್ಟದಲ್ಲಿ 'ಪ್ರಸಾದ್' ಕಾಮಗಾರಿಗೆ 'ಹೈ'ತಡೆ



● ಎರಡು ಬಾರಿ ಆದೇಶ ಉಲ್ಲಂಘಿಸಿದ್ದಕ್ಕೆ ನ್ಯಾಯಮೂರ್ತಿಗಳು ಗರಂ ● ವಾರದಲ್ಲಿ ಯೋಜನೆ ಖರ್ಚು–ವೆಚ್ಚ, ಪ್ರಗತಿಯ ವರದಿಗೆ ಸೂಚನೆ ● ಕಾಮಗಾರಿ ಮುಂದುವರೆಸಿದರೆ ನ್ಯಾಯಾಂಗ ನಿಂದನೆಯ ಎಚ್ಚರಿಕೆ

ಮೈಸೂರು, ಏ.9(ಬಿಎಲ್‌ಯು)– ಚಾಮುಂಡಿಬೆಟ್ಟದಲ್ಲಿ ಕೇಂದ್ರ ಸರ್ಕಾರದ 'ಪ್ರಸಾದ್' ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಿಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಪಾರಂಪರಿಕ ಹಾಗೂ ಧಾರ್ಮಿಕ ಹಿನ್ನೆಲೆಯ ಚಾಮುಂಡಿಬೆಟ್ಟದಲ್ಲಿ ಪ್ರಸಾದ್ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಯಿಂದ ಬೆಟ್ಟದ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ. ಅಲ್ಲದೆ ದೇವ ಸ್ಥಾನದ ಗೋಪುರದ ಅಸ್ತಿತ್ವಕ್ಕೆ ಹಾನಿಯಾಗುತ್ತದೆ. ಆದ್ದರಿಂದ ಯೋಜನೆಯನ್ನು ಸ್ಥಗಿತಗೊಳಿಸಬೇಕು ಎಂದು ಮೈಸೂರು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು.

ಈ ಬಗ್ಗೆ ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್ ನ್ಯಾಯಾಧೀಶ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರು ಪ್ರಸಾದ್ ಯೋಜನೆಯ ಕಾಮಗಾರಿಗೆ ತಡೆಯಾಜ್ಞೆ ನೀಡಿದ್ದಾರೆ. ದೇವಾಲಯದ ಆವರಣದಲ್ಲಿ ನಡೆಯುತ್ತಿರುವ ನಿರ್ಮಾಣ ಚಟುವಟಿಕೆಗಳನ್ನು ಯಾವ ಸಬೂಬು ಹೇಳದೆ ತಕ್ಷಣ ನಿಲ್ಲಿಸಬೇಕು. ಕೇಂದ್ರ ಸರ್ಕಾರ ಪ್ರಸಾದ್ ಯೋಜನೆಗಾಗಿ ನೀಡಿರುವ 47 ಕೋಟಿ ಅನುದಾನದಲ್ಲಿ ಈವರೆಗಿನ ವೆಚ್ಚ, ದೇವಾಲಯದ ಆವರಣದಲ್ಲಿ ಕೈಗೊಂಡಿರುವ ಕಾಮಗಾರಿಗಳು, ಪ್ರಸ್ತುತದ ಹಂತ ■ 6ನೇ ಪುಟಕ್ಕೆ

ಹೈಕೋರ್ಟ್ ನೀಡಿರುವ ಆದೇಶದಂತೆ ಚಾಮುಂಡಿಬೆಟ್ಟದಲ್ಲಿ ಕೈಗೊಂಡಿರುವ ಪ್ರಸಾದ್ ಯೋಜನೆಯ ಕಾಮಗಾರಿಯನ್ನು ಇಂದೇ ಸ್ಥಗಿತ ಮಾಡಲಾಗುವುದು. ನ್ಯಾಯಾಲಯ ನೀಡಿರುವ ಆದೇಶವನ್ನು ಪಾಲಿಸುತ್ತೇವೆ. ತಡೆಯಾಜ್ಞೆಯನ್ನು ತೆರವು ಮಾಡುವಂತೆ ಹೈಕೋರ್ಟ್‌ಗೆ ಮನವಿ ಸಲ್ಲಿಸುತ್ತೇವೆ.



–ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು.

ಈ ಸಲ ದ್ವಿತೀಯ ಪಿಯುಸಿಯಲ್ಲಿ ದಾಖಲೆ ಶೇ.86 ಫಲಿತಾಂಶ

● ಕಳೆದ ಬಾರಿಗಿಂತ ಶೇ.13ರಷ್ಟು ಫಲಿತಾಂಶ ಹೆಚ್ಚಳ ● ಉಡುಪಿ ಫಸ್ಟ್, ಯಾದಗಿರಿ ಲೀಸ್ಟ್; ಬಾಲಕಿಯರೇ ಮೇಲುಗೈ ● ದಕ್ಷಿಣ ಕನ್ನಡದ ಆಳ್ವಾಸ್‌ನ ದಿಶಾ ವಾಣಿಜ್ಯದಲ್ಲಿ, ವಿಜಯನಗರದ ಕೊಟ್ಟೂರಿನ ಸಂಗೀತಾ, ಅರ್ಚನಾ ಕಲಾ; ಮಂಗಳೂರಿನ ಶಮನ್ಯು ವಿಜ್ಞಾನದಲ್ಲಿ ಟಾಪರ್ಸ್

▸ ಕೊಡಗು- 3 ▸ ಚಾ.ನಗರ- 19 ▸ ಮಂಡ್ಯ- 12 ▸ ಹಾಸನ- 11

ಬೆಂಗಳೂರು, ಏ.9(ಕೆಎಂಶಿ)– ಪರೀಕ್ಷಾ ವ್ಯವಸ್ಥೆ ಮತ್ತು ಬೋಧನಾ ಪದ್ಧತಿಯಲ್ಲಿ ಹಲವಾರು ಬದಲಾವಣೆ ಗಳಿಂದಾಗಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ದಾಖಲೆ ಪ್ರಮಾಣದಲ್ಲಿ ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ.

ಅಲ್ಲದೆ, ತೇರ್ಗಡೆಗೆ ನೂರಕ್ಕೆ 35 ಅಂಕಗಳ ಬದಲಾಗಿ ಶೇ. 33 ಅಂಕಗಳಿಗೆ ಇಳಿಸಿದ್ದರಿಂದ ಫಲಿತಾಂಶದಲ್ಲಿ ಹೆಚ್ಚಳ ಕಂಡಿದೆ.



ದಿಶಾ



ಸಂಗೀತಾ



ಅರ್ಚನಾ

ಈ ಬಾರಿ ಒಟ್ಟಾರೆ ಶೇ.86 ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಆಗುವ ಮೂಲಕ ಕಳೆದ ಬಾರಿಗಿಂತ ಶೇ.13 ರಷ್ಟು ಫಲಿತಾಂಶ ಹೆಚ್ಚಾಗಿದೆ.


ಸುದ್ದಿಗೋಷ್ಠಿಯಲ್ಲಿ ಫಲಿತಾಂಶದ ವಿವರಗಳನ್ನು ನೀಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು, ಹೆಚ್ಚಿನ ಪ್ರಮಾಣದಲ್ಲಿ ನಮ್ಮ ■ 6ನೇ ಪುಟಕ್ಕೆ

ಮೈಸೂರು ಜಿಲ್ಲೆಯ ಫಲಿತಾಂಶದಲ್ಲಿ ಶೇ.10ರಷ್ಟು ಸುಧಾರಣೆ

● ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪಿಯು ಕಾಲೇಜಿನ ಡಿ.ಎಸ್.ಧನ್ವಿ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ತೃತೀಯ ಸ್ಥಾನ ● ಸದ್ವಿದ್ಯಾ ಕಾಂಪೋಸಿಟ್ ಪಿಯು ಕಾಲೇಜಿನ ಕೆ.ಚಿತ್ರ ಸ್ಫೂರ್ತಿ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ನಾಲ್ಕನೇ ಟಾಪರ್: ಈ ಇಬ್ಬರು ಜಿಲ್ಲೆಗೆ ಪ್ರಥಮರು

ಮೈಸೂರು, ಏ.9(ಪಿಎಂ)– ಮೈಸೂರು ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಕಳೆದ ಸಾಲಿಗೆ ಹೋಲಿಸಿದರೆ ಈ ಬಾರಿ ಶೇ.10.5ರಷ್ಟು ಸುಧಾರಣೆ ಆಗಿದೆ. 2025ರ ಪರೀಕ್ಷೆ–1ರಲ್ಲಿ ಜಿಲ್ಲೆಗೆ ಶೇಕಡವಾರು ಫಲಿತಾಂಶವು ಶೇ.74.30 ಇದ್ದರೆ, ಈ ಸಾಲಿನಲ್ಲಿ ಶೇ.84.80ರಷ್ಟು ಫಲಿತಾಂಶ ಬಂದಿದೆ. ಆ ಮೂಲಕ ರಾಜ್ಯದಲ್ಲಿ ಮೈಸೂರು ಜಿಲ್ಲೆ ಈ ಬಾರಿ 18ನೇ ಸ್ಥಾನ ಗಳಿಸಿದೆ.

ಮೈಸೂರಿನ ವಿಜಯನಗರ 2ನೇ ಹಂತದ ಸದ್ವಿದ್ಯಾ ಸೆಮಿರೆಸಿಡೆನ್ಷಿಯಲ್ ಪಿಯು ಕಾಲೇಜಿನ ಡಿ.ಎಸ್.ಧನ್ವಿ ವಿಜ್ಞಾನ ವಿಭಾಗದಲ್ಲಿ ರಾಜ್ಯದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ. ರಾಜ್ಯದಲ್ಲಿ 19 ಮಂದಿ ವಿಜ್ಞಾನ ವಿಭಾಗದಲ್ಲಿ 597 ಅಂಕ ಗಳಿಸಿ ತೃತೀಯ ಸ್ಥಾನ ಗಳಿಸಿದ್ದು, ಆ ಪೈಕಿ ಡಿ.ಎಸ್. ಧನ್ವಿ ಸಹ ಒಬ್ಬರಾಗಿದ್ದಾರೆ. ■ 6ನೇ ಪುಟಕ್ಕೆ



ಡಿ.ಎಸ್. ಧನ್ವಿ



ಕೆ. ಚಿತ್ರ

ವಿಶ್ವಶಾಂತಿಗಾಗಿ ಸಾವಿರಾರು ಜೈನ ಬಂಧುಗಳಿಂದ ನವಕಾರ್ ಮಹಾಮಂತ್ರ ಪಠಣ





ಮೈಸೂರಿನ ಪುರಭವನದ ಆವರಣದಲ್ಲಿ ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಸೇಶನ್(ಜಿತೋ) ಮೈಸೂರು ಚಾಪ್ಟರ್ ವತಿಯಿಂದ 'ವಿಶ್ವ ಕಲ್ಯಾಣಕ್ಕಾಗಿ ನವಕಾರ್ ಮಹಾಮಂತ್ರ ಜಪಾ' ಕಾರ್ಯಕ್ರಮ ನಡೆಸಲಾಯಿತು.

ಮೈಸೂರು, ಏ.9(ಎಂಕೆ)– ಮೈಸೂರಿನಲ್ಲಿ ಜೈನ ಸಮುದಾಯದ ಸಾವಿರಾರು ಮಂದಿ ಸಾಮೂಹಿಕವಾಗಿ 'ನವಕಾರ್ ಮಹಾಮಂತ್ರ' ಪಠಿಸುವ ಮೂಲಕ ವಿಶ್ವಶಾಂತಿ ಸ್ಥಾಪನೆಗಾಗಿ ಪಾರ್ಥಿಸಿದರು.

ಮೈಸೂರಿನ ಪುರಭವನದ ಆವರಣದಲ್ಲಿ ವಿಶ್ವ ನವಕಾರ್ ಮಹಾಮಂತ್ರ ದಿನಾಚರಣೆ ಅಂಗವಾಗಿ ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಸೇಶನ್ (ಜಿತೋ) ಮೈಸೂರು ವತಿಯಿಂದ ಆಯೋಜಿಸಿದ್ದ 'ವಿಶ್ವ ಕಲ್ಯಾಣಕ್ಕಾಗಿ ನವಕಾರ್ ಮಹಾಮಂತ್ರ ಜಪಾ' ಕಾರ್ಯಕ್ರಮದಲ್ಲಿ ಯುದ್ಧ ಅಂತ್ಯವಾಗಿ ಶಾಂತಿ ಸ್ಥಾಪನೆಯಾಗಲಿ ಎಂದು ಬೇಡಿದರು.

ದೇಶದಾದ್ಯಂತ ಏಕಕಾಲದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ವಿಡಿಯೋ ಕಾನ್ಫರೆನ್ಸ್ ಮೂಲಕ ಕೇಂದ್ರ ಗೃಹಸಚಿವ ಅಮಿತಾ ಷಾ ಚಾಲನೆ ನೀಡುತ್ತಿದ್ದಂತೆ ಜಿತೋ ಮೈಸೂರಿನ ಜಿಲ್ಲಾ ಮಟ್ಟದ ಪದಾಧಿಕಾರಿಗಳು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಆರಂಭದಲ್ಲಿ ಸಾಧ್ವಿ ಶ್ರೀ ಪವನಪ್ರಭ ಜೀ ಆಶೀರ್ವದಿಸಿದರೆ, ಗಾಯಕ ಹಾರ್ದಿಕ್ ಜೈನ್ ಜೊತೆಗೂಡಿ ಬಿಳಿ(ಪುರುಷರು) ಮತ್ತು ಕೆಂಪು(ಮಹಿಳೆಯರು) ವಸ್ತ್ರ ಧರಿಸಿ ನೆರೆದಿದ್ದ ಸಾವಿರಾರು ಮಂದಿ ಜೈನ ಧರ್ಮದ ಶ್ರೇಷ್ಠ ಮಂತ್ರವಾದ 'ನವಕಾರ್ ಮಹಾಮಂತ್ರ'ವನ್ನು ಜಪಿಸುವ ಮೂಲಕ ಹಿಂಸೆ ತೊಲಗಿ ಅಹಿಂಸೆ ಪಸರಿಸಲಿ ಎಂದು ಪ್ರಾರ್ಥಿಸಿದರು.

ಈ ವೇಳೆ ಜಿತೋ ಜಿಲ್ಲಾಧ್ಯಕ್ಷ ವಿನೋದ್ ಕುಮಾರ್ ಬಾಕ್ಲಿವಾಲ್ ಮಾತನಾಡಿ, ಕಳೆದ ವರ್ಷ ಪ್ರಧಾನ ಮಂತ್ರಿಗಳು ವಿಶ್ವ ನವಕಾರ್ ಮಹಾಮಂತ್ರ ದಿನಾಚರಣೆ ಉದ್ಘಾಟಿಸಿದ್ದರು. ಈ ವರ್ಷ ಕೇಂದ್ರ ಸಚಿವರು ಚಾಲನೆ ನೀಡಿದ್ದಾರೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ದೇಶ ಮತ್ತು ವಿಶ್ವದಲ್ಲಿ ಶಾಂತಿ ಸ್ಥಾಪನೆಯಾಗಬೇಕು ಎಂಬುದಾಗಿದೆ ಎಂದರು.

ಹಿಂದೂ ಧರ್ಮೀಯರಿಗೆ ಗಾಯತ್ರಿ ಮಂತ್ರದಂತೆ ಜೈನರಿಗೆ ನವಕಾರ್ ಮಹಾಮಂತ್ರ ಶ್ರೇಷ್ಠವಾಗಿದೆ. ಪಾರ್ಥನೆಗೆ ಭಗವಂತನ ಅನುಗ್ರಹ ಇರಲಿದೆ ಎಂಬ ನಂಬಿಕೆಯಲ್ಲಿ ದೇಶದ ಪ್ರತಿಯೊಬ್ಬರು ಸುಖ–ಶಾಂತಿ ಮತ್ತು ನೆಮ್ಮದಿಯಿಂದ ಬದುಕುವಂತಾಗಬೇಕು ಎಂದು ಆಶಿಸಿದರು.

ಶ್ರೀ ಸ್ಥಾನಕ್ವಾಸಿ ಜೈನ್ ಸಂಘದ ಅಧ್ಯಕ್ಷ ಸುಭಾಷ್ಚಂದ್ರ ದರ್ಡಾ, ಕಾರ್ಯದರ್ಶಿ ಬುದ್ಮಲ್ ಬಾಗ್ಮಾರ್, ತೇರಾಪಂಥ್ ಸಭಾ ಅಧ್ಯಕ್ಷ ಪ್ರಕಾಶ್ ಜೈನ್ ರಾಯಲ್, ಕಾರ್ಯದರ್ಶಿ ದಿಲೀಪ್ ಪಿಥಲಿಯಾ, ದಿಗಂಬರ ಜೈನ್ ಸಮಾಜದ ಅಧ್ಯಕ್ಷ ಲಕ್ಷ್ಮೀಶ್ ಬಾಬು, ಉಪಾಧ್ಯಕ್ಷ ಪ್ರಸನ್ನ ಕುಮಾರ್ ಜೈನ್, ಶ್ರೀ ಸುಮತಿನಾಥ ಜೈನ್ ಸಂಘದ ಮಾಜಿ ಅಧ್ಯಕ್ಷ ಅಶೋಕ್ ದಾಟೆವಾಡಿಯಾ, ಶ್ರೀ ಸುಮತಿನಾಥ ಜೈನ್ ನವಯುವಕ ಮಂಡಲದ ಅಧ್ಯಕ್ಷ ಜೆ.ಕುಮಾರ್ ಸಾಲೇಚಾ, ಶ್ರೀ ಸ್ಥಾನಕ್ವಾಸಿ ಜೈನ್ ಯುವ ಸಂಘಟನೆ ಅಧ್ಯಕ್ಷ ನವರತನ್ ಡೆಲ್ರ್ಾ, ತೇರಾಪಂಥ್ ಯುವಕ ಪರಿಷತ್ ಅಧ್ಯಕ್ಷ ಪ್ರಮೋದ್ ಮುನೋಟ್, ಹ್ಯೂಮನ್ ಟಚ್ ಅಧ್ಯಕ್ಷ ವಿಕ್ರಮ್ ಸಾಲೇಚಾ, ಹೆಲ್ಪಿಂಗ್ ಹ್ಯಾಂಡ್ಸ್ ಅಧ್ಯಕ್ಷ ಮಹಾವೀರ ಖಿಬಿಯಾ, ಭಾರತೀಯ ಜೈನ್ ಸಂಘಟನೆ ಉಪಾಧ್ಯಕ್ಷರಾದ ಕುಶಾಲ್ ಪಾರ್ಲೆಚಾ ಮತ್ತು ಅಮಿತ್ ಚೌಹಾಣ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಜಿತೋ ಮೈಸೂರು ಚಾಪ್ಟರ್‌ನ ರಮೇಶ್ ನೋಲ್ಖಾ, ಪ್ರೇಮ್ ಪಾಲ್ರೇಚಾ, ಗೌತಮ್ ಬಾಗ್ಮಾರ್, ಪ್ರವೀಣ್ ದಾಂತೆವಾಡಿಸ್, ಕಾಂತಿಲಾಲ್ ಚೌಹಾಣ್, ಟಿಕಮ್ ಚಂದ್, ಚಂದ್ರಗುಪ್ತ ಕಟಾರಿಯಾ, ಪುನಿತ್ ಶ್ರೀಸಿಮಲ್, ಯೋಜನಾ ನಿರ್ದೇಶಕ ರಾಜನ್ ಬಾಗ್ಮಾರ್, ಮಹಾವೀರ್ ಗಡಿಯಾ, ಮನೋಹರ ಸಂಕಲ, ಪ್ರಕಾಶ್ ಗಾಂಧಿ, ಮನೀಶ್ ಶಾ, ಮುಖೇಶ್ ಮೆಹ್ತಾ, ಜಿತೋ ಲೇಡೀಸ್ ವಿಂಗ್ ಅಧ್ಯಕ್ಷೆ ಮೋನಾ ಭತೇವಾರ, ರಜನಿ ದಗ್ಲಿಯಾ, ಕಾರ್ಯದರ್ಶಿ ಸೀಮಾ ಬೋಹ್ರಾ, ಯುವ ಅಧ್ಯಕ್ಷ ಸಿದ್ಧಾರ್ಥ್ ಕಟಾರಿಯಾ, ಪುನೀತ್ ಜುಗರಾಜ್ ಮತ್ತಿತರರಿದ್ದರು.

ಪೋಸ್ಟರ್ ಬಿಡುಗಡೆ



ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಎಂಟನೇ ವಾರ್ಷಿಕೋತ್ಸವದ ಪೋಸ್ಟರ್ ಅನ್ನು ಮಾಜಿ ಮುಖ್ಯಮಂತ್ರಿಗಳೂ ಆದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಿಡುಗಡೆ ಮಾಡಿದರು. ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಮುಖಂಡರಾದ ಶ್ರೀನಿವಾಸ್, ಅಜಯ್, ನಾಗರಾಜು, ಚಂದ್ರಶೇಖರ್, ಬಳಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು, ಏ.9– ಮೈಸೂರಿನ ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿರುವ ಸುರುಚಿ ರಂಗ ಮನೆಯ ಕಲಾಸುರುಚಿ ವತಿಯಿಂದ ಏ.11 ರಂದು ಸಂಜೆ 4.30 ರಿಂದ 5.30ರವರೆಗೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮದಲ್ಲಿ ಸದ್ವಿದ್ಯಾ ಪ್ರೌಢಶಾಲೆಯ ನಿವೃತ್ತ ಆಂಗ್ಲ ಭಾಷಾ ಶಿಕ್ಷಕ, ಹಿರಿಯ ರಂಗಕರ್ಮಿ ಕೆ.ಎನ್. ಕೃಷ್ಣಪ್ರಸಾದ್ ಕಥೆ ಹೇಳುವರು. ಹೆಚ್ಚಿನ ಮಾಹಿತಿಗೆ 9243581097, 9945943115 ಸಂಪರ್ಕಿಸಬಹುದು.

ಘನಪಾಠಿಗೆ ಪಿಎಚ್.ಡಿ ಪದವಿ ಪ್ರದಾನ



ಮೈಸೂರು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ವೇದ ಪಾಠಶಾಲೆಯ ಹಳೆಯ ವಿದ್ಯಾರ್ಥಿ ಹಾಗೂ ಪ್ರಖ್ಯಾತ ವಿದ್ವಾಂಸ ಹರಿಸೀತಾರಾಮಮೂರ್ತಿ ಸಲಕ್ಷಣ ಘನಪಾಠಿ ಅವರಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿ ನೀಡಿ ಗೌರವಿಸಿದೆ. ಇತ್ತೀಚೆಗೆ ನಡೆದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ದೀಕ್ಷಾಂತ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಹರಿಸೀತಾರಾಮಮೂರ್ತಿ ಅವರಿಗೆ ಅಧಿಕೃತವಾಗಿ ಪದವಿ ಪ್ರದಾನ ಮಾಡಿದರು.

ವಿವಿಧ ಕಲಾಪ್ರಕಾರಗಳ ನೃತ್ಯ; ಕರಾಟೆ ತರಬೇತಿ ಶಿಬಿರ



ನೃತ್ಯ ಹಾಗೂ ಕರಾಟೆ ತರಬೇತಿ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ಮೈಸೂರು, ಏ.9– ಮೈಸೂರಿನ ಕಲಾಧಾರೆ ಕಲ್ಚರಲ್ ಟ್ರಸ್ಟ್ ಪ್ರದರ್ಶಕ ಕಲೆಗಳ ತರಬೇತಿ ಸಂಸ್ಥೆ, ಭಾರತ ಸೇವಾದಳ ಪ್ರಾಥಮಿಕ ಹಾಗೂ ಪ್ರೌಢಶಾಲೆ ಜಿಲ್ಲಾ ಸಮಿತಿ ಮೈಸೂರು ಹಾಗೂ ಪ್ರಜ್ಞಾ ಟ್ರಸ್ಟ್ ಸಹಯೋಗದಲ್ಲಿ ಜಾನಪದ, ವಿವಿಧ ಕಲಾ ಪ್ರಕಾರಗಳ ನೃತ್ಯ ಹಾಗೂ ಕರಾಟೆ ತರಬೇತಿ ಶಿಬಿರವನ್ನು ತಮಟೆ ಹಾಗೂ ಕಂಸಾಳೆ ಬಾರಿಸುವುದರ ಮೂಲಕ ಉದ್ಘಾಟಿಸಲಾಯಿತು.

ಭಾರತ ಸೇವಾದಳ ಕಾರ್ಯದರ್ಶಿ ಬೀರಿಹುಂಡಿ ಬಸವಣ್ಣ ಮಾತನಾಡಿ, ನಮ್ಮ ಶಾಲೆಗೆ ನೃತ್ಯ ನಿರ್ದೇಶಕ ಚಾಮರಾಜ್ ಉಚಿತವಾಗಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿರುವುದು ಸಂತೋಷದ ವಿಷಯ. ಇವರ ಸೇವೆಯನ್ನು ಶಾಲೆಯ ಮಕ್ಕಳು ಬಳಸಿಕೊಂಡು ಉನ್ನತ ಮಟ್ಟದಲ್ಲಿ ಸಾಧನೆ ಮಾಡಿ ಶಾಲೆಗೆ, ದೇಶಕ್ಕೆ ಕೀರ್ತಿ ತರುವಂತೆ ಹಾರೈಸಿದರು.

ನೃತ್ಯ ನಿರ್ದೇಶಕ ಚಾಮರಾಜ ಮಾತನಾಡಿ, ಕಲೆಯೇ ನನ್ನ ಜೀವ, ಜೀವನ. ಕಲೆ ನನ್ನನ್ನು ಆವರಿಸಿದೆ. ಹಾಗೆಯೇ ಹಿರಿಯರ ಸಾಧಕರ ಕೊಡುಗೆ ಗಳು, ನೋವುಗಳು ಅವರ ಕಲೆಗಳನ್ನು ನೋಡಿ ನನ್ನ ತಪ್ಪುಗಳು ಇದ್ದರೆ ತಿದ್ದಿಕೊಂಡು ನಾನು ಕಲಿತರೆ ಸಾಲದು ನನ್ನಲ್ಲಿ ತರಬೇತಿ ಪಡೆಯಲು ಬರುವ ವಿದ್ಯಾರ್ಥಿಗಳಿಗೆ ನನಗಿಂತಲೂ ಉತ್ತಮವಾದ ವೇದಿಕೆ ಕಲ್ಪಿಸಿಕೊಡಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಆರ್.ವಿ.ಮಹದೇವಸ್ವಾಮಿ, ಡಿ.ಆರ್. ಶೇಷಾಚಲ, ಸೋಸಲೆ ಸಿದ್ದರಾಜು, ಶ್ರೀಮತಿ ಡಿ.ಎಸ್. ಚೈತ್ರ, ಈರಯ್ಯ ಮತ್ತಿತರರು ಉಪಸ್ಥಿತರಿದ್ದರು.

ಹಿಂದೂಗಳು ಕನಿಷ್ಠ 2ರಿಂದ 3 ಮಕ್ಕಳನ್ನು ಹೊಂದಬೇಕು

ಪಾಕ್ ಮೂಲದ ಸೀಮಾ ಹೈದರ್ ಹೇಳಿಕೆ!



ನವದೆಹಲಿ, ಏ.9– ಭಾರತದಲ್ಲಿರುವ ಹಿಂದೂಗಳು ಕನಿಷ್ಠ 2 ರಿಂದ ಮೂರು ಮಕ್ಕಳನ್ನು ಹೊಂದಬೇಕು ಎಂದು ಪಾಕಿಸ್ತಾನದಿಂದ ಭಾರತಕ್ಕೆ ಬಂದಿರುವ ಸೀಮಾ ಹೈದರ್ ಹೇಳಿದ್ದಾರೆ.

ಸಂದರ್ಶನವೊಂದರಲ್ಲಿ ಮಾತನಾಡುತ್ತಾ ಮಕ್ಕಳ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡ ಸೀಮಾ ಹೈದರ್, ಪ್ರತಿ ಹಿಂದೂ ಕುಟುಂಬವು ಕನಿಷ್ಠ ಎರಡರಿಂದ ಮೂರು ಮಕ್ಕಳನ್ನು ಹೊಂದಿರಬೇಕು. ಸಣ್ಣ ಕುಟುಂಬದ ಗಾತ್ರಗಳು ಜನ ಸಂಖ್ಯಾ ಸಮತೋಲನದ ಮೇಲೆ ಪರಿಣಾಮ ಬೀರಬಹುದು ಎಂದು ಆಕೆ ಪ್ರತಿಪಾದಿಸಿದ್ದಾರೆ.

ದೇಶದಲ್ಲಿ ಅನೇಕ ಜನರು ಒಂದು ಅಥವಾ ಎರಡು ಮಕ್ಕಳನ್ನು ಮಾತ್ರ ಹೊಂದಲು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಇದು ನನ್ನ ಪ್ರಕಾರ, ಹಿಂದೂ ಜನಸಂಖ್ಯೆಯಲ್ಲಿ ಕುಸಿತಕ್ಕೆ ಕಾರಣವಾಗುತ್ತಿದೆ ಎಂದು ಸೀಮಾ ಹೇಳಿದ್ದಾರೆ. ಅಂತೆಯೇ ಇತರೆ ಸಮುದಾಯಗಳ ಜನನ ಪ್ರಮಾಣ ಹೆಚ್ಚಾಗುತ್ತಿರುವ ಕುರಿತು ಮಾತನಾಡಿದ ಸೀಮಾ, ಹಿಂದೂಗಳಲ್ಲಿನ ಜನನ ಪ್ರಮಾಣ ಕುಸಿತವೇ ಹಿಂದೂಗಳ ಸಂಖ್ಯೆ ಕ್ಷೀಣಿಸಲು ಕಾರಣವಾಗುತ್ತದೆ. ಇದು ಕಾಲಾ ನಂತರದಲ್ಲಿ ಅಂತರವು ಹೆಚ್ಚಾಗಬಹುದು. ಇತರರು ದೊಡ್ಡ ಕುಟುಂಬಗಳನ್ನು ಹೊಂದುವುದನ್ನು ಪರಿಗಣಿಸಬೇಕು ಎಂದು ದೊಡ್ಡ ಕುಟುಂಬಗಳನ್ನು ಸೀಮಾ ಪ್ರೋತ್ಸಾಹಿಸಿದರು.

ಅಂತೆಯೇ ತಮ್ಮ ಸ್ವಂತ ಕುಟುಂಬವನ್ನು ಇದೇ ವೇಳೆ ಉಲ್ಲೇಖಿಸಿದ ಸೀಮಾ, ನಾವು ಆರು ಸನಾತನ ಮಕ್ಕಳನ್ನು ನೀಡಿದ್ದೇವೆ ಎಂದು ಹೇಳಿ, ಇತರರು ದೊಡ್ಡ ಕುಟುಂಬಗಳನ್ನು ಹೊಂದುವ ಬಗ್ಗೆ ಯೋಚಿಸುವಂತೆ ಪ್ರೋತ್ಸಾಹಿಸಿದರು.

ವಿವಿಧ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕುಟುಂಬಗಳು ಮೂರು ಮಕ್ಕಳನ್ನು ಹೊಂದಬೇಕೆಂದು ಪ್ರತಿಪಾದಿಸಿದ್ದ ಮೋಹನ್ ಭಾಗವತ್ ಅವರು ಈ ಹಿಂದೆ ಮಾಡಿದ್ದ ಇದೇ ರೀತಿಯ ಹೇಳಿಕೆಗಳ ಹಿನ್ನೆಲೆಯಲ್ಲಿ ಅವರ ಹೇಳಿಕೆ ಬಂದಿದೆ.

ಅಂದಹಾಗೆ ಪಾಕಿಸ್ತಾನದಿಂದ ನೇಪಾಳ ಮೂಲಕ ಭಾರತಕ್ಕೆ ಪ್ರಸ್ತುತ ತನ್ನ ಪತಿ ಸಚಿನ್ ಮೀನಾ ಅವರೊಂದಿಗೆ ಗ್ರೇಟರ್ ನೋಯ್ಡಾದಲ್ಲಿ ವಾಸಿಸುತ್ತಿರುವ ಸೀಮಾ ಹೈದರ್, ತಮ್ಮ ವೈಯಕ್ತಿಕ ಕಥೆಗಾಗಿ ಸಾರ್ವಜನಿಕರ ಗಮನ ಸೆಳೆದಿದ್ದಾರೆ. ಇತ್ತೀಚೆಗೆ ಅವರು ತಮ್ಮ ಆರನೇ ಮಗುವಿಗೆ ಜನ್ಮ ನೀಡಿದ್ದರು, ಅವರ ಹೇಳಿಕೆಗಳು ಸಾಮಾಜಿಕ ಮತ್ತು ರಾಜಕೀಯ ವಲಯಗಳಲ್ಲಿ ಚರ್ಚೆಗೆ ಕಾರಣವಾಗಿದೆ.

ಸರ್ಕಾರಿ ಕಚೇರಿಗಳಲ್ಲಿ 'ಲಂಚ ಕೊಡಬೇಡಿ' ಫಲಕ ಅಳವಡಿಕೆ ಕಡ್ಡಾಯ

ರಾಜ್ಯ ಸರ್ಕಾರ ಆದೇಶ

ಬೆಂಗಳೂರು: ರಾಜ್ಯದ ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರ ತಡೆಯಲು ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ. ಸರ್ಕಾರದ ಎಲ್ಲಾ ಕಚೇರಿಗಳಲ್ಲೂ 'ಲಂಚ ಕೊಡಬೇಡಿ' ಎಂಬ ಫಲಕಗಳನ್ನು ಅಳವಡಿಸುವಂತೆ ಸೂಚನೆ ನೀಡಿದೆ.

ಈ ಕುರಿತು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಸೂಚನೆ ನೀಡಿದ್ದು, ಅದರಂತೆ ಸರ್ಕಾರಿ ಕಚೇರಿಗಳಲ್ಲಿ ಲಂಚದ ಸಮಸ್ಯೆಯನ್ನು ತಡೆಯಲು ಹಾಗೂ ಪಾರದರ್ಶಕತೆ ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ.

ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲೂ ಲಂಚ ಕೊಡಬೇಡಿ ಎಂಬ ಫಲಕ ಅಳವಡಿಕೆ ಕಡ್ಡಾಯವಾಗಿದ್ದು, ಫಲಕದಲ್ಲಿ ಯಾವುದೇ ಸರ್ಕಾರಿ ನೌಕರ ಲಂಚ ಕೇಳಿದರೆ ಏನು ಮಾಡಬೇಕು ಎಂಬ ಮಾಹಿತಿ, ಲೋಕಾಯುಕ್ತದ ಸಹಾಯವಾಣಿ ಸಂಖ್ಯೆಯನ್ನು ಪ್ರದರ್ಶಿಸಬೇಕೆಂದು ಸೂಚನೆ ನೀಡಿದ್ದಾರೆ.

ಫಲಕದಲ್ಲಿ ಲಂಚ ಕೊಡಬೇಡಿ. ಈ ಕಚೇರಿಯ ಯಾರಾದರೂ ಲಂಚ ಕೇಳಿದರೆ ಅಥವಾ ಭ್ರಷ್ಟಾಚಾರ ಕುರಿತು ಮಾಹಿತಿ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಥವಾ ಕರ್ನಾಟಕ ಲೋಕಾಯುಕ್ತಕ್ಕೆ ದೂರು ನೀಡಬಹುದು ಎಂಬ ಸಂದೇಶ ಇರಬೇಕು ಎಂದು ಸೂಚಿಸಲಾಗಿದೆ. ಕರ್ನಾಟಕ ಆಡಳಿತ ಸುಧಾರಣಾ ಸಮಿತಿ–2 ಶಿಫಾರಸುಗಳಂತೆ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಲಂಚ ವಿರೋಧಿ ಸಂದೇಶಗಳನ್ನು ಹಾಕುವ ಮೂಲಕ ಕಚೇರಿಗಳಲ್ಲಿ ಪಾರದರ್ಶಕತೆ ತರಲು ಸರ್ಕಾರ ಮುಂದಾಗಿದೆ.

ಇದೇ ವೇಳೆ, ಎಲ್ಲಾ ಇಲಾಖೆ ಮುಖ್ಯಸ್ಥರು, ಕಾರ್ಯದರ್ಶಿಗಳು ಮತ್ತು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ತಮ್ಮ ಕಚೇರಿಗಳಲ್ಲಿ ಲೋಕಾಯುಕ್ತ ಮುಖ್ಯ ಕಚೇರಿ ಹಾಗೂ ಜಿಲ್ಲಾ ಕಚೇರಿಗಳ ದೂ.ಸಂಖ್ಯೆ, ವಿಳಾಸ, ಇಮೇಲ್ ಸೇರಿದಂತೆ ಸಂಪೂರ್ಣ ವಿವರಗಳನ್ನು ಒಳಗೊಂಡ ಮತ್ತೊಂದು ಫಲಕವನ್ನು ಅಳವಡಿಸಬೇಕು ಎಂದು ಸೂಚಿಸಲಾಗಿದೆ. ಈ ನಿಯಮವು ಎಲ್ಲಾ ಸರ್ಕಾರಿ ಕಚೇರಿಗಳು, ಮಂಡಳಿಗಳು, ನಿಗಮಗಳು ಮತ್ತು ಅನುದಾನಿತ ಸಂಸ್ಥೆಗಳಿಗೆ ಅನ್ವಯಿಸುತ್ತದೆ ಎಂದು ತಿಳಿಸಲಾಗಿದೆ.

ಏ.30ರಿಂದ ದ್ವಿತೀಯ ಪಿಯು ಪರೀಕ್ಷೆ–2

ಮೈಸೂರು, ಏ.9– ದ್ವಿತೀಯ ಪಿಯುಸಿ ಎರಡನೇ ಪರೀಕ್ಷೆ(ಪರೀಕ್ಷೆ–2) ಏಪ್ರಿಲ್ 30ರಿಂದ ಮೇ 13ರವರೆಗೆ ನಡೆಯಲಿದೆ.

ಈ ಪರೀಕ್ಷೆಯಲ್ಲಿ ತಮ್ಮ ಫಲಿತಾಂಶವನ್ನು ಸುಧಾರಿಸಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಆದರೆ, ಈ ಬಾರಿ ಮೂರನೇ ಪರೀಕ್ಷೆ ನಡೆಸುವುದಿಲ್ಲ.

ಪರೀಕ್ಷೆ–2ರ ವೇಳಾಪಟ್ಟಿ: ಏಪ್ರಿಲ್ 30–ಕನ್ನಡ, ಅರೇಬಿಕ್. ಮೇ 2– ಐಚ್ಛಿಕ ಕನ್ನಡ, ತರ್ಕಶಾಸ್ತ್ರ, ರಸಾಯನಿಕ ಶಾಸ್ತ್ರ. ಮೇ 4 – ಇಂಗ್ಲೀಷ್. ಮೇ 5– ವ್ಯವಹಾರ ಅಧ್ಯಯನ, ಭೌತಶಾಸ್ತ್ರ, ಶಿಕ್ಷಣ ಶಾಸ್ತ್ರ. ಮೇ 6– ಅರ್ಥಶಾಸ್ತ್ರ, ಜೀವಶಾಸ್ತ್ರ. ಮೇ 7– ಇತಿಹಾಸ, ಗಣಿತ, ಗೃಹ ವಿಜ್ಞಾನ. ಮೇ 8– ರಾಜ್ಯಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗಣಕ ವಿಜ್ಞಾನ. ಮೇ 9– ಹಿಂದಿ. ಮೇ 11–ಸಮಾಜಶಾಸ್ತ್ರ, ಸಂಖ್ಯಾಶಾಸ್ತ್ರ. ಮೇ 12–ಭೂಗೋಳ ಶಾಸ್ತ್ರ, ಮನಃಶಾಸ್ತ್ರ, ಭೂಗರ್ಭಶಾಸ್ತ್ರ, ಮೂಲ ಗಣಿತ. ಮೇ 13 ಬೆಳಗ್ಗೆ– ತಮಿಳು. ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್. ಮಧ್ಯಾಹ್ನ– ಹಿಂದೂಸ್ತಾನಿ ಸಂಗೀತ, ಎಲೆಕ್ಟ್ರಾನಿಕ್ಸ್ ಮತ್ತು ಯಂತ್ರಾಂಶ, ಉಡುಪುಗಳ ತಯಾರಿಕೆ ಮತ್ತು ಗೃಹೋಪಯೋಗಿ ವಸ್ತುಗಳು, ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೋಮೊಬೈಲ್, ಆರೋಗ್ಯ ರಕ್ಷಣೆ, ಬ್ಯೂಟಿ ಅಂಡ್ ವೆಲ್‌ನೆಸ್(ಮಧ್ಯಾಹ್ನ 2ರಿಂದ ಸಂಜೆ 4.15).

ನಾಳೆ ಸೈನ್ಸ್ ಸಂಜೆ

ಮೈಸೂರು: ಏ.11 ರಂದು ಸಂಜೆ 6.30 ರಿಂದ 7.30 ರವರೆಗೆ ಸುರುಚಿ ರಂಗಮನೆಯಲ್ಲಿ ಸೈನ್ಸ್ ಸಂಜೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಬೆಂಗಳೂರಿನ ಟಿಐ ಎಫ್‌ಆರ್ ಅಂತರರಾಷ್ಟ್ರೀಯ ಸೈದ್ಧಾಂತಿಕ ವಿಜ್ಞಾನಗಳ ಕೇಂದ್ರದ ಸಹ ಪ್ರಾಧ್ಯಾಪಕ ವಿಜಯ ಕುಮಾರ್ ಕೃಷ್ಣಮೂರ್ತಿ ಜೀವ ಮತ್ತು ಫಿಸಿಕ್ಸ್ ವಿಷಯ ಕುರಿತು ಮಾತನಾಡುವರು.

ಸದ್ವಿದ್ಯಾ ಸೆಮಿ–ರೆಸಿಡೆನ್ಷಿಯಲ್ ಪಿಯು ಕಾಲೇಜಿಗೆ ಶೇ.97.89 ರಷ್ಟು ಫಲಿತಾಂಶ



ಮೈಸೂರಿನ ವಿಜಯನಗರ 2ನೇ ಹಂತದ ಸದ್ವಿದ್ಯಾ ಸೆಮಿ–ರೆಸಿಡೆನ್ಷಿಯಲ್ ಪಿಯು ಕಾಲೇಜಿನಲ್ಲಿ ಗುರುವಾರ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉನ್ನತ ಸ್ಥಾನ ಗಳಿಸಿದ ವಿದ್ಯಾರ್ಥಿಗಳಾದ ದಿಶಾ, ಮಾರಿಯಾ ಶಾನ್ಸಿ, ಧನ್ವಿ, ಅಮೂಲ್ಯ ಪೂರ್ವಿಕಾ ಸೇರಿದಂತೆ ಇತರರನ್ನು ಅಭಿನಂದಿಸಲಾಯಿತು. (ಎಡದಿಂದ ನಿಂತವರು) ಸದ್ವಿದ್ಯಾ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಎಸ್.ಬಾಲಾಜಿ, ಕಾಲೇಜಿನ ಪ್ರಾಂಶುಪಾಲರಾದ ಡಾ.ಜಿ.ಆರ್.ಕವಿತಾ, ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಪ್ರೊ.ಎಂ.ಎಸ್. ನರಹರಿಬಾಬು, ಗೌರವ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್, ಜಂಟಿ ಕಾರ್ಯದರ್ಶಿ ಫಣೀಶ್, ಟ್ರಸ್ಟಿಗಳಾದ ಡಾ.ನಳಿನಿ ಚಂದನ್, ಡಾ.ವಾಶುಕಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಏ.9(ಪಿಎಂ)– ಮೈಸೂರಿನ ವಿಜಯನಗರ 2ನೇ ಹಂತದ ಸದ್ವಿದ್ಯಾ ಸೆಮಿರೆಸಿಡೆನ್ಷಿಯಲ್ ಪಿಯು ಕಾಲೇಜು ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ.97.89ರಷ್ಟು ಉನ್ನತ ಫಲಿತಾಂಶ ದಾಖಲಿಸಿದೆ.

ಕಾಲೇಜಿನ ವಿಜ್ಞಾನ ವಿಭಾಗದಲ್ಲಿ 310 ವಿದ್ಯಾರ್ಥಿಗಳ ಪೈಕಿ 302 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 70 ವಿದ್ಯಾರ್ಥಿಗಳೂ ತೇರ್ಗಡೆಯಾಗಿದ್ದಾರೆ. ಕಾಲೇಜಿನ ಉನ್ನತ ಶ್ರೇಣಿಯು ಶೇ.49.19ರಷ್ಟಿದೆ. ಅಲ್ಲದೆ, ಈ ಕಾಲೇಜಿನ ಡಿ.ಎಸ್.ಧನ್ವಿಯವರು ವಿಜ್ಞಾನ ವಿಭಾಗದಲ್ಲಿ ರಾಜ್ಯದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ.

ಕಾಲೇಜಿನ ವಿಜ್ಞಾನ ವಿಭಾಗದ ಎ.ಮರಿಯಾ ಶಾನ್ಸಿ ರಾಜ್ಯ ಮಟ್ಟದಲ್ಲಿ 4ನೇ ಸ್ಥಾನ ಗಳಿಸಿದ್ದಾರೆ. ಅದೇ ರೀತಿ ದಿಶಾ ವರ್ಮ ಐದನೇ ಸ್ಥಾನ, ಎ.ಅಮೂಲ್ಯ ಆರನೇ ಸ್ಥಾನ, ಎನ್.ಹೆಚ್.ಪೂರ್ವಿಕಾ 8ನೇ ಸ್ಥಾನ ಗಳಿಸಿದ್ದಾರೆ. ಮಾರಿಯಾ ಶಾನ್ಸಿ 596 (99.3), ದಿಶಾ ವರ್ಮ 595 (99.1), ಎ.ಅಮೂಲ್ಯ 593 (98.8), ಪೂರ್ವಿತಾ 592 (98.6) ಅಂಕ ಗಳಿಸಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಸಂಜನಾ ಸಿಂಹ ರಾಜ್ಯಕ್ಕೆ 9ನೇ ಸ್ಥಾನ ಗಳಿಸಿದ್ದಾರೆ. ಅದೇ ರೀತಿಯಲ್ಲಿ ವಿ.ಸಮರ್ಥ್ ಜೋಯಿಷ್ ರಾಜ್ಯ ಮಟ್ಟದಲ್ಲಿ 10ನೇ ಸ್ಥಾನ ಗಳಿಸಿದ್ದರೆ, ಜೆ.ಹೆಚ್.ಮನಿಷ್ ಕಾಲೇಜಿಗೆ ಟಾಪರ್ ಆಗಿದ್ದಾರೆ. ಸಂಜನಾ ಸಿಂಹ 592 (98.67), ವಿ.ಸಮರ್ಥ 591 (98.50), ಮನಿಷ್ 589 (98.1) ಅಂಕ ಗಳಿಸಿದ್ದಾರೆ.

ಸದ್ವಿದ್ಯಾ ಪಿಯು ಕಾಲೇಜಲ್ಲಿ ಶೇ.98 ತೇರ್ಗಡೆ

ಮೈಸೂರು,ಏ.9(ಪಿಎಂ)– ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಸದ್ವಿದ್ಯಾ ಕಾಂಪೋಸಿಟ್ ಪಿಯು ಕಾಲೇಜು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ.98ರಷ್ಟು ಫಲಿತಾಂಶ ದಾಖಲಿಸಿದೆ.

ಕಾಲೇಜಿನ ವಿಜ್ಞಾನ ವಿಭಾಗದಲ್ಲಿ 410 ವಿದ್ಯಾರ್ಥಿಗಳ ಪೈಕಿ 406 ಮಂದಿ ತೇರ್ಗಡೆ ಹೊಂದಿದ್ದಾರೆ. ಅದೇ ರೀತಿ ವಾಣಿಜ್ಯ ವಿಭಾಗದಲ್ಲಿ 134 ವಿದ್ಯಾರ್ಥಿಗಳ ಪೈಕಿ 129 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಾಲೇಜಿನ ದ್ವಿತೀಯ ಪಿಯು ಫಲಿತಾಂಶದಲ್ಲಿ ಉನ್ನತ ಶ್ರೇಣಿಯು ಶೇ.56.1ರಷ್ಟು ಇದೆ. 39.4ರಷ್ಟು ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಕಾಲೇಜಿನ ಕೆ.ಚಿತ್ರ ಸ್ಫೂರ್ತಿಯವರು ವಾಣಿಜ್ಯ ವಿಭಾಗದಲ್ಲಿ ರಾಜ್ಯದ ನಾಲ್ಕನೇ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಅಂತೆಯೇ ವಾಣಿಜ್ಯ ವಿಭಾಗದಲ್ಲಿ ಎಸ್.ಸಂಜನಾ, ಭಕ್ತಿ ಎ.ಜೈನ್, ರಿಯಾ ಪಿ.ಜೈನ್ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಸಂಜನಾ 595 (99.17), ಭಕ್ತಿ ಎ.ಜೈನ್ 592 (98.67), ರಿಯಾ ಪಿ.ಜೈನ್ 591 (98.50), ಅಂಕ ಗಳಿಸಿದ್ದಾರೆ. ಅಂತೆಯೇ ವಿಜ್ಞಾನ ವಿಭಾಗದಲ್ಲಿ ಎಂ.ಎನ್.ರಿಷಿತ್‌ಗೌಡ, ಆರ್.ಮಾನ್ಯ, ಅರುಣಿಮಾ ಸುನಿಲ್, ಎಂ.ವಿದ್ಯಾ, ಮಧು, ಎಂ.ಎಸ್.ರಘುನಂದನ್ ಅವರು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಎಂ.ಎನ್.ರಿಷಿತ್‌ಗೌಡ 591 (98.50), ಆರ್.ಮಾನ್ಯ 591 (98.50), ಅರುಣಿಮಾ ಎಂ.ಸುನೀಲ್ 591 (98.50), ಎಂ.ವಿದ್ಯಾ 590 (98.33), ಮಧು 587 (97.83), ರಘುನಂದನ್ 586 (97.67) ಅಂಕ ಗಳಿಸಿದ್ದಾರೆ. ಕಾಲೇಜು ಆವರಣದಲ್ಲಿ ಗುರುವಾರ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ ಹಾಗೂ ಅಧ್ಯಾಪಕ ವರ್ಗದಿಂದ ಅಭಿನಂದಿಸಲಾಯಿತು.



ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಸದ್ವಿದ್ಯಾ ಕಾಂಪೋಸಿಟ್ ಪಿಯು ಕಾಲೇಜಿನಲ್ಲಿ ಗುರುವಾರ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ ಹಾಗೂ ಅಧ್ಯಾಪಕ ವರ್ಗದಿಂದ ಅಭಿನಂದಿಸಲಾಯಿತು.

ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳನ್ನು ರ್‍ಯಾಂಕಿನ ಕಣಜ ಎಂದು ಬಹಳ ವರ್ಷಗಳಿಂದ ಜನ ಗುರುತಿಸುತ್ತಿದ್ದಾರೆ. ಈ ವರ್ಷವೂ ನಮ್ಮ ವಿದ್ಯಾರ್ಥಿಗಳು ಅದನ್ನು ಮತ್ತೆ ಸಾಬೀತು ಮಾಡಿದ್ದಾರೆ. ನಮ್ಮ ಎರಡೂ ಸಂಸ್ಥೆಗಳ ಕಾಲೇಜುಗಳಲ್ಲಿ ಈ ವರ್ಷ 13 ರ್‍ಯಾಂಕ್ ಬಂದಿದೆ. ಸದ್ವಿದ್ಯಾ ಕಾಂಪೋಸಿಟ್ ಪಿಯು ಕಾಲೇಜಿನಲ್ಲಿ 7 ರ್‍ಯಾಂಕ್, ಸದ್ವಿದ್ಯಾ ಸೆಮಿ–ರೆಸಿಡೆನ್ಷಿಯಲ್ ಪಿಯು ಕಾಲೇಜಿನಲ್ಲಿ 6 ರ್‍ಯಾಂಕ್ ಬಂದಿದೆ. ನಮ್ಮ ಅಧ್ಯಾಪಕ ವೃಂದ ಸಮರ್ಥನೀಯವಾಗಿ ಕೆಲಸ ಮಾಡುತ್ತಿರುವುದು ಈ ಶೈಕ್ಷಣಿಕ ಸಾಧನೆಗೆ ಕಾರಣ. ಮುಂದೆ ಸಿಇಟಿಯಲ್ಲೂ ಉನ್ನತ ರ್‍ಯಾಂಕ್ ಗಳಿಸುವ ಭರವಸೆ ಹೊಂದಿದ್ದೇವೆ.

–ಪ್ರೊ.ಎಂ.ಎಸ್.ಕೆ.ನರಹರಿ ಬಾಬು, ಅಧ್ಯಕ್ಷರು, ಕಾವೇರಿ ಚಾರಿಟಬಲ್ ಟ್ರಸ್ಟ್ ಹಾಗೂ ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು, ಮೈಸೂರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಗುಂಡ ಗಂಡಭೇರುಂಡ ಎಂದರೆ ಏನು?
ಗುಂಡ : ಅದು ತುಂಬಾ ಸುಲಭ ಮೇಡಂ.
ಹೆಂಡತಿಯಿಂದ ದೂರ ಕುಳಿತು ಒಬ್ಬನೇ ಊಟ ಮಾಡುವ ಗಂಡ. ಗಂಡ ಬೇರೆ ಉಂಡ !!

ಮೈಸೂರು ಮಿತ್ರ

ಶುಕ್ರವಾರ, ಏಪ್ರಿಲ್ 10, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ವಿರೋಧ ಅನ್ನುವುದು ಇಲ್ಲದೇ ಹೋದರೆ ವ್ಯಕ್ತಿ ಪರಿಪೂರ್ಣನಾಗಲಾರ. ಗಾಳಿಪಟ ಅಂಬರಕ್ಕೇರಬೇಕಿದ್ದರೆ ಗಾಳಿಯ ವಿರುದ್ಧವೇ ಸಾಗಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹನುಮಂತಾನೆ ಬಾಲ ಕಡಿತಿರುವಾಗ, ಇವನ್ಯಾವನೋ ಶಾವಿಗೆ ಕೇಳಿದನಂತೆ.

ನಿಮ್ಮ ಪತ್ರಗಳು

ನಂಜನಗೂಡು ಕೆಹೆಚ್‌ಬಿ ಕಾಲೋನಿ ರಸ್ತೆಗಳಿಗೆ ಕಾಯಕಲ್ಪ ಯಾವಾಗ?

ಮಾನ್ಯರೆ,

ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ತಾಲೂಕು ಮಟ್ಟದಲ್ಲಿ ಕರ್ನಾಟಕ ಗೃಹ ಮಂಡಳಿ (ಕೆಎಚ್‌ಬಿ)ಯಿಂದ ಮನೆಗಳನ್ನು ನಿರ್ಮಾಣ ಮಾಡಿ ಹಂಚಿಕೆ ಮಾಡಿದ್ದು ನಂಜನಗೂಡಿನಲ್ಲಿ. ಬಹುಶ ಎಲ್ಲಾ ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಿಗೂ ಇದೇ ನಿದರ್ಶನ. ಇದಾದ ನಂತರವೇ ರಾಜ್ಯದ ವಿವಿಧ ತಾಲೂಕು, ಜಿಲ್ಲಾ ಕೇಂದ್ರಗಳಿಗೂ ಕರ್ನಾಟಕ ಗೃಹ ಮಂಡಳಿ (ಕೆ.ಎಚ್.ಬಿ ಕಾಲೋನಿ) ಯಿಂದ ಮನೆಗಳು ನಿರ್ಮಾಣಗೊಂಡಿವೆ.

ಇಷ್ಟೆಲ್ಲಾ ಇತಿಹಾಸ ಇರುವಂತಹ ನಂಜನಗೂಡಿನ ಹೌಸಿಂಗ್ ಬೋರ್ಡ್ ಕಾಲೋನಿಗೆ ಸಂಪರ್ಕ ಕೊಂಡಿಯಾಗಿರುವ ಮುಖ್ಯ ರಸ್ತೆಗೆ ಈಗ ಕಾಯಕಲ್ಪವಾಗಬೇಕಿದೆ. ಏಕೆಂದರೆ ಅದು ಅಷ್ಟರಮಟ್ಟಿಗೆ ಹದಗೆಟ್ಟಿದೆ.

ವಾರ್ಡ್ ನಂಬರ್ 21, 22 ಹಾಗೂ 23ಕ್ಕೆ ಸಂಬಂಧಿಸಿದಂತೆ ನಂಜನಗೂಡಿನ ಗ್ರಾಮಾಂತರ ಪೊಲೀಸ್ ಠಾಣೆ ಎದುರುಗಡೆಯ ಮುಖ್ಯ ರಸ್ತೆ ಇದಾಗಿದ್ದು, ತೀರಾ ಅದೋಗತಿಯಲ್ಲಿದೆ. ವಾಹನ ಸಂಚಾರ ಬಳಕೆಗೆ ಹಾಗೂ ಪಾದಚಾರಿಗಳು ನಡೆದುಕೊಂಡು ಹೋಗುವುದಕ್ಕೂ ಯೋಗ್ಯವಲ್ಲದಂತಾಗಿದೆ. ಬೈಕ್‌ನಲ್ಲಿ ಹೋಗುವಾಗ ಕೆಲವರು ಬಿದ್ದು ಗಾಯ ಮಾಡಿಕೊಂಡಿರುವ ಉದಾಹರಣೆಗಳು ಇವೆ. ಕಳೆದ ಕೆಲವು ವರ್ಷಗಳಿಂದ ಸಾಕಷ್ಟು ಬಾರಿ ಈ ವಾರ್ಡ್‌ಗಳನ್ನು ಪ್ರತಿನಿಧಿಸಿದ ಸದಸ್ಯರು ರಸ್ತೆಯ ದುರಸ್ತಿ ಕಾರ್ಯ ಅಥವಾ ಮರು ಡಾಂಬರೀಕರಣಕ್ಕೆ ಸಂಬಂಧಿಸಿದಂತೆ ಸಾಕಷ್ಟು ಮನವಿ ಪತ್ರಗಳನ್ನು ಈ ಹಿಂದಿನ ಅವಧಿಗಳಲ್ಲಿ ಶಾಸಕರಾಗಿದ್ದ ಕಳಲೆ ಕೇಶವಮೂರ್ತಿ ಅನಂತರ ಹರ್ಷವರ್ಧನ್ ಅವರ ಕಾಲಾವಧಿಯಲ್ಲಿ ಈಗ ಪ್ರಸ್ತುತ ಶಾಸಕರಾಗಿರುವ ದರ್ಶನ್ ಧ್ರುವನಾರಾಯಣ್ ಅವರಿಗೂ ಮನವಿ ಸಲ್ಲಿಸಲಾಗಿದ್ದರೂ ಯಾವುದೇ ಉಪಯೋಗಕ್ಕೆ ಬಾರದೆ ಪರಿಸ್ಥಿತಿ ಹೇಳತೀರದಾಗಿದೆ.

ಸದ್ಯ, ನಗರಸಭಾ ಸದಸ್ಯರ ಅವಧಿ ಮುಕ್ತಾಯವಾಗಿದ್ದು, ಮತ್ತೆ ವಾರ್ಡ್ ಚುನಾವಣೆ ನಡೆದು ಸದಸ್ಯರ ಆಯ್ಕೆ ಆದ ನಂತರವಾದರೂ ಈ ರಸ್ತೆ ಅಭಿವೃದ್ಧಿ ಕಾಣಬೇಕಾಗಿದೆ! ಅತೀ ಹೆಚ್ಚಿನ ವಿವಿಧ ಇಲಾಖೆಗಳ ಸರ್ಕಾರಿ ಅಧಿಕಾರಿಗಳು, ರಾಜಕೀಯ ನಾಯಕರು, ಸುಶಿಕ್ಷಿತರು, ಖಾಸಗಿ ಕಂಪನಿಗಳ ನೌಕರರು ವಾಸ ಮಾಡುವಂತಹ ಪಟ್ಟಣದ ಪ್ರಮುಖ ಬಡಾವಣೆಯೇ ಕೆ.ಎಚ್.ಬಿ ಕಾಲೋನಿ ಆಗಿದ್ದು, ಕಳೆದ ಹತ್ತಾರು ವರ್ಷಗಳಿಂದ ರಸ್ತೆ ಸುಗಮ ಸಂಚಾರಕ್ಕೆ ಅನಾನುಕೂಲವಾಗಿದ್ದರೂ ಸರಿಪಡಿಸಲು ಯಾರು ಮುಂದೆ ಬಾರದಿದ್ದು ಅತ್ಯಂತ ವಿಷಾದನೀಯ. ಇನ್ನಾದರೂ, ಶಾಸಕ ದರ್ಶನ ಧ್ರುವನಾರಾಯಣ ವಾಸ್ತವತೆಯನ್ನು ಅರಿತು ಈ ಮುಖ್ಯ ರಸ್ತೆ ಸರಿಪಡಿಸಲು ಮುಂದಾಗಬೇಕಿದೆ.

– ಅನಿಲ್ ಕುಮಾರ್, ನಂಜನಗೂಡು.

ಅಪರಾಧ ಮತ್ತು ಶಿಕ್ಷೆ!

ಮಾನ್ಯರೆ,

ತಮಿಳುನಾಡಿನ ತೂತುಕುಡಿ ಜಿಲ್ಲೆಯ ಸಾತಂಕುಳಂ ಪೊಲೀಸ್ ಠಾಣೆಯ ಲಾಕಪ್ ಡೆತ್ ಪ್ರಕರಣದಲ್ಲಿ ಒಂಬತ್ತು ಪೊಲೀಸರಿಗೆ ನ್ಯಾಯಾಲಯವು ಗಲ್ಲು ಶಿಕ್ಷೆ ವಿಧಿಸಿದೆ! ಕೊಲೆ ಮಾಡಿದ ಅಪರಾಧಿಗಳಿಗೆ ನ್ಯಾಯಾಲಯವು ಶಿಕ್ಷೆ ವಿಧಿಸುವುದು ಸೇಡಿನ ಕ್ರಮವಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ದೊರಕುತ್ತದೆ ಎಂಬ ಭಯದಿಂದ ಬೇರೆ ಯಾರೂ ಇಂತಹ ಅಪರಾಧಗಳನ್ನು ಮಾಡದಿರಲಿ. ಆ ಮೂಲಕ ಸಮಾಜದಲ್ಲಿ ಶಾಂತಿ ನೆಲೆಸಲಿ ಎಂಬ ಕಾರಣಕ್ಕೆ ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗುತ್ತದೆ!!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಯುದ್ಧ ನಿಲ್ಲಲಿ, ಎಲ್ಲವೂ ಮೊದಲಿನಂತೆ ಆಗಲಿ

ಮಾನ್ಯರೆ,

ನಾವು ಚಿಕ್ಕಂದಿನಲ್ಲಿ ಓದುತ್ತಿದ್ದಾಗ ಲೋಪ ಸಂಧಿ, ಆಗಮ ಸಂಧಿ, ಗುಣ ಸಂಧಿ, ಸವರ್ಣ ಧೀರ್ಘ ಸಂಧಿ ಅಂತ ಉರು ಹೊಡೆದು ಕಷ್ಟ ಪಡ್ತಾ ಇದ್ವಿ. ಆದರೆ ಈಗ ಕಷ್ಟ ಪಡುತ್ತಾ ಇರುವುದು 'ಹಾರ್ಮುಜ್ ಜಲಸಂಧಿ'ಯಿಂದ. ಅಮೆರಿಕ–ಇಸ್ರೇಲ್–ಇರಾನ್ ಯುದ್ಧದ ಪರಿಣಾಮವಾಗಿ ಈ 'ಸಂಧಿ' ಯಲ್ಲಿ ಎಲ್ಲವೂ 'ಬಂದಿ' ಆಗಿದೆ. ಇದರಿಂದ ಭಾರತವೂ ಸೇರಿದಂತೆ ಅನೇಕ ರಾಷ್ಟ್ರಗಳಿಗೆ supply ಆಗುತ್ತಿದ್ದ Oil & Gas/LPG ಮೇಲೆ ನೇರ ಪರಿಣಾಮ ಬೀರಿ ಎಲ್ಲರೂ ಒದ್ದಾಡುವಂತಾಯಿತು.

ಸ್ವಪ್ರತಿಷ್ಠೆ, ಹಠ, ದುರಾಸೆ, ದುರಹಂಕಾರ, ಉಡಾಫೆಯಿಂದ ಯುದ್ದೋನ್ಮಾದದಲ್ಲಿ ತೇಲಿ ಅನೇಕರ ಜೀವ ತೆಗೆದು, ಅನೇಕರ ಜೀವನ ಹಾಳು ಮಾಡಿ ಎಲ್ಲೆಡೆ ಅಶಾಂತಿ, ಹಿಂಸೆಗೆ ಕಾರಣೀಕರ್ತರಾದ ಈ ದೇಶದ ನಾಯಕರ ಅಟ್ಟಹಾಸ ನೋಡಿ ನೋಡಿ ಬೇಜಾರಾಗಿ ಹೋಗಿದೆ. ಇರಾನಿನ 'ನಾಗರೀಕತೆ' ಮುಗಿಸಿಬಿಡುತ್ತೇನೆ ಎಂದು 'ಕೆಂಪು' ಮುಖ ಮಾಡಿ ಹೇಳಿಕೆ ಕೊಟ್ಟಿದ್ದ 'ಟ್ರಂಪ್' ಎಂಬ 'ಅನಾಗರಿಕ' ಕಡೆಗೂ ಎರಡು ವಾರ ಕದನ ವಿರಾಮ ಘೋಷಿಸಿದ್ದು ಸದ್ಯಕ್ಕೆ ನಿಟ್ಟುಸಿರು ಬಿಡುವ ವಿಷಯ. ಇರಾನ್ ಕೂಡ ಸುಮ್ಮನೆ 'ಇರೋಣ' ಅನ್ನುವ ತರ ಸುಮ್ಮನಾಗಿದೆ. ನಾವೇ ಗೆದ್ದೆವು ಅಂತ ಇಬ್ಬರೂ ಬೀಗುತ್ತಿರುವಂತಿದೆ. 'ಬೇಲಿಗೂಟಕ್ಕೆ ಓತಿಕ್ಯಾತ ಸಾಕ್ಷಿ' ಎಂಬ ಗಾದೆಯಂತೆ ಪಾಕಿಸ್ತಾನದ ಮಧ್ಯಸ್ಥಿಕೆಯಿಂದ ಕದನ ವಿರಾಮಕ್ಕೆ ಒಪ್ಪಿದ್ದು ಅಂತ ಟ್ರಂಪ್ ಹೇಳುತ್ತಿದ್ದಾರೆ. ಇದರ ಮಧ್ಯೆ ಇಸ್ರೇಲ್ ಇನ್ನು ಏನು ಮಾಡುತ್ತೋ ಗೊತ್ತಿಲ್ಲ. ಯುದ್ಧದಲ್ಲಿ ಗೆದ್ದವರು ಸೋತಂತೆ– ಸೋತವರು ಸತ್ತಂತೆ ಅಂತ ಒಂದು ಮಾತಿದೆ. ಅದು ನಿಜ. ಗೆದ್ದವರು, ಸೋತವರು ಸುಮ್ಮನೆ ಇರುವವರು...ಯಾರಿಗೂ ಯುದ್ದ ಒಳ್ಳೆಯದಲ್ಲ. ಈ ಯುದ್ಧ ಇಲ್ಲಿಗೆ ಮುಗಿಯಲಿ. ಎಲ್ಲವೂ ಮೊದಲಿನಂತೆ ಆಗಲಿ.


–ರಾಘವೇಂದ್ರ ಜೋಯಿಸ್, ಮೈಸೂರು

ಕಾರ್ಪೋರೇಟ್ ಸಂಸ್ಥೆಗಳು ನೈತಿಕತೆ ಉಳಿಸಿಕೊಳ್ಳಲಿ

ಮಾನ್ಯರೆ,

ತಂತ್ರಜ್ಞಾನ ವಲಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಸರಣಿ ವಜಾ ಪ್ರಕ್ರಿಯೆಗಳು ಕಳವಳಕಾರಿ. ವರ್ಷವೊಂದರಲ್ಲೇ 50,000 ಕ್ಕೂ ಹೆಚ್ಚು ಉದ್ಯೋಗಿಗಳು ಕೆಲಸ ಕಳೆದುಕೊಂಡಿರುವುದು ಕೇವಲ ಅಂಕಿ–ಅಂಶವಲ್ಲ ಸಾವಿರಾರು ಕುಟುಂಬಗಳ ಅಸ್ಥಿರತೆ. ಕಂಪನಿಗಳು ಲಾಭದಲ್ಲಿದ್ದರೂ ವೆಚ್ಚ ಕಡಿತಕ್ಕಾಗಿ ಅನುಭವಿಗಳನ್ನು ಕೈಬಿಡುವುದು ನೈತಿಕವಾಗಿ ಸರಿಯಲ್ಲ.ಕೃತಕ ಬುದ್ಧಿಮತ್ತೆ ಬೆಳವಣಿಗೆಯನ್ನು ಉದ್ಯೋಗ ಕಸಿದುಕೊಳ್ಳುವ ಅಸ್ತ್ರವಾಗಿ ಬಳಸುವ ಬದಲು ಅದನ್ನು ಮಾನವ ಶಕ್ತಿಯ ಪೂರಕವಾಗಿ ಬಳಸಿಕೊಳ್ಳಬೇಕು. ನೈತಿಕವಾಗಿ ಕಂಪನಿಗಳು ಉದ್ಯೋಗಿಗಳಿಗೆ ಮರುಕೌಶಲ ತರಬೇತಿ ನೀಡಲು ಬಜೆಟ್ ಮೀಸಲಿಡಬೇಕು. ಸರ್ಕಾರವು ಖಾಸಗಿ ವಲಯದ ಉದ್ಯೋಗ ಭದ್ರತೆಗೆ ಕಟ್ಟುನಿಟ್ಟಿನ ಕಾನೂನು ರೂಪಿಸಬೇಕು. ತಂತ್ರಜ್ಞಾನವು ಮನುಷ್ಯನ ಪ್ರಗತಿಗಿರಬೇಕೇ ಹೊರತು ಅವನ ಅವನತಿಗಲ್ಲ ಎಂಬುದು ಕಾರ್ಪೋರೇಟ್ ಸಂಸ್ಥೆಗಳಿಗೆ ಅರ್ಥವಾಗಲಿ.

–ಡಾ. ಎಚ್.ಕೆ. ವಿಜಯಕುಮಾರ, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್


ಅನುಭಾವದ ಚಿಂತನೆಗಳು

ನೀವೇ ನಿಮ್ಮ ಬದುಕಿನ ನಿರ್ದೇಶಕರಾಗಿ...!

ಒಂದು ನಾಟಕ ನಡೆಯಬೇಕೆಂದರೆ, ಅಲ್ಲಿ ಮೂರು ರೀತಿಯ ಜನರ ಗುಂಪಿರುತ್ತದೆ. ಒಬ್ಬರು ಪ್ರೇಕ್ಷಕರು, ಇನ್ನೊಬ್ಬರು ನಟನೆ ಮಾಡುವವರು, ಮತ್ತೊಬ್ಬರು ನಾಟಕವನ್ನು ನಡೆಸುವ ನಿರ್ದೇಶಕರು ಹಾಗೂ ವೇದಿಕೆಯ ವಿನ್ಯಾಸಗಾರರು. ಇವರಲ್ಲಿ, ನಿರ್ದೇಶಕ ಈ ನಾಟಕವನ್ನು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿರುತ್ತಾನೆ ಮತ್ತು ಬೇರೆ ಎಲ್ಲರಿಗಿಂತಲೂ ಅದರಲ್ಲಿ ಹೆಚ್ಚು ತೊಡಗಿಸಿಕೊಂಡಿರುತ್ತಾನೆ. ಅವನು ನಾಟಕವನ್ನು ಕಲ್ಪಿಸಿಕೊಂಡ ಕಾರಣ, ಅದನ್ನು ಸೃಷ್ಟಿಸುತ್ತಾನೆ, ಮತ್ತು ಅದು ನಡೆಯುವಂತೆ ಮಾಡುತ್ತಾನೆ. ಇದರಲ್ಲಿ ನಿರ್ದೇಶಕನ ಪಾಲ್ಗೊಳ್ಳುವಿಕೆ ಬಹಳ ದೊಡ್ಡದಿರುತ್ತದೆ. ನಟರು ತಮ್ಮ ತಮ್ಮ ಪಾತ್ರಗಳನ್ನು ಮಾತ್ರ ಚೆನ್ನಾಗಿ ತಿಳಿದಿರುತ್ತಾರೆ–ಅವರು ನಾಟಕದ ಉಳಿದ ಭಾಗಗಳ ಬಗ್ಗೆ ತಿಳಿದಿರುವುದಿಲ್ಲ. ಪ್ರೇಕ್ಷಕರು ಆ ನಾಟಕದಲ್ಲಿನ ಯಾವುದನ್ನೂ ಸಹ ತಿಳಿದಿರುವುದಿಲ್ಲ. ಅವರು ಕೇವಲ ನಾಟಕದಲ್ಲಿ ಉಂಟಾಗುವ ಭಾವನೆಗಳು ಮತ್ತು ಇತರ ವಿಷಯಗಳನ್ನು ಮಾತ್ರ ಅರಿಯುತ್ತಾರೆ.

ನಾಟಕವು ನಡೆಯುತ್ತಿರುವಾಗ, ಬಹಳವಾಗಿ ಮೋಸಕ್ಕೊಳಗಾಗುವವರು ಪ್ರೇಕ್ಷಕರಾಗಿರುತ್ತಾರೆ, ಏಕೆಂದರೆ ಕೆಲವು ಸಮಯದ ನಂತರ, ಅವರು ಅದರಲ್ಲಿ ಯಾವ ರೀತಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆಂದರೆ, ಅಲ್ಲಿ ನಡೆಯುವುದೆಲ್ಲಾ ನಿಜವೆಂದು ನಂಬಲಾರಂಭಿಸುತ್ತಾರೆ. ಅವರಿಗೆ ನಾಟಕವು ಅವರ ಮಾನಸಿಕ ಮಟ್ಟದಲ್ಲಿ ಜರುಗುತ್ತಿರುತ್ತದೆ. ಅವರು ನಗುತ್ತಾರೆ, ಅಳುತ್ತಾರೆ ಮತ್ತು ವಿಭಿನ್ನ ರೀತಿಗಳಲ್ಲಿ ಪ್ರತಿಕ್ರಿಯಿಸುತ್ತಾರೆ. ಯಾವುದೇ ನಾಟಕದಲ್ಲಾಗಲಿ, ಕನಿಷ್ಠ ಮಟ್ಟದಲ್ಲಿ ತೊಡಗಿಸಿಕೊಂಡು ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಸಿಕ್ಕಿಹಾಕಿಕೊಳ್ಳುವವರು ಪ್ರೇಕ್ಷಕರೇ ಆಗಿರುತ್ತಾರೆ. ಅವರು ನಾಟಕದ ಮೂಲಕ ಹಾದು ಹೋಗುವ ಮತ್ತು ಅದನ್ನು ಅನುಭವಿಸುವ ರೀತಿಯಿಂದಾಗಿ ಅವರ ಸಿಲುಕಿಕೊಳ್ಳುವಿಕೆ ಅತಿಯಾಗಿರುತ್ತದೆ. ನಟರ ಸಂಗತಿ ಬೇರೆ. ಅವರು ಇಂದು ಒಂದು ಪಾತ್ರವನ್ನು ನಿರ್ವಹಿಸಬಹುದು, ನಾಳೆ ಮತ್ತೊಂದನ್ನು ಮಾಡಬಹುದು? ಅವರು ನಾಟಕದಲ್ಲಿ ತೊಡಗಿಸಿಕೊಳ್ಳುತ್ತಾರೆ ನಿಜ, ಆದರೆ ಕಡಿಮೆ ಸಿಕ್ಕಿಹಾಕಿಕೊಳ್ಳುತ್ತಾರೆ. ಅದೇ ಒಬ್ಬ ನಿರ್ದೇಶಕ, ಅತ್ಯಂತ ಹೆಚ್ಚು ತೊಡಗಿಸಿಕೊಂಡಿರುತ್ತಾನೆ ಆದರೆ ಕನಿಷ್ಠ ಸಿಕ್ಕಿಹಾಕಿಕೊಂಡಿರುತ್ತಾನೆ. ಅವನು ನಾಟಕವನ್ನು ನಡೆಸುತ್ತಿರುತ್ತಾನೆಯೇ ಹೊರತು ಅದಕ್ಕೆ ಅಂಟಿಕೊಳ್ಳುವುದಿಲ್ಲ.

ಹೇಗಿದ್ದರೂ ಈ ಜೀವನವೆನ್ನುವುದು ಒಂದು ನಾಟಕವೇ ಸರಿ. ಇದರಲ್ಲಿ ನೀವು ಹೊಂದಿರುವ ಅವಕಾಶಗಳು ಹೀಗಿವೆ. ನೀವೊಬ್ಬ ನಟನಾಗಿರಬಹುದು, ನಾಟಕದಲ್ಲಿ ಸಂಪೂರ್ಣವಾಗಿ ಮಗ್ನರಾದ ಪ್ರೇಕ್ಷಕರಲ್ಲೊಬ್ಬರಾಗಿರಬಹುದು, ಅಥವಾ ನೀವು ನಾಟಕವನ್ನು ರಚಿಸುತ್ತಿರುವ ಒಬ್ಬ ನಿರ್ದೇಶಕರಾಗಿರಬಹುದು. ಅಥವಾ, ನಿಮ್ಮ ಬಳಿ ಸಾಕಷ್ಟು ಜನ ಸಿಬ್ಬಂದಿ ಮತ್ತು ಪ್ರೇಕ್ಷಕ ವರ್ಗದವರು ಇಲ್ಲದೇ ಹೋದಲ್ಲಿ, ನೀವೇ ಎಲ್ಲಾ ಮೂರು ಪಾತ್ರಗಳನ್ನೂ ನಿರ್ವಹಿಸಬಹುದು. ಆದರೆ ನಿಮ್ಮೊಳಗಿನ ನಿರ್ದೇಶಕನ ಪಾತ್ರವು ಜೀವಂತವಾಗಿರುವುದಾದರೆ ಮಾತ್ರ, ನಿಮ್ಮ ನಾಟಕ ನಿಮಗೆ ಬೇಕಾದ ರೀತಿಯಲ್ಲಿ ಸಾಗುತ್ತದೆ – ಇಲ್ಲದಿದ್ದರೆ ಅದು ಅಂತ್ಯವಿಲ್ಲದ ಹಾಗೂ ನಿಯಂತ್ರಣವಿಲ್ಲದ ಒಂದು ನಾಟಕವಾಗುತ್ತದೆ ಅಷ್ಟೆ.



> “ಜೀವನದಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತಿರುವಾಗ, ಈ ಬದುಕೆನ್ನುವುದು ಕೇವಲ ಒಂದು ನಾಟಕ ಎನ್ನುವ ಸತ್ಯವನ್ನು ಅರ್ಥಮಾಡಿಕೊಂಡು, ಅದನ್ನು ಚೆನ್ನಾಗಿ ನಿರ್ವಹಿಸಬೇಕು. ಆದರೆ ನಿಮಗೆ ಈ ಬದುಕೆಂಬ ಸ್ಕ್ರಿಪ್ಟ್‌ನ ಮೇಲೆ ಯಾವುದೇ ನಿಯಂತ್ರಣವಿಲ್ಲದೇ ಹೋದರೆ, ಈ ನಾಟಕ ಯಾವುದೋ ಒಂದು ಹಂತದಲ್ಲಿ, ಒಂದಲ್ಲಾ ಒಂದು ರೀತಿಯಲ್ಲಿ ಅಸಹ್ಯಕ್ಕೆ ತಿರುಗುತ್ತದೆ? ಅದು ದುರ್ವರ್ತನೆಯಿಂದಾಗಬಹುದು, ರೋಗ, ಸಾವು, ಅಥವಾ ಇನ್ನಿತರ ವಿಕೋಪಗಳಿಂದ ಆಗಬಹುದು.

ನಿಮ್ಮ ಬಾಹ್ಯ ಪ್ರಪಂಚದಲ್ಲಿ ನಡೆಯುವ ನಾಟಕವನ್ನು ನೂರಕ್ಕೆ ನೂರರಷ್ಟು ನಿರ್ದೇಶಿಸಲು ನಿಮ್ಮಿಂದ ಸಾಧ್ಯವಿಲ್ಲ. ನಿಮ್ಮ "ಸ್ಕ್ರಿಪ್ಟ್" ಪ್ರಕಾರವಾಗಿ ನಟಿಸುವ ಆಜ್ಞಾಧಾರಕ ನಟರು ನಿಮ್ಮ ಬಳಿ ಇಲ್ಲದೇ ಇರಬಹುದು. ಸದ್ಯದಲ್ಲಿ, ಹೊರಗೆ ನಡೆಯುವ ನಾಟಕ ನೀವಂದುಕೊಂಡಂತೆ ನಡೆಯದಿದ್ದಾಗ, ಮುಂದಿನ ಹಂತದ ನಾಟಕ–ಅಂದರೆ ನಿಮ್ಮ ಮನಸ್ಸಿನಲ್ಲಿ ಶುರುವಾಗುವ ನಾಟಕ ನಿಯಂತ್ರಣವನ್ನು ಕಳೆದುಕೊಳ್ಳಲು ಪ್ರಾರಂಭಿಸುತ್ತದೆ. ಈ ಕಾರಣಕ್ಕಾಗಿಯೇ ನೀವು ನಿಮ್ಮ ಮಾನಸಿಕ ಸ್ಥರದಲ್ಲಿ ನಡೆಯುವ ನಾಟಕಕ್ಕೆ ಏಕಮಾತ್ರ ನಿರ್ದೇಶಕರಾಗಬೇಕು. ಹೊರಗೆ ನಡೆಯುವ ನಾಟಕ ಹೇಗಿದ್ದರೂ ತನ್ನದೇ ಆದ ರೀತಿಯಲ್ಲಿ ನಡೆಯುತ್ತಲೇ ಇರುತ್ತದೆ.

ನಮ್ಮಲ್ಲಿ ಪ್ರತಿಯೊಬ್ಬರಿಗೂ ತಮ್ಮದೇ ಆದ ಬಾಹ್ಯ ನಾಟಕಗಳು ನಡೆಯುತ್ತಿರುತ್ತವೆ. ಇದರಲ್ಲಿ ಎಲ್ಲವೂ ನೀವು ಬಯಸಿದ ರೀತಿಯಲ್ಲೇ ನಿಖರವಾಗಿ ನಡೆಯುವುದಿಲ್ಲ. ಆದರೆ ನಿಮ್ಮ ಮನಸ್ಸಿನಲ್ಲಿ ನಡೆಯುವ ನಾಟಕ 100% ನಿಮ್ಮದೇ ರೀತಿಯಲ್ಲಿ ನಡೆಯಬೇಕು. ನಿಮ್ಮ ಮನಸ್ಸಿನಲ್ಲಿ ನಡೆಯುವ ನಾಟಕ ಹತೋಟಿಯಲ್ಲಿದ್ದರೆ, ಹೊರಗಿನ ಸನ್ನಿವೇಶ, ಸಂದರ್ಭಗಳು ಹತೋಟಿಗೆ ಬರುತ್ತವೆ. ಜೀವನದಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತಿರುವಾಗ, ಈ ಬದುಕೆನ್ನುವುದು ಕೇವಲ ಒಂದು ನಾಟಕ ಎನ್ನುವ ಸತ್ಯವನ್ನು ಅರ್ಥಮಾಡಿಕೊಂಡು, ಅದನ್ನು ಚೆನ್ನಾಗಿ ನಿರ್ವಹಿಸಬೇಕು. ಆದರೆ ನಿಮಗೆ ಈ ಬದುಕೆಂಬ ಸ್ಕ್ರಿಪ್ಟ್‌ನ ಮೇಲೆ ಯಾವುದೇ ನಿಯಂತ್ರಣವಿಲ್ಲದೇ ಹೋದರೆ, ಈ ನಾಟಕ ಯಾವುದೋ ಒಂದು ಹಂತದಲ್ಲಿ, ಒಂದಲ್ಲಾ ಒಂದು ರೀತಿಯಲ್ಲಿ ಅಸಹ್ಯಕ್ಕೆ ತಿರುಗುತ್ತದೆ? ಅದು ದುರ್ವರ್ತನೆಯಿಂದಾಗಬಹುದು, ರೋಗ, ಸಾವು, ಅಥವಾ ಇನ್ನಿತರ ವಿಕೋಪಗಳಿಂದ ಆಗಬಹುದು.

ಈ ಬದುಕೆಂಬ ನಾಟಕವು ವಿಕಾರಕ್ಕೆ ತಿರುಗುವ ತನಕ ಕಾಯಬೇಡಿ. ನಿಮ್ಮ ಮನಸ್ಸಿನಲ್ಲಿ ನಡೆಯುವ ನಾಟಕವನ್ನು ಈಗಲೇ ಹಿಡಿತಕ್ಕೆ ತೆಗೆದುಕೊಳ್ಳಿ. ನಿಮ್ಮೊಳಗಿರುವ ನಿಮ್ಮ ಸ್ವಂತ ನಟರು ನೀವು ಹೇಳಿದಂತೆ ಕೇಳಬೇಕು. ಇದನ್ನು ನೀವು ನಿರ್ವಹಿಸಿದ್ದೇ ಆದರೆ, ಆಧ್ಯಾತ್ಮಿಕ ಪ್ರಕ್ರಿಯೆಯು ಅನಾಯಾಸವಾಗಿ ನಡೆಯುತ್ತದೆ. ಎಲ್ಲಿಯವರೆಗೆ ನೀವು, ನಿಮ್ಮ ಮನಸ್ಸಿನಲ್ಲಿ ನಡೆಯುವ ನಾಟಕದ ಮೇಲೆ ಹೊರಗಿನ ನಾಟಕವು ಪ್ರಭಾವವನ್ನು ಬೀರಲು ಅನುಮತಿ ಕೊಡುವಿರೋ ಅಲ್ಲಿಯವರೆಗೆ, ನೀವು ಆಧ್ಯಾತ್ಮಿಕತೆಯ ಕಡೆಗೆ ಹೋಗಲು ಸಾಧ್ಯವಾಗುವುದಿಲ್ಲ. ಆಧ್ಯಾತ್ಮಿಕರಾಗುವುದು ಎಂದರೆ ಅಂತರ್ಯದ ಕಡೆಗೆ ತಿರುಗುವುದು. ನೀವು ಅಂತರ್ಯದ ಕಡೆಗೆ ತಿರುಗುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ನೀವು ಕೇವಲ ಬಾಹ್ಯದಲ್ಲಿ ನಡೆಯುವ ನಾಟಕವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಿರಿ ಎನ್ನುವುದನ್ನಷ್ಟೇ ಖಚಿತಪಡಿಸಿಕೊಳ್ಳಿ. ನೀವು ಸದಾಕಾಲ ಧ್ಯಾನದಲ್ಲಿ ಕುಳಿತುಕೊಂಡರೆ, ನಿಮ್ಮ ಗಂಡ ಅಥವಾ ಹೆಂಡತಿ ಈ ಹೊಸ ನಾಟಕ ಏನೆಂದು ಅಚ್ಚರಿ ವ್ಯಕ್ತಪಡಿಸುತ್ತಾರೆ. ಅವರಿಗದು ಇಷ್ಟವಾಗದಿದ್ದರೆ, ನಿಮ್ಮನ್ನು ಅದರಿಂದ ವಿಮುಖಗೊಳಿಸಲು ಅವರು ಬೇರೆಯದ್ದೇ ರೀತಿಯ ನಾಟಕವನ್ನಾಡಲು ಆರಂಭಿಸುತ್ತಾರೆ.

ನೀವು ಅಂತರ್ಯದ ಕಡೆಗೆ ತಿರುಗಿದ್ದೀರಿ ಎಂಬ ವಿಷಯ ಯಾರಿಗೂ ತಿಳಿಯಬೇಕಾದ ಅವಶ್ಯಕತೆಯಿಲ್ಲ. ಅದನ್ನು ರಹಸ್ಯವಾಗಿಡಬೇಕು ಎಂಬ ಕಾರಣಕ್ಕಾಗಲ್ಲ? ಆದರೆ ಅದು ಬೇರೆ ಇನ್ಯಾರ ವ್ಯವಹಾರವೂ ಅಲ್ಲದಿರುವ ಕಾರಣದಿಂದ ಅಷ್ಟೆ. ಹಾಗಾಗಿ ನಿಮ್ಮ ಸಂಗಾತಿ, ನಿಮ್ಮ ಕುಟುಂಬ, ಮತ್ತು ಸಮಾಜದೊಂದಿಗೆ, ಅವರು ಬಯಸಿದ ರೀತಿಯಲ್ಲಿ ಐವತ್ತು ಶೇಕಡದಷ್ಟು ನಾಟಕವನ್ನು ನೀವು ಆಡಬಹುದು ಮತ್ತು ನೀವು ಬಯಸುವ ರೀತಿಯಲ್ಲಿ ಐವತ್ತು ಶೇಕಡದಷ್ಟು ನಾಟಕವನ್ನು ನೀವು ಆಡಬಹುದು. ಆದರೆ ನಿಮ್ಮ ಮನಸ್ಸಿನಲ್ಲಿ ನಡೆಯುವ ನಾಟಕ ನೂರಕ್ಕೆ ನೂರರಷ್ಟು ನೀವು ಬಯಸುವ ರೀತಿಯಲ್ಲೇ ನಡೆಯಬೇಕು. ಆಧ್ಯಾತ್ಮಿಕ ವಿಚಾರದಲ್ಲೂ ಸಹ ಇದು ಅನ್ವಯಿಸುತ್ತದೆ–ಅದು ನೂರು ಪ್ರತಿಶತ ನಿಮ್ಮ ರೀತಿಯಲ್ಲೇ ಜರುಗಬೇಕು. ಹೊರಗೆ ಮಾತ್ರ ನೀವು ಐವತ್ತು ಪ್ರತಿಶತದಷ್ಟು ಹೊಂದಾಣಿಕೆಗಳನ್ನು ಮಾಡಿಕೊಳ್ಳಬಹುದು. ಆದರೆ ನಿಮ್ಮ ಮನಸ್ಸಿನ ನಾಟಕ ಮತ್ತು ನಿಮ್ಮ ಆಂತರಿಕ ಪರಿಸ್ಥಿತಿ ನೂರು ಪ್ರತಿಶತದಷ್ಟು ನಿಮ್ಮದಾಗಿರಬೇಕು.

ದೆಹಲಿ ವಿಧಾನಸಭೆಗೆ ಮತ್ತೆ ಬಾಂಬ್ ಬೆದರಿಕೆ



ನವದೆಹಲಿ: ದೆಹಲಿ ವಿಧಾನಸಭೆಯನ್ನು ಸ್ಫೋಟಿಸುವುದಾಗಿ ಇಮೇಲ್ ಮೂಲಕ ಮತ್ತೆ ಬಾಂಬ್ ಬೆದರಿಕೆ ಬಂದಿದೆ. ಈ ಹಿಂದೆ ವಿಧಾನಸಭೆಯಲ್ಲಿ ಬಜೆಟ್ ಅಧಿವೇಶನ ನಡೆಯುತ್ತಿದ್ದ ವೇಳೆಯೂ ಬಾಂಬ್ ಬೆದರಿಕೆ ಬಂದಿತ್ತು. ಇಂದು (ಏ.9) ಬೆಳಗ್ಗೆ 8:14ಕ್ಕೆ ವಿಧಾನಸಭೆಗೆ ಸಂಬಂಧಿಸಿದ ಹಲವು ಸರ್ಕಾರಿ ಮತ್ತು ಇತರ ಇನ್‌ಬಾಕ್ಸ್‌ಗಳಿಗೆ ಸಂದೇಶ ಬಂದಿತ್ತು. ಈ ಇ–ಮೇಲ್‌ನಲ್ಲಿ ಇಂದು ಯಾವುದೇ ಸಮಯದಲ್ಲಾದರೂ ವಿಧಾನಸಭೆ, ಸಚಿವಾಲಯ, ಕೆಲ ಶಾಲೆಗಳು ಮತ್ತು ಯಾವುದಾದರೊಂದು ಮೆಟ್ರೋ ಸ್ಟೇಷನ್‌ಗಳಲ್ಲಿ ಸ್ಫೋಟಗಳಾಗುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡಿದೆ. ಆದರೆ ಸ್ಫೋಟಕಗಳ ವಿವರ, ನಿಖರ ಸಮಯ ಅಥವಾ ಬೇರೆ ಯಾವುದೇ ನಿರ್ದಿಷ್ಟ ಮಾಹಿತಿ ಉಲ್ಲೇಖಿಸಿಲ್ಲ.

ಬೆದರಿಕೆ ಮಾಹಿತಿ ಬಂದ ತಕ್ಷಣ ದೆಹಲಿ ಪೊಲೀಸರು ತ್ವರಿತ ಕ್ರಮ ಕೈಗೊಂಡಿದ್ದಾರೆ. ಬಾಂಬ್ ನಿಷ್ಕ್ರಿಯ ತಂಡಗಳೊಂದಿಗೆ ವಿಧಾನಸಭೆ ಪರಿಸರ, ಸಚಿವಾಲಯ, ಶಾಲೆಗಳು ಮತ್ತು ಮೆಟ್ರೋ ಸ್ಟೇಷನ್‌ಗಳಲ್ಲಿ ತಪಾಸಣೆ ಮಾಡಲಾಗಿದೆ. ಈ ಘಟನೆಯ ನಂತರ ದೆಹಲಿಯ ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತಾ ವ್ಯವಸ್ಥೆಯನ್ನು ಹೆಚ್ಚಿಸಲಾಗಿದೆ.

ಅನರ್ಹರ ಬಿಪಿಎಲ್ ಕಾರ್ಡ್ ಎಪಿಎಲ್ ಕಾರ್ಡ್ ಆಗಿ ಪರಿವರ್ತನೆ

ಬೆಂಗಳೂರು, ಏ.9–ಸುಮಾರು 14 ಲಕ್ಷ ಮಂದಿ ಎಪಿಎಲ್‌ನವರು ಬಿಪಿಎಲ್ ಕಾರ್ಡ್ ಹೊಂದಿದ್ದಾರೆ. ಅದನ್ನು ನಾವು ಬಿಪಿಎಲ್‌ಗೆ ತೊಂದರೆ ಆಗದಂತೆ ಪರಿಷ್ಕರಣೆ ಮಾಡಿ ತೆಗೆಯಬೇಕಿದ್ದು, ಹಂತಹಂತವಾಗಿ ತೆಗೆಯಲಿದ್ದೇವೆ ಎಂದು ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ತಿಳಿಸಿದರು. ನಗರದಲ್ಲಿಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ರಾಜ್ಯದಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ಅನಧಿಕೃತ ಬಿಪಿಎಲ್ ಕಾರ್ಡ್‌ಗಳಿವೆ ಎಂಬ ವರದಿ ಕೊಟ್ಟ ವಿಚಾರವಾಗಿ ಪ್ರತಿಕ್ರಿಯಿಸಿದರು. ಗೈಡ್‌ಲೈನ್ಸ್ ಮೀರಿ ಎಪಿಎಲ್‌ನವರು 7 ಲಕ್ಷ ಕಾರ್ಡ್ ಬಿಪಿಎಲ್ ಕಾರ್ಡ್ ಮಾಡಿಸಿಕೊಂಡಿದ್ದಾರೆ ಅಂತ ವರದಿ ಇದೆ. ಅದನ್ನು ಪರಿಷ್ಕರಿಸುತ್ತಿದ್ದೇವೆ. ಸುಮಾರು 14 ಲಕ್ಷ ಮಂದಿ ಎಪಿಎಲ್‌ನಲ್ಲಿ ಇರಬೇಕಾದವರು ಬಿಪಿಎಲ್ ಕಾರ್ಡ್ ಹೊಂದಿ ದ್ದಾರೆ. ಹಂತ ಹಂತವಾಗಿ ಅದನ್ನು ತೆಗೆಯುತ್ತೇವೆ ಎಂದರು. ನಿಜವಾಗಲೂ ಬಿಪಿಎಲ್ ಕಾರ್ಡ್‌ಗೆ ಯಾರು ಅರ್ಹರಿದ್ದಾರೋ ಅವರ ಹೆಸರು ಡಿಲೀಟ್ ಆಗಲ್ಲ. ಡಿಲೀಟ್ ಆಗಿದ್ದರೆ, ತಹಶೀಲ್ದಾರ್‌ಗೆ ಅರ್ಜಿ ಹಾಕಬೇಕಿದ್ದು, ಮತ್ತೆ ಬಿಪಿಎಲ್ ಕಾರ್ಡ್ ಕೊಡುತ್ತೇವೆ. ಎಪಿಎಲ್ ಕಾರ್ಡ್ ಇರುವವರಿಗೆ ಸದ್ಯಕ್ಕೆ ನಾವೇನೂ ಮಾಡ್ತಾ ಇಲ್ಲ. ಬಿಪಿಎಲ್‌ನಲ್ಲಿ ಸಾಕಷ್ಟು ಜನ ಎಪಿಎಲ್‌ನವರು ಇದ್ದಾರೆ. ಬಿಪಿಎಲ್ ಕಾರ್ಡ್ ಮಿಸ್ ಆಗಿದ್ದರೆ ಅಂಥವರಿಗೆ ಕೊಡುತ್ತಿದ್ದೇವೆ. ಬಿಪಿಎಲ್‌ಗೆ ಯಾರೂ ಅರ್ಹರಲ್ಲವೋ ಅವರು ಎಪಿಎಲ್‌ಗೆ ಹೋಗ್ತಾರೆ ಎಂದು ಸ್ಪಷ್ಟಪಡಿಸಿದರು.



ಮುನಿಯಪ್ಪ

ಅಪಮಾನಕರ ಹೇಳಿಕೆ ಹಿನ್ನೆಲೆ
ಲೆಟರ್ ಹೆಡ್‌ನಲ್ಲೇ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಆರ್‌ಎಸ್‌ಎಸ್ ದೂರು ನೀಡಲಿ

● ಸಚಿವ ಪ್ರಿಯಾಂಕ್ ಖರ್ಗೆ ಸವಾಲು ● ವಿಷ ಸರ್ಪಗಳ ಹೊಡೆದು ಸಾಯಿಸದೇ ಹಾಲೆರೆಯಲಾಗುತ್ತಾ?

ಬೆಂಗಳೂರು, ಏಪ್ರಿಲ್ 9(ಕೆಎಂಶಿ)– ಆರ್‌ಎಸ್‌ಎಸ್ ನೋಂದಾಯಿತ ಸಂಸ್ಥೆ ಆಗಿದ್ದರೆ, ಅದರ ವಿರುದ್ಧ ಅಪಮಾನಕರ ಹೇಳಿಕೆ ನೀಡಿದ ಆರೋಪದ ಮೇಲೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಲೆಟರ್‌ಹೆಡ್‌ನಲ್ಲೇ ದೂರು ದಾಖಲಿಸಲಿ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಇಂದಿಲ್ಲಿ ಸವಾಲು ಹಾಕಿದ್ದಾರೆ.



ಪ್ರಿಯಾಂಕ್ ಖರ್ಗೆ

ರಾಜ್ಯಸಭೆಯಲ್ಲಿನ ವಿರೋಧ ಪಕ್ಷದ ನಾಯಕರೂ ಆಗಿರುವ ಮಲ್ಲಿಕಾರ್ಜುನ ಖರ್ಗೆ ಇತ್ತೀಚೆಗೆ ಆರ್‌ಎಸ್‌ಎಸ್ ವಿಷ ಸರ್ಪ, ಅದನ್ನು ಕೊಲ್ಲಿ ಎಂಬ ಹೇಳಿಕೆ ನೀಡಿದ್ದಕ್ಕೆ ಅವರ ವಿರುದ್ಧ ದೂರು ದಾಖಲಿಸಲಾಗಿದೆ. ದೂರಿನ ವಿಚಾರಕ್ಕೆ ಸಂಬಂಧಿಸಿದಂತೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಮಲ್ಲಿಕಾರ್ಜುನ ಖರ್ಗೆ ಪುತ್ರ ಪ್ರಿಯಾಂಕ್ ಖರ್ಗೆ, ದೂರು ದಾಖಲಿಸಲಿ ಬಿಡಿ. ನನ್ನ ಮೇಲೂ ಎರಡು ಕೇಸುಗಳಿವೆ ಎಂದರು.

ನಮ್ಮದು ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಬುದ್ಧ, ಬಸವ ಅವರ ತತ್ವಗಳನ್ನು ಹೊಂದಿದ್ದೇವೆ. ಕೆಲವರು ಸಂವಿಧಾನ ವಿರೋಧಿ ಸಿದ್ಧಾಂತ ಹೊಂದಿರುತ್ತಾರೆ. ಅಷ್ಟಕ್ಕೂ, ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದಾದರೂ ಏನು. ವಿಷ ಸರ್ಪಗಳನ್ನು ಹೊಡೆಯಿರಿ ಎಂದಿದ್ದಾರೆ. ವಿಷ ಸರ್ಪ ಎದುರಾದರೆ ಯಾರಾದರೂ ಹಾಲೆರೆಯಲು ಆಗುತ್ತದೆಯೇ ಎಂದರು.

ಕತ್ತೆ ಕಾಯುತ್ತಿದ್ದರಾ: ಅಸ್ಸಾಂ ಮುಖ್ಯಮಂತ್ರಿ ಹೇಮಂತ ಬಿಸ್ವ ಶರ್ಮಾ ಅವರು, ಕಾಂಗ್ರೆಸ್ ನಾಯಕರಾದ ಖರ್ಗೆ ಹಾಗೂ ರಾಹುಲ್ ಗಾಂಧಿ ವಿರುದ್ಧ ಮಾಡಿರುವ ಟೀಕೆಗೆ ಪ್ರತಿಕ್ರಿಯಿಸಿ, ಕಾಂಗ್ರೆಸ್‌ನಲ್ಲಿದ್ದವರು ಬಿಜೆಪಿ ಸೇರಿ ಆರ್‌ಎಸ್‌ಎಸ್‌ನಿಂದ ಪಾಠ ಕಲಿತಿದ್ದಾರೆ. ಅವರ ಪತ್ನಿ ಹೆಸರಲ್ಲಿ ಮೂರು ಪಾಸ್‌ಪೋರ್ಟ್ ಇವೆ ಎನ್ನಲಾಗುತ್ತಿದೆ. ಅಂತಹವರು ನಮಗೆ ದೇಶಭಕ್ತಿ ಪಾಠ ಹೇಳುತ್ತಾರೆ. ಬಾಂಗ್ಲಾ ಅಕ್ರಮ ವಲಸಿಗರು ಅಸ್ಸಾಂ ಮೂಲಕ ಕರ್ನಾಟಕಕ್ಕೆ ಬರುತ್ತಾರೆ ಎಂಬ ಆರೋಪ ಮಾಡುತ್ತಾರೆ. ವಲಸಿಗರು ನುಸುಳುವಾಗ ಅಸ್ಸಾಂ ಮುಖ್ಯಮಂತ್ರಿ, ಹಾಗೂ ಗೃಹ ಸಚಿವರು ಕತ್ತೆ ಕಾಯುತ್ತಿದ್ದರಾ ಎಂದರು.

ಬಿಜೆಪಿ ಸಂಸತ್‌ನಲ್ಲಿ ಬಹುಮತ ಹೊಂದಿದೆ. ದಲಿತರು, ಅಲ್ಪಸಂಖ್ಯಾತರು, ಆದಿವಾಸಿಗಳು ನಮ್ಮ ದೇಶದವರಲ್ಲ ಎಂಬುದಾಗಿ ಹೇಳಲಿ. ಯುಎಇ ನಾಯಕರನ್ನು ತಬ್ಬಿಕೊಳ್ಳುತ್ತಾರೆ. ಅವರಿಂದ ಪೆಟ್ರೋಲ್ ಬೇಕು, ಯೂರಿಯಾ ಬೇಕು. ಕೇಸರಿ ಸಹ ಹೆಚ್ಚಿನ ಪ್ರಮಾಣದಲ್ಲಿ ಯುಎಇಯಿಂದ ಬರುತ್ತದೆ. ಮುಸ್ಲಿಂ ರಾಷ್ಟ್ರಗಳ ಜೊತೆಗಿನ ಎಲ್ಲ ವ್ಯಾಪಾರ ನಿಲ್ಲಿಸಲಿ ಎಂದು ಟಾಂಗ್ ನೀಡಿದರು.

ಕೊರೊನಾ ಸಮಯದಲ್ಲಿ ಅಮಿತ್ ಶಾ ಮಗ ಐಪಿಎಲ್ ಆಡಿಸಿದ್ದು ದುಬೈನಲ್ಲಿ, ಈ ಇಬ್ಬಗೆ ನೀತಿ ಏಕೆ, ಅವರ ಮಾತುಗಳನ್ನು ಅವರೇ ಸಮರ್ಥಿಸಿಕೊಳ್ಳಲು ಆಗುತ್ತಿಲ್ಲ. ಇತ್ತೀಚಿಗೆ ಕೇರಳದಲ್ಲಿ ಚುನಾವಣಾ ಪ್ರಚಾರ ಮಾಡಿದ ಪ್ರಧಾನಿ ನರೇಂದ್ರ ಮೋದಿ, ಕೇರಳ ಫೈಲ್, ಧುರಂಧರ ಸಿನೆಮಾ ನಿಜ ಕತೆಗಳು ಎಂದಿದ್ದಾರೆ. ಆದರೆ, ಆರ್‌ಎಸ್‌ಎಸ್ ಬಗೆಗಿನ 'ಶತಕ' ಸಿನಿಮಾ ಫ್ಲಾಪ್ ಆಯ್ತು, ಸಂಘಟನೆಯವರು ಸಿನೆಮಾ ನೋಡಿದ್ದರೆ ಉತ್ತಮ ಕಲೆಕ್ಷನ್ ಆಗಿರುತ್ತಿತ್ತು.

ನಡೆಯದ ನಾಣ್ಯ: ಪ್ರಿಯಾಂಕ್ ಖರ್ಗೆ ಹುಚ್ಚು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಹಿಡಿದಿದೆ ಎನ್ನುವ ಪ್ರತಾಪ್ ಸಿಂಹ ಮಾತಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, ಅವನು ನಡೆಯದ ನಾಣ್ಯ, ಮೈಸೂರಲ್ಲೇ ಅವರಿಗೆ ಬೆಲೆ ಇಲ್ಲ, ಇಲ್ಲಿ ಏಕೆ ಅವರ ಹೆಸರು ತರ್ತೀರಿ. ಸಂಸತ್‌ನಲ್ಲಿ ಸ್ಮೋಕ್ ಬಾಂಬ್ ಇಟ್ಟವರು ಎಂದು ಹೇಳಿದರು.

ತಾಕತ್ತಿದ್ದರೆ ಅರೆಸ್ಟ್ ಮಡಿಸಲಿ: ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಿಯಾಂಕ್ ಖರ್ಗೆ ಅವರನ್ನು ಜೈಲಿಗೆ ಹಾಕಿಸುತ್ತೇವೆ ಎಂಬುದಾಗಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, ತಾಕತ್ ಇದ್ದರೆ ಸ್ಕ್ವಾಡ್ ತಂದು ನಮ್ಮನ್ನು ಅರೆಸ್ಟ್ ಮಾಡಿಸಲಿ. ನನ್ನದು ಹಾಗೂ ಖರ್ಗೆ ಅವರದು ಒಂದೇ ಸಿದ್ಧಾಂತ. ಅದರಲ್ಲೇನು ತಪ್ಪು? ನಮ್ಮದು ಬಸವ ಸಿದ್ಧಾಂತ, ನಾರಾಯಣಸ್ವಾಮಿ ಬಿಜೆಪಿ ಸೇರಿ ಆರ್‌ಎಸ್‌ಎಸ್ ಚಡ್ಡಿ ಹೊತ್ತುಕೊಂಡು ಬದಲಾಗಿದ್ದಾರೆ ಎಂದರು.

ಎಡಿಜಿಪಿ ಎಂ.ಚಂದ್ರಶೇಖರ್‌ಗೆ ಬೆದರಿಕೆ ಆರೋಪ
ಪ್ರಕರಣ ಇತ್ಯರ್ಥಕ್ಕೆ ಮಧ್ಯಸ್ಥಿಕೆದಾರರನ್ನಾಗಿ ನ್ಯಾ.ಅಭಯ್ ಶ್ರೀನಿವಾಸ್ ಓಕಾ ಹೆಸರು ಸೂಚಿಸಿದ ಹೈಕೋರ್ಟ್

ಬೆಂಗಳೂರು,ಏ.9(ಕೆಎಂಶಿ)–ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಎಡಿಜಿಪಿ), ಎಸ್‌ಐಟಿ ಮುಖ್ಯಸ್ಥ ಎಂ.ಚಂದ್ರಶೇಖರ್ ಮತ್ತು ಅವರ ಕುಟುಂಬಕ್ಕೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಬೆದರಿಕೆ ಹಾಕಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ಇತ್ಯರ್ಥಪಡಿಸಲು ಮಧ್ಯಸ್ಥಿಕೆದಾರರನ್ನಾಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ಹೆಸರನ್ನು ಹೈಕೋರ್ಟ್ ಸೂಚಿಸಿದೆ. ಅಧಿಕಾರಿಗೆ ಬೆದರಿಕೆ ಹಾಕಿದ ಆರೋಪ ಸಂಬಂಧ ದಾಖಲಾಗಿರುವ ಪ್ರಕರಣ ರದ್ದು ಕೋರಿ ಹೆಚ್.ಡಿ. ಕುಮಾರಸ್ವಾಮಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನೀಲ್‌ದತ್ ಯಾದವ್ ಅವರ ಏಕಸದಸ್ಯ ಪೀಠ ಈ ಸೂಚನೆ ನೀಡಿದೆ. ನ್ಯಾಯಮೂರ್ತಿ ಓಕಾ ಹೆಸರು ಅರ್ಜಿದಾರರು ಮತ್ತು ದೂರುದಾರರಿಗೆ ಒಪ್ಪಿಗೆಯಾದರೆ ತಿಳಿಸಬಹುದು. ಆಗ ಅವರನ್ನು ಮಧ್ಯಸ್ಥಿಕೆದಾರರನ್ನಾಗಿ ನೇಮಕ ಮಾಡಿ ಆದೇಶಿಸಲಾಗುವುದು. ಬೇರೊಬ್ಬ ನ್ಯಾಯಮೂರ್ತಿ ನೇಮಕ ಮಾಡಲು ಬಯಸಿದರೆ, ಅವರ ಹೆಸರನ್ನೂ ಚೀಟಿಯಲ್ಲಿ ಬರೆದು ನ್ಯಾಯಾಲಯದ ಅಧಿಕಾರಿಗೆ ನೀಡಬಹುದು. ಅಂತಹವರನ್ನು ಮಧ್ಯಸ್ಥಿಕೆದಾರರನ್ನಾಗಿ ನೇಮಕ ಮಾಡಲಾಗುವುದು.



ಅಭಯ್ ಶ್ರೀನಿವಾಸ್

ಯಾರ ಹೆಸರೂ ಸೂಚಿಸದೇ ನ್ಯಾಯಮೂರ್ತಿ ಓಕಾ ಹೆಸರು ಒಪ್ಪಿದರೆ, ಅವರನ್ನೇ ಮಧ್ಯಸ್ಥಿಕೆದಾರರನ್ನಾಗಿ ನೇಮಕ ಮಾಡಿ ಆದೇಶಿಸಲಾಗುವುದು ಎಂಬುದಾಗಿ ನ್ಯಾಯಪೀಠ ಸೂಚಿಸಿತು. ನಿಯಮ ಉಲ್ಲಂಘಿಸಿ ಸಾಯಿ ಮಿನರಲ್ಸ್ ಕಂಪನಿಗೆ ಗಣಿ ಗುತ್ತಿಗೆ ಮಂಜೂರು ಮಾಡಿದ ಆರೋಪದ ಮೇಲೆ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ಲೋಕಾಯುಕ್ತ ಎಸ್‌ಐಟಿ ಎಡಿಜಿಪಿ ಚಂದ್ರಶೇಖರ್ ರಾಜ್ಯಪಾಲರಿಗೆ ಪತ್ರ ಬರೆದಿದ್ದರು. ನಂತರ ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಶಾಸಕ ಸುರೇಶ್ ಬಾಬು ಮಾಧ್ಯಮಗಳಲ್ಲಿ ತಮ್ಮ ವಿರುದ್ಧ ಕೆಲವೊಂದು ಗುರುತರ ಆರೋಪ ಮಾಡಿ ಬೆದರಿಕೆ ಹಾಕಿದ್ದಾರೆ ಎಂದು ಉಲ್ಲೇಖಿಸಿ, ಎಡಿಜಿಪಿ ಚಂದ್ರಶೇಖರ್ ಸಂಜಯ ನಗರ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದರು. ಪೊಲೀಸರು ಸರ್ಕಾರಿ ಅಧಿಕಾರಿಗೆ ಬೆದರಿಕೆ ಹಾಕಿದ ಆರೋಪ ಸಂಬಂಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 223 ಮತ್ತು 224 ಅಡಿ ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಸುರೇಶ್ ಬಾಬು ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ಇದರ ರದ್ದು ಕೋರಿ ಕುಮಾರಸ್ವಾಮಿ ಸೇರಿ ಇತರ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್ಸ್‌ಗಳು ಬೇಕಾಗಿದ್ದಾರೆ.
ಸಂಬಳ: 25,000-30,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9916854618 / 7090541277

ಬೇಕಾಗಿದ್ದಾರೆ

D. ಆಂಧ್ರ ಶೈಲಿ ಮತ್ತು ರೆಸ್ಟೋಪಬ್ ನಲ್ಲಿ ಕೆಲಸ ಮಾಡಲು G.M Store Manager, Captain Receptionist, Steward, House Keeping ಬೇಕಾಗಿದ್ದಾರೆ
ಸಂಬಳ: 25,000-1,00,000
7090541277, 9916854618

ಬೇಕಾಗಿದ್ದಾರೆ

ಪಿರಿಯಾಪಟ್ಟಣ ಮತ್ತು ಪೊನ್ನಂಪೇಟೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸಲು ಅರ್ಹ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : ಡಿಪ್ಲೋಮಾ ಎಲೆಕ್ಟ್ರಿಕಲ್ ಇಂಜಿನಿಯರಿಂಗ್, PF ಮತ್ತು ESI ಸೌಲಭ್ಯಗಳಿರುತ್ತದೆ. ಸಂಪರ್ಕಿಸಿ
9448433380
8861101113

G9 projects
Designing your Dreams
Vee2 Developers

SHOURYA LAYOUT

20×30 MUDA Approved Sites
31 Lakhs
Adjoining vijayanagar 4th stage, Mysore
8088-707-707

ಅಭಿನಂದನೆಗಳು



ಮೈಸೂರಿನ ಪ್ರಮತಿ ಕಾಲೇಜಿನ ವಿದ್ಯಾರ್ಥಿ
ಟುವಿಷ್ ಸಿ.ಆರ್.

ದ್ವಿತೀಯ ಪಿಯುಸಿಯಲ್ಲಿ ಶೇ.95% ಅಂಕಗಳನ್ನು ಪಡೆದು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಇವರು ವಿಜಯನಗರ 4ನೇ ಹಂತದ ನಿವಾಸಿ. ಜೆ.ಕೆ ಟೈರ್ಸ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿ.ಬಿ ರಾಘವೇಂದ್ರ ಹಾಗೂ ಸದ್ವಿವೇಕ ಶಾಲೆಯ ಶಿಕ್ಷಕಿ ಡಾ. ಸಿ. ವಾಣಿ ರಾಘವೇಂದ್ರ ಅವರ ಪುತ್ರ. ಇವರು ಮೂಲತಃ ಕೊಡಗಿನ ಕುಟ್ಟದವರಾಗಿದ್ದು ಚಮ್ಮಣಮಡ ಕುಟುಂಬಕ್ಕೆ ಸೇರಿದವರು.

ಶುಭಕೋರುವವರು : ತಾತ-ಅಜ್ಜಿ ಪಾಡಿಯಮ್ಮಂಡ, ರವೀಂದ್ರ, ಶೀಲಾವತಿ ಮಾವ-ಅತ್ತೆ ಮಂಜುನಾಥ್, ವಿದ್ಯಾ ಹಾಗೂ ಖುಷೀಲ್

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀ ಸಿ.ಎಂ. ಈಶ್ವರ ಅವರ ಮಗ ಶ್ರೀ ಸಿ.ಇ. ಹರೀಶ್ವರ, ರವರು ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ನಿರುಪಾಧಿತ ಮಾಲೀಕರಾಗಿದ್ದು, ನನ್ನ ಕಕ್ಷಿದಾರರಿಗೆ ನೆಲ ಬಾಡಿಗೆಯಂತೆ ನೀಡಲು ಅಪೇಕ್ಷಿಸಿರುತ್ತಾರೆ. ಅದರಂತೆ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಬಾಡಿಗೆಗೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 [ಏಳು] ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ 1ನೇ ಹಂತದಲ್ಲಿರುವ ನಿವೇಶನ ಸಂಖ್ಯೆ: 1147, ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೊಳ ಪಟ್ಟಿದ್ದು ಸ್ವತ್ತಿನ ಪಿಐಡಿ ನಂ. 79834 & ವಾರ್ಡ್ ನಂ. 20. ಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮ: 24.00 ಮೀಟರ್ ಮತ್ತು ಉತ್ತರ-ದಕ್ಷಿಣ: 15 ಮೀಟರ್, ಒಟ್ಟು ವಿಸ್ತೀರ್ಣ: 360 ಚದರ ಮೀಟರ್‌ಗಳು. ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ - ನಿವೇಶನ ಸಂಖ್ಯೆ. 1144, ಪಶ್ಚಿಮಕ್ಕೆ - ರಸ್ತೆ, ಉತ್ತರಕ್ಕೆ - ನಿವೇಶನ ಸಂಖ್ಯೆ. 1148 ಮತ್ತು ದಕ್ಷಿಣಕ್ಕೆ - ನಿವೇಶನ ಸಂಖ್ಯೆ. 1146.

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

ಅಭಿನಂದನೆಗಳು

Sadvidya Composite PRE-UNIVERSITY
#7, Narayana Shastry Road, Mysore
ಇಲ್ಲಿ PUC ಓದುತ್ತಿರುವ



ಬೃಂದಾ .ಎಂ

89% ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ
ಶುಭಾಶಯ ಕೋರುವವರು
ಶ್ರೀಮತಿ ಯಶೋಧಮ್ಮ, ಶ್ರೀ ಕೆ.ಎನ್ ಅಣ್ಣಯ್ಯಚಾರ್,
ಮಕ್ಕಳು: ಶ್ರೀಮತಿ ಮಹಾಲಕ್ಷ್ಮಿ .ಕೆ
ಶ್ರೀ ಮಂಜುನಾಥ ಚಾರ್ ಎಂ.ಎ, ಚಿಕ್ಕಮ್ಮ ಮತ್ತು ಚಿಕ್ಕಪ್ಪಂದಿರು

ಸೈಟ್‌ಗಳು ಮಾರಾಟಕ್ಕಿದೆ

ಬನ್ನೂರು ರಸ್ತೆ ಸಮೀಪವಿರುವ ಡೆಲ್ಲಿ ಪಬ್ಲಿಕ್ ಸ್ಕೂಲ್ ಹಾಗೂ ಜ್ಞಾನ ಸರೋವರ ಇಂಟರ್ನ್ಯಾಷನಲ್ ಸ್ಕೂಲ್ ಸಮೀಪ ಅಭಿವೃದ್ಧಿಪಡಿಸಿದ ಪದಕಿ ಲೇಔಟ್ ಹಾಗೂ ಪರಶುರಾಮ ಲೇಔಟ್ ನಲ್ಲಿ **60x40** ಮುಡಾ ಅನುಮೋದಿತ ಸೈಟ್ ಗಳು ಮಾರಾಟಕ್ಕಿದೆ.
ಸಂಪರ್ಕಿಸಿ ಆಸ್ಟರ್ 9731749500

ಇಂಪೀರಿಯಲ್ ಸಿಟಿ

HP HYLAND PROPERTIES | MUDA LIMITS
ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಕೇವಲ ₹749/ ಪ್ರತಿ ಚದರ ಅಡಿ
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ
ಸುಲಭ 4 ಕಂತುಗಳ ಸೌಲಭ್ಯವಿದೆ
BOOKING OPEN
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್ 90713 86615 / 95133 01854
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

ಎಂ.ಎಂ.ಸಿ. ಇನ್‌ಸ್ಪೈರ್

MMC Inspire
10th Std. State/ CBSE Class 10
Crash Course @ MYSURU
Academic Year 2026-27
Fee ₹8000/-
From April 11th to May 11th 2026
Syllabus will be covered in one month
No. of Sessions / Day - 4
(Mathematics: 2 & Science : 2)
Timings: 10:00 am to 4:30 pm
- ALL CLASSES WILL BE HANDLED BY EXPERT TEACHERS
- STUDY MATERIALS WILL BE PROVIDED FOR ALL CHAPTERS
- TESTS / EXAMINATION WILL BE CONDUCTED ON SUNDAYS

Contact us:
MM COACHING CENTRE
Ramavilas Road, Next to Hotel Ambari, Near Sadvidya School, Mysuru
Contact: 9480481010 / 8310025002 / 9740465618

WANTED

CNM EDUCATIONAL INSTITUTION
MAHADEVAPURA AND JAYAPURA

Teacher's requirement (only females)	QUALIFICATION
Nursery section Montessori Teachers	PUC, NST, NTT
Primary Section (Kannada, English, Mathematics, Social, Science, Hindi, Computer Science)	Degree with B.Ed
High School Section (English, Mathematics, Social, Science, Spoken English)	Master Degree with B.Ed
P E (only males) (For both High school & Primary Section)	C P.Ed, B P.Ed & M P.Ed

Address: #No.710, Mahadevapura Judge quarters, Srirampura village, Mysuru.
Date: 10/4/2026 & 11/4/2026
Timings: 10:00 AM to 1:00PM
Contact no: 8150993434, 8147470606

WALK IN INTERVIEW

St. POUL'S HIGHER PRIMARY SCHOOL
#313, 3rd Cross, Krishnanagara, Yaraganahalli, Mysore
WANTED TEACHERS
Nursery (N.S.T, Montessori),
Primary (B.A, B.Sc, D.Ed, B.Ed)
All Subject (Kan, Eng, Maths, G.S, S.S) Fluent in English,
Date : 11/04/2026, Day : Saturday,
Timings : 11 am to 3 pm
9008985562

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಶ್ರೀ ಗೌರೀಶಂಕರ ಟ್ರಾವೆಲ್ಸ್

30-4-26 (6 ದಿನ): ದೆಹಲಿ, ಮಥುರಾ, ಬೃಂದಾವನ, ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ.
29-5-26 (13 ದಿನ): ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಹರಿದ್ವಾರ್, ದೆಹಲಿ, ಮಸ್ಸೂರಿ.
(ವಿಮಾನ, ಬಸ್, ಊಟ, ರೂಂ)
Mob: 9620002114

JOB OPPORTUNITY

Only for RETIRED PERSONS and highly Educated Home Makers (Age 45+)
Contact : 99025 08150 / 99721 87247

IN THE COURT HON BLE PRINCIPAL SENIOR CIVIL JUDGE AT MYSORE

P&SC No.20/2026
Petitioners: Smt. Kavitha Bopanna & Others
V/s
Respondent: NIL

PUBLIC NOTICE

Notice is hereby given to the General Public that, the Petitioner no.01 Smt. Kavitha Bopanna D/o Late N.C.Bopanna & Late Thulsi Bopanna, Petitioner no.02 -Sri. Nellamakada Lokesh Bopanna S/o Late N.C.Bopanna & Late Thulsi Bopanna, Petitioner no.03-Smt.Sumitha Madayya D/o Late N.C.Bopanna & Late Thulsi Bopanna, have filed petition under section 370, 371 & 372 of Indian Succession Act, 1925, seeking the grant of Succession Certificate infavour of 1st Petitioner with respect to Suit Schedule Properties which stand in the name of Late Smt. Thulsi Bopanna, the said Late Thulsi Bopanna has expired intestate on 02/05/2025 at Mysuru.

All the person's having any objections to the Grant of Succession Certificate to the 1st Petitioner are hereby directed to appear before this Hon'ble Court in person or through your counsel on 12/06/26 11:A.M. failure of which, the Succession Certificate shall be granted as prayed for.


No separate notice shall be served.

Given under my hand and seal of the Court on this 7th day of April 2026 at Mysuru.

By the Order of Court
Sd/- Chief Ministerial officer
Hon'ble Principal Senior Civil Judge & CJM at Mysuru

PRABHU ASSOCIATES
H.P.DARSHAN SHETTY
H.P.GAGAN SHETTY
Advocate for Petitioners
No. 1533, N.T. Street, KR Mohalla Agrahara, Mysuru--5700224
Mob: 9590807007

14ನೇ ವರ್ಷದ ಸವಿನೆನಪು



ಶ್ರೀ ಸಿದ್ದೇಗೌಡ್ರು (ಲಾರಿ)
(ಶ್ರೀ ಮಹದೇಶ್ವರ ಲಾರಿ ಮಾಲೀಕರು) ನಿಧನ: 10-04-2012

ನಿಮ್ಮ ಅಗಲಿಕೆ ನಮ್ಮಲ್ಲಿ ಶಾಶ್ವತ ನೋವನ್ನು ತಂದಿದೆ. ನಿಮ್ಮ ನೆನಪಿನಲ್ಲೇ ಜೀವನ ಸಾಗಿಸುವ ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ

ದುಃಖತಪ್ತರು: ಶ್ರೀ ಭೈರಪ್ಪ ಮತ್ತು ಸಹೋದರರು, ಮೃತರ ಪತ್ನಿ: ಇಂದಿರಾ, ಮಕ್ಕಳಾದ ಎಸ್.ದಿಲೀಪ್, ಎಸ್.ದೀಕ್ಷಿತ್, ಜಸಿತ್ ಗಂಡು ಮಕ್ಕಳು, ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಸ್ನೇಹಿತರು, S.M.C.C ಕುಂಬಾರ ಕೊಪ್ಪಲು, ಮೈಸೂರು

सीएसबी - केन्द्रीय रेशम उत्पादन अनुसंधान एवं प्रशिक्षण संस्थान

CSB - Central Sericultural Research & Training Institute
[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008
[Central Silk Board - Min. of Textiles – Govt. of India] Manandavadi Road, Srirampura Mysore – 570 008
संख्या/ सीएसबी/आरटीआई/मन पैथो./2026-27/ दि:Date:09/04/2026

WALK-IN-INTERVIEW FOR THE POST OF JUNIOR RESEARCH FELLOW

A Walk-in-Interview will be held on 25/04/2026 at CSB-Central Sericultural Research and Training Institute, Srirampura, Mysuru-570 008 as shown below:

'A'01 (One)"Dynamics of Economic and Technological Factors in Chawki Rearing Centers: Machine Learning Approaches for Sustainable Growth in South India, Project Code: MOE 01058 SNC for a period upto May 2027 or completion of project whichever is earlier under CSB Terms and Conditions.

Qualifications for Junior Research Fellow (JRF):

i. MSc in Agriculture Economics/MSc Agriculture Extension/ MSc in Sericulture

Preference will be given to the candidates having experience in agriculture experiments, data recording and computer knowledge.

Walk-in-Interview time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.gov.in/for details.

Director
CSR &TI, Mysuru

ಶ್ರೀ ಶಂಭುಲಿಂಗೇಶ್ವರ ರೆಸಿಡೆನ್ಸಿಯಲ್ ಪಿ.ಯು ಕಾಲೇಜ್

ಎಸ್.ಎಸ್.ಇ.ಟಿ
ಜಯಂತಿನಗರ, ಪಾಂಡವಪುರ ತಾ, ಮಂಡ್ಯ.
ದ್ವಿತೀಯ ಪಿ.ಯು ಫಲಿತಾಂಶದಲ್ಲಿ ಅಗ್ರಗಣ್ಯ ಸಾಧನೆ | 100% ಫಲಿತಾಂಶ
ಸತತವಾಗಿ 3 ವರ್ಷಗಳು ಶೇ 100% ಫಲಿತಾಂಶ — ವಿಜ್ಞಾನ & ವಾಣಿಜ್ಯ ಎರಡು ವಿಭಾಗಗಳಲ್ಲಿ
ಡಿಸ್ಟಿಂಕ್ಷನ್-25
ಫಸ್ಟ್ ಕ್ಲಾಸ್-42
100/100 ಅಂಕ ಪಡೆದವರು ಕನ್ನಡ-3 ಗಣಿತ-5

ನಿತ್ಯಗೌಡ ಎಚ್ ಕೆ 580-97% | ಅನನ್ಯ ಎಚ್ ಎ 566-94% | ಲೇಖನ ಗೌಡ 561-93.5% | ಲಿಖಿತ ಕೆ ಎಸ್ 556-93%

ಸಿ ವಿ ಜಾನ್ಹವಿ 553-92% | ಸೃಷ್ಟಿ 553-92% | ರಿತ್ವಿಕ್ ಗೌಡ 548-91% | ರೋಹಿತ್ ಕೆ ಪಿ 547-91% | ಮಹೇಂದ್ರ ಪಿ 546-91% | ನಿತ್ಯಶ್ರೀ ಎಚ್ ಆರ್ 545-91% | ಚಿರಾಗ್ ಕೆ ಗೌಡ 544-91% | ಪೌರ್ಣಿಕ 535-89%


ತನುಶ್ರೀ ಕೆ ಎಚ್ 535-89% | ಲಕ್ಷ್ಮೀಶ ಕೆ ಪಿ 533-89% | ಭಾಗ್ಯ 532-89% | ಮಾನಸ ಎಸ್ ಜೆ 524-87% | ಲಾವಣ್ಯ ಸಿ 523-87% | ಆಕಾಶ್ 521-87% | ಸಿಂಚನ 519-86% | ಮಾತೃಶ್ರೀ ಎಸ್ 518-86% | ಅಮೂಲ್ಯ 518-86%

ಮೋಹನ್‌ರಾಜ್ ಕೆ 517-86% | ಲಿಖಿತಾ ಎಸ್ 511-85% | ರೇವಂತ್ ಬಿ 511-85% | ಜೀವಿತಾ ಜಿ 510-85% | ಸಂಚಿತಾ ಆರ್ 509-84.9% | ಅಮೂಲ್ಯ 509-84.9% | ಐಶ್ವರ್ಯ ಕೆ ಎಂ 508-84.7% | ಸ್ನೇಹ ಎಂ 508-84.7% | ಪ್ರಿಯಾಂಕಾ ಎ 498-83%

ಸ್ಪಂದನಾ 496-83% | ವರುಣ್ ಚಂದ್ ಗೌಡ 496-83% | ಶ್ರೀಲಕ್ಷ್ಮಿ ಐನ್ 493-82% | ಲೇಖ 493-82% | ಪ್ರೀತಮ್ ಆರ್ 492-82% | ಸುದೀಪ್ ಗೌಡ ಕೆ 488-81% | ಚಂದನಾಶ್ರೀ ಎಚ್ 486-81% | ಅನ್ವಿತ್ ಎಂ ಎಸ್ 482-80% | ಅಕ್ಷತಾ ಆರ್ 478-80%

Sri Shambhulingeshwara Residential School & PU College

HOSTEL FACILITY | JEE | NEET | KCET Courses for I & II PUC



PRIMARY SCHOOL | HIGH SCHOOL | PUC PCMB EBACs | SPORTS ACADEMY | Admissions Open 26-27

Jayanthinagara, Pandavapura Tq | Ph : 7338138083

ಮೈಸೂರು ಮಿತ್ರ ಶುಕ್ರವಾರ 10 ಏಪ್ರಿಲ್ 2026

ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ



ಕೊಠಡಿ ನಿರ್ಮಾಣ ಕಾಮಗಾರಿಗೆ ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ ನೀಡಿದರು.

ನಾಗಮಂಗಲ, ಏ.9– ಪಟ್ಟಣದ ದೇವಲಾಪುರ ಹ್ಯಾಂಡ್ ಪೋಸ್ಟ್ ಬಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಕೋಟಿ ರೂ. ವೆಚ್ಚದ ಕೊಠಡಿ ನಿರ್ಮಾಣ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಸಚಿವರು, ಗ್ರಾಮೀಣ ಮಕ್ಕಳಿಗೆ ಅತೀ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಉದ್ದೇಶದಿಂದ ನಾನು ಈ ಹಿಂದೆ ಸಚಿವನಾಗಿದ್ದ ವೇಳೆ ಪ್ರಥಮ ದರ್ಜೆ ಕಾಲೇಜು, ಪ್ರಥಮ ದರ್ಜೆ ಪಾಲಿಟೆಕ್ನಿಕ್ ಹಾಗೂ ಐಟಿಐ ಕಾಲೇಜುಗಳನ್ನು ಮಂಜೂರು ಮಾಡಿಸಿ ಕಟ್ಟಡ ನಿರ್ಮಿಸಲಾಗಿತ್ತು. ಅಲ್ಲದೆ ಹತ್ತಾರು ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ವಿವಿಧ ವಸತಿ ಶಾಲೆಗಳು ಹಾಗೂ ಕಾಲೇಜು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಾಂಸ್ಕೃತಿಕ ಹಾಗೂ ಪಠ್ಯೇತರ ಚಟುವಟಿಗಳಿಗೆ ಒತ್ತು ನೀಡುವ ಜೊತೆಗೆ 2 ತಿಂಗಳ ಹಿಂದೆ ಸುಸಜ್ಜಿತ ಆಡಿಟೋರಿಯಂ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದು, ಕಾಮಗಾರಿ ಇನ್ನು 3 ತಿಂಗಳ ಒಳಗೆ ಪೂರ್ಣಗೊಳ್ಳಲಿದೆ ಎಂದರು.

ಮುಂದಿನ 3 ತಿಂಗಳಲ್ಲಿ ಕಾಲೇಜು ಮುಂಭಾಗ ಕಾಂಪೌಂಡ್ ಜೊತೆಗೆ ಗ್ರಂಥಾಲಯ ನಿರ್ಮಿಸಿ ಕೊಡಲಾಗುವುದು. ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ ಅಗತ್ಯವಾದ ಎಲ್ಲಾ ಮೂಲಭೂತ ಸೌಕರ್ಯ ಒದಗಿಸಲಾಗುವುದು ಎಂದರು.

ಕಾಲೇಜಿನ ಪ್ರಾಂಶುಪಾಲೆ ನೇತ್ರಾವತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ.ರಾಜೇಶ್, ತಟ್ಟಹಳ್ಳಿ ನರಸಿಂಹಮೂರ್ತಿ, ಕಾಲೇಜಿನ ಸದಸ್ಯರಾದ ಶಿವಣ್ಣಗೌಡ, ಅಲಿಖಾನ್, ಸುನೀಲ್, ಲಕ್ಷ್ಮಿಕಾಂತ್, ಗೃಹ ನಿರ್ಮಾಣ ಮಂಡಳಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಾಜೇಂದ್ರ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟ

ಎಸ್‌ಟಿಜಿ ಪಿಯು ಕಾಲೇಜಿಗೆ ಶೇ.100 ಫಲಿತಾಂಶ

ಚಿನಕುರಳಿ, ಏ.9– ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ತಾಲೂಕಿನ ಚಿನಕುರಳಿ ಗ್ರಾಮದಲ್ಲಿರುವ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಒಡೆತನದ ಪ್ರತಿಷ್ಠಿತ ಎಸ್‌ಟಿಜಿ ಪಿಯು ಕಾಲೇಜಿಗೆ ಶೇ.100 ರಷ್ಟು ಫಲಿತಾಂಶ ಬಂದಿದೆ.

ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಕಾಲೇಜಿನ 518 ಮಕ್ಕಳು ಬರೆದಿದ್ದರು. ಈ ಪೈಕಿ ಎಲ್ಲರೂ ತೇರ್ಗಡೆ ಹೊಂದುವ ಮೂಲಕ ಶೇ.100 ಫಲಿತಾಂಶ ಬಂದಿದ್ದು, ಕಾಲೇಜಿನ ಟಿ.ಎಸ್.ಸಹನ ಎಂಬ ವಿದ್ಯಾರ್ಥಿನಿ 600ಕ್ಕೆ 593 (ಶೇ. 98.83) ಅಂಕ ಪಡೆಯುವ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾಳೆ.

ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ 518 ವಿದ್ಯಾರ್ಥಿಗಳ ಪೈಕಿ 402 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕನ್ನಡದಲ್ಲಿ 53 ವಿದ್ಯಾರ್ಥಿಗಳು, ಗಣಿತದಲ್ಲಿ 139, ಕಂಪ್ಯೂಟರ್ ಸೈನ್ಸ್‌ನಲ್ಲಿ 22, ಭೌತಶಾಸ್ತ್ರ– 8, ಜೀವಶಾಸ್ತ್ರ– 6, ರಸಾಯನಶಾಸ್ತ್ರ–1 ಹಾಗೂ ಹಿಂದಿ ವಿಷಯದಲ್ಲಿ ಓರ್ವ ವಿದ್ಯಾರ್ಥಿ ಶೇ. 100ಕ್ಕೆ 100ರಷ್ಟು ಅಂಕ ಗಳಿಸಿದ್ದಾರೆ.



ಸಹನ ಟಿ.ಎಸ್. 600ಕ್ಕೆ 593(ಶೇ.98.83)

ಜಿಲ್ಲೆಗೆ ಪ್ರಥಮ: ಎಸ್‌ಟಿಜಿ ಪದವಿ ಪೂರ್ವ ಕಾಲೇಜಿನ ಸಹನ ಟಿ.ಎಸ್. ಎಂಬ ವಿದ್ಯಾರ್ಥಿನಿ 600ಕ್ಕೆ 593(98.82)ಅಂಕ ಗಳಿಸುವ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಕನ್ನಡ–99, ಇಂಗ್ಲಿಷ್–95, ಫಿಜಿಕ್ಸ್–100, ಕೆಮಿಸ್ಟ್ರಿ–100, ಗಣಿತ–100 ಹಾಗೂ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ– 99 ಅಂಕ ಗಳಿಸಿದ್ದಾಳೆ.

ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ತಂದ ಎಲ್ಲಾ ವಿದ್ಯಾರ್ಥಿಗಳು ಹಾಗೂ 593 ಅಂಕಗಳಿಸಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಸಹನ ಟಿ.ಎಸ್. ಅವರನ್ನು ಸಂಸ್ಥಾಪಕ ಅಧ್ಯಕ್ಷ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ಸಂಸ್ಥೆ ಸಿಇಓ ಸಿ.ಪಿ.ಶಿವರಾಜು ಹಾಗೂ ಆಡಳಿತ ಮಂಡಳಿ, ಉಪನ್ಯಾಸಕರು ಅಭಿನಂದಿಸಿದ್ದಾರೆ.

ಮಾಂಡವ್ಯ ಎಕ್ಸಲೆನ್ಸ್‌ಗೆ ಶೇ.99.32 ಫಲಿತಾಂಶ

ಮಂಡ್ಯ, ಏ.9– ನಗರದ ಎಸ್.ಬಿ.ಎಜುಕೇಷನ್ ಟ್ರಸ್ಟ್‌ನ ಮಾಂಡವ್ಯ ಎಕ್ಸಲೆನ್ಸ್ ಪದವಿ ಪೂರ್ವ ಕಾಲೇಜಿಗೆ 2025–26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 99.32 ರಷ್ಟು ಫಲಿತಾಂಶ ಲಭಿಸಿದೆ.

ಕಾಲೇಜಿನ 247 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 183 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಗಣಿತ ಶಾಸ್ತ್ರದಲ್ಲಿ– 12, ಭೌತಶಾಸ್ತ್ರದಲ್ಲಿ–02, ರಸಾಯನಶಾಸ್ತ್ರದಲ್ಲಿ–01, ಜೀವಶಾಸ್ತ್ರದಲ್ಲಿ–02 ಕನ್ನಡ ಭಾಷೆಯಲ್ಲಿ 40 ವಿದ್ಯಾರ್ಥಿಗಳು 100ಕ್ಕೆ 100 ಅಂಕ ಗಳಿಸಿದ್ದಾರೆ. ಕೆ.ವೈ.ಸಂಜನಾ 600 ಅಂಕಗಳಿಗೆ 592 ಅಂಕ ಪಡೆದು ಇಡೀ ರಾಜ್ಯದಲ್ಲೇ 7ನೇ ಸ್ಥಾನ ಮತ್ತು ಮತ್ತು ಜಿಲ್ಲೆಗೆ ವಿಜ್ಞಾನ ವಿಭಾಗದಲ್ಲಿ (ಪಿಸಿಎಂಬಿ) ಪ್ರಥಮ ಸ್ಥಾನ ಪಡೆದಿದ್ದರೆ, ಯು.ದೀಕ್ಷಾ 589 ಅಂಕ ಪಡೆದು ರಾಜ್ಯಕ್ಕೆ 10ನೇ ಸ್ಥಾನ ಪಡೆಯುವ ಮೂಲಕ ಮಂಡ್ಯ ಜಿಲ್ಲೆ ಮತ್ತು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ಶೇ.99.32ರಷ್ಟು ಫಲಿತಾಂಶ ತರುವ ಮೂಲಕ ಕಾಲೇಜಿಗೆ ಕೀರ್ತಿ ತಂದಿರುವ ವಿದ್ಯಾರ್ಥಿಗಳನ್ನು ಎಸ್.ಬಿ.ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಪ್ರೊ. ಬಿ.ಶಿವಲಿಂಗಯ್ಯ, ಕಾರ್ಯದರ್ಶಿ ಡಾ.ಮೀರಾ ಶಿವಲಿಂಗಯ್ಯ, ಪ್ರಾಂಶುಪಾಲರಾದ ಹೆಚ್.ಎಂ.ಶ್ರೀನಿವಾಸ್, ಶೈಕ್ಷಣಿಕ ಪಾಲುದಾರರಾದ ಚೇತನ್ ಕೃಷ್ಣ, ಎಂ.ಆರ್.ಮಂಜು ಮತ್ತು ಉಪನ್ಯಾಸಕರು ಹಾಗೂ ಬೋಧಕೇತರ ವರ್ಗ ಅಭಿನಂದಿಸಿದ್ದಾರೆ.

ದ್ವಿತಿಯ ಪಿಯುಸಿ ಫಲಿತಾಂಶ: ಮಂಡ್ಯಕ್ಕೆ 12ನೇ ಸ್ಥಾನ

ಮಂಡ್ಯ, ಏ.9– ಪ್ರಸಕ್ತ ಸಾಲಿನ ದ್ವಿತಿಯ ಪಿಯುಸಿ ಪರೀಕ್ಷಾ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು, ಮಂಡ್ಯ ಜಿಲ್ಲೆ ರಾಜ್ಯಕ್ಕೆ 12ನೇ ಸ್ಥಾನ ಪಡೆದು ಉತ್ತಮ ಸಾಧನೆ ಮಾಡಿದೆ.

ಕಳೆದ ಬಾರಿಗಿಂತ 2 ಸ್ಥಾನ ಜಿಗಿತ ಕಂಡಿರುವ ಮಂಡ್ಯ ಪಿಯುಸಿ ಫಲಿತಾಂಶದಲ್ಲಿ ಕಳೆದ ಬಾರಿಗಿಂತ ಈ ಬಾರಿ ಶೇ.15.63ರಷ್ಟು ಏರಿಕೆ ಕಂಡಿದೆ. ಈ ಬಾರಿ ಜಿಲ್ಲೆಗೆ ಶೇ.88.88 ರಷ್ಟು ಫಲಿತಾಂಶ ಬಂದಿದ್ದು, ಕಳೆದ ವರ್ಷ ಶೇ.73.25ರಷ್ಟು ಬಂದಿತ್ತು.

ಏ.15ಕ್ಕೆ, ಜಿಪಂ ಎದುರು ಕೃಷಿ ಕೂಲಿಕಾರರಿಂದ ಪ್ರತಿಭಟನೆ

ಭಾರತೀನಗರ: ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಏ.15 ರಂದು ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕು ಘಟಕದ ಅಧ್ಯಕ್ಷ ಟಿ.ಪಿ.ಅರುಣ್‌ಕುಮಾರ್ ತಿಳಿಸಿದರು.

ಇಲ್ಲಿಗೆ ಸಮೀಪದ ಯಲಾದಹಳ್ಳಿ ಗ್ರಾಮದಲ್ಲಿ ಕೃಷಿ ಕೂಲಿಕಾರರ ನೋಂದಣಿ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೃಷಿ ಕೂಲಿಕಾರರ ಬೇಡಿಕೆಯನ್ನು ಜಿಲ್ಲಾಧಿಕಾರಿಗಳು ಮತ್ತು ಸಿಇಓ ಮಧ್ಯ ಪ್ರವೇಶಿಸಿ ಕೂಡಲೇ ಈಡೇರಿಸಬೇಕು. ಇಲ್ಲದಿದ್ದರೇ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಏ.25 ರಿಂದ 27ರವರೆಗೆ ಯಾದಗಿರಿ ಜಿಲ್ಲೆ ಶಹಪುರದಲ್ಲಿ ರಾಜ್ಯಮಟ್ಟದ ಕೂಲಿಕಾರರ ಸಮ್ಮೇಳನವನ್ನು ಆಯೋಜಿಸಲಾಗಿದ್ದು, ಸಮ್ಮೇಳನದಲ್ಲಿ ಜಿಲ್ಲೆಯಿಂದ 15 ಮಂದಿ ಮುಖಂಡರು ಪಾಲ್ಗೊಳ್ಳಲಿದ್ದೇವೆ ಎಂದರು.



ಸದಸ್ಯತ್ವ ಅಭಿಯಾನಕ್ಕೆ ಟಿ.ಪಿ.ಅರುಣ್‌ಕುಮಾರ್ ಚಾಲನೆ ನೀಡಿದರು.

ಮದ್ದೂರು ತಾಲೂಕಿನ 42 ಗ್ರಾಪಂ ವ್ಯಾಪ್ತಿಯಲ್ಲಿ 28 ಗ್ರಾಪಂಗಳಲ್ಲಿ ಈಗಾಗಲೇ ಸದಸ್ಯತ್ವ ನೋಂದಣಿ ಅಭಿಯಾನ ಆರಂಭಿಸಲಾಗಿದ್ದು, ತಾಲೂಕು ಸಮಿತಿ ನಿರ್ಧಾರದಂತೆ ಆದಷ್ಟು ಶೀಘ್ರ ಪೂರ್ಣಗೊಳಿಸಲಾಗುವುದು. ಕೇಂದ್ರ ಸರ್ಕಾರ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ರದ್ದು ಪಡಿಸಿ ವಿಬಿ ಜಿ ರಾಮ್ ಜಿ ಯೋಜನೆಯನ್ನು ಜಾರಿಗೊಳಿಸಿದ್ದು, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಈ ಯೋಜನೆ ಅನ್ವಯ ರಾಜ್ಯ ಸರ್ಕಾರ ಕೂಲಿಕಾರರಿಗೆ ಕೆಲಸ ನೀಡಬೇಕೆಂದು ಆಗ್ರಹಿಸಿದರು. ಕೂಲಿಕಾರರ ಬದುಕನ್ನು ಕಟ್ಟಿ ಕೊಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹೊಸದಾಗಿ ತಂದಿರುವ ವಿಬಿ ಜಿ ರಾಮ್ ಜಿ ಯೋಜನೆಯನ್ನು ಬಲಿಷ್ಠಗೊಳಿಸಲು ನಡೆಸಲು ಉದ್ದೇಶಿಸಿರುವ ಹೋರಾಟಕ್ಕೆ ಎಲ್ಲಾ ಕೂಲಿ ಕಾರ್ಮಿಕರು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಕಾರ್ಯದರ್ಶಿ ವೈ.ಎಸ್.ಶೋಭಾ, ಬೋರೇಗೌಡ, ಅನಿತ, ಪವಿತ್ರ, ನಾಗಮ್ಮ, ಹೊನ್ನಯ್ಯ, ಜ್ಯೋತಿ, ಶಿವಮ್ಮ ಇದ್ದರು.

ಲೈಗಿಂಕ ದೌರ್ಜನ್ಯದಿಂದ ಬಾಲಕಿ ಸಾವು ಪ್ರಕರಣ

ಆರೋಪಿಗೆ 20 ವರ್ಷ ಜೈಲು ಶಿಕ್ಷೆ, 7 ಲಕ್ಷ ರೂ. ದಂಡ

ಮಂಡ್ಯ, ಏ.9– ಪ್ರೀತಿ ಮಾಡುವುದಾಗಿ ಲೈಂಗಿಕ ದೌರ್ಜನ್ಯ ನಡೆಸಿ ಬಾಲಕಿ ಸಾವಿಗೆ ಕಾರಣನಾಗಿದ್ದ ಅಪರಾಧಿಗೆ ಮಂಡ್ಯ ಅಧಿಕ ಸೆಷನ್ಸ್ ಮತ್ತು 2ನೇ ತ್ವರಿತಗತಿ ನ್ಯಾಯಾಲಯ ವಿಶೇಷ ನ್ಯಾಯಾಧೀಶರಾದ ಬಿ.ದಿಲೀಪ್ ಕುಮಾರ್ ಅವರು 20 ವರ್ಷ ಜೈಲು ಶಿಕ್ಷೆ ಮತ್ತು 7 ಲಕ್ಷ ರೂ. ದಂಡ ವಿಧಿಸಿ ಆದೇಶ ಹೊರಡಿಸಿದ್ದಾರೆ.

ನಗರದ ತಾವರೆಗೆರೆ ನಿವಾಸಿ ವಾಯಿದ್ ಇಕ್ಬಾಲ್ ಅವರ ಪುತ್ರ ಅಖೀಬ್ ಆಲಂ ಅಲಿಯಾಸ್ ಶೇಖ್ ಶಿಕ್ಷೆಗೆ ಒಳಗಾದ ಆರೋಪಿ. ಈತ 9ನೇ ತರಗತಿ ಓದುತ್ತಿದ್ದ ಬಾಲಕಿಯನ್ನು ಶಾಲೆಗೆ ಹೋಗುವಾಗ ಮತ್ತು ಬರುವಾಗ ಪುಸಲಾಯಿಸಿ ನಿನ್ನನ್ನು ಪ್ರೀತಿಸುತ್ತಿದ್ದು, ನೀನು ನನ್ನನ್ನು ಪ್ರೀತಿಸದೇ ಹೋದರೆ ಕೈ ಕುಯ್ದುಕೊಳ್ಳುತ್ತೇನೆ ಹಾಗೂ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೆದರಿಸಿ 2023ರ ನ.27 ರಂದು ಶ್ರೀರಂಗಪಟ್ಟಣ ತಾಲೂಕಿನ ಕರಿಘಟ್ಟ ಬೆಟ್ಟದ ಬಳಿಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದ. ನಂತರ ಈ ವಿಚಾರ ಯಾರಿಗಾದರೂ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ. ಇದರಿಂದ ಮನನೊಂದ ಬಾಲಕಿ ಮನೆ ಕೊಠಡಿಯಲ್ಲಿ ಫ್ಯಾನ್‌ಗೆ ವೇಲಿನಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು. ಮರಣೋತ್ತರ ಪರೀಕ್ಷೆ ವೇಳೆ ಬಾಲಕಿ ಗರ್ಭಿಣಿಯಾಗಿರುವುದು ಪತ್ತೆಯಾಗಿತ್ತು. ಈ ಸಂಬಂಧ ಮಂಡ್ಯ ಮಹಿಳಾ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಮತ್ತು ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಅಂದಿನ ಠಾಣಾ ಇನ್ಸ್‌ಪೆಕ್ಟರ್ ಹೆಚ್.ಆನಂದ ಕುಮಾರ್ ತನಿಖೆ ಕೈಗೊಂಡು, ಸೂಕ್ತ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ನಿಗದಿತ ಸಮಯದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಬಳಿಕ ವಿಚಾರಣೆ ನಡೆದು ಸಾಕ್ಷ್ಯಾಧಾರಗಳಿಂದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಮಂಡ್ಯ ಅಧಿಕ ಸೆಷನ್ಸ್ ಮತ್ತು 2ನೇ ತ್ವರಿತಗತಿ ನ್ಯಾಯಾಲಯ ವಿಶೇಷ ನ್ಯಾಯಾಧೀಶ ಬಿ.ದಿಲೀಪ್ ಕುಮಾರ್ ಅವರು ಆರೋಪಿ ಅಖೀಬ್ ಆಲಂಗೆ 20 ವರ್ಷ ಜೈಲು ಶಿಕ್ಷೆ ಹಾಗೂ 7 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿ ಆದೇಶ ಹೊರಡಿಸಿದ್ದಾರೆ. ಅಭಿಯೋಜನೆ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಹೆಬ್ಬಕವಾಡಿ ನಾಗರಾಜು ವಾದ ಮಂಡಿಸಿದ್ದರು.

ನಾಳೆಯಿಂದ ರಾಜ್ಯ ರೈತ ಸಂಘದಿಂದ ಪಾದಯಾತ್ರೆ

ಮಂಡ್ಯ, ಏ.9– ರಾಜ್ಯದಲ್ಲಿ ಏಕರೂಪ ಶಿಕ್ಷಣ ಜಾರಿಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ಎಸ್‌ಡಿಎಂಸಿ ಸಂಘದಿಂದ ಏ.11ರಿಂದ ಜಿಲ್ಲಾದ್ಯಂತ ಪಾದಯಾತ್ರೆ ಕೈಗೊಳ್ಳಲಾಗುವುದು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾವಿರ ಪೈಸೆ ಕೊಟ್ಟು ಸಾವಿರ ಹೆಜ್ಜೆ ಹಾಕಿ ಘೋಷವಾಕ್ಯದೊಂದಿಗೆ ಜಿಲ್ಲೆಯ 233 ಗ್ರಾಪಂಗಳಲ್ಲಿ ಪಾದಯಾತ್ರೆ ಮಾಡಲಾಗುವುದು. ಅಲ್ಲಿನ 1000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಭೇಟಿ ಮಾಡಿ, ಜನಜಾಗೃತಿ ಮೂಡಿಸಿ, ಭ್ರಷ್ಟ ಶಿಕ್ಷಣ ಇಲಾಖೆಯನ್ನು ಬಡಿದೇಳಿಸಲಾಗುವುದು ಎಂದರು.

ಲಕ್ಷಾಂತರ ರೂ. ಸರ್ಕಾರಿ ವೇತನ ಪಡೆಯುವವರು ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಿದ್ದಾರೆ. ಇಂತಹ ಶಿಕ್ಷಕರ ಸಂಘದ ಪದಾಧಿಕಾರಿಗಳನ್ನು ಆಯಾ ಶಾಲೆಯ ಗೇಟಿಗೆ ಕಟ್ಟುವಂತೆ ಅಲ್ಲಿನ ಎಸ್‌ಡಿಎಂಸಿ ಸಂಘಕ್ಕೆ ಸೂಚನೆ ನೀಡಲಾಗುವುದು. ನ್ಯಾಯಾಲಯದ ಮೊರೆ ಹೋಗಿ ಆ ಶಿಕ್ಷಕರನ್ನು ವಜಾಗೆ ಆಗ್ರಹಿಸಿ ಜೊತೆಗೆ ನಿವೃತ್ತ ಭತ್ಯೆ ತಡೆದು ಸೇವೆಯಿಂದ ಬಿಡುಗಡೆ ಮಾಡುವವರೆಗೆ ಹೋರಾಟ ನಡೆಸಲಾಗುವುದು ಎಂದು ಶಿಕ್ಷಣ ಇಲಾಖೆಯನ್ನು ಎಚ್ಚರಿಸಿದರು.

ಪಾದಯಾತ್ರೆಯಲ್ಲಿ ಆಯಾ ಗ್ರಾಮಗಳ ಸರ್ಕಾರಿ ಶಾಲೆಯ ಪೋಷಕರು ಭಾಗವಹಿಸುವರು. ಜೊತೆಗೆ ಗುಣಮಟ್ಟದ ಶಿಕ್ಷಣಕ್ಕೆ ಖಾಸಗಿ ಹಾಗೂ ರೆಸಿಡೆನ್ಸಿಯಲ್ ಶಾಲೆ ಅವಲಂಬಿತ ಪೋಷಕರು ಭಾಗವಹಿಸಿ ಸರ್ಕಾರಿ ಶಾಲೆಗಳಲ್ಲಿಯೇ ಗುಣಮಟ್ಟದ ಶಿಕ್ಷಣ ನೀಡುವಂತೆ ಒತ್ತಾಯಿಸಲು ಮುಂದಾಗಬೇಕು. ಜಿಲ್ಲೆಯ ವಿದ್ಯಾರ್ಥಿಗಳು, ಕೆಲಸ ಹುಡುಕುವ ಪದವೀಧರಯುವ ಮಿತ್ರರು, ನಿವೃತ್ತ ನೌಕರರು ಮನೆಯಲ್ಲಿ ಕೂರುವ ಬದಲು ಪಾದಯಾತ್ರೆಯಲ್ಲಿ ಭಾಗವಹಿಸುವಂತೆ ಅವರು ಮನವಿ ಮಾಡಿದರು.

ಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಶಿವಳ್ಳಿ ಚಂದ್ರಶೇಖರ್, ಜಿಲ್ಲಾ ಸಂಚಾಲಕ ಸಂತೋಷ್ ಮಂಡ್ಯಗೌಡ, ತಾಲೂಕು ಅಧ್ಯಕ್ಷ ಪುಟ್ಟಸ್ವಾಮಿಗೌಡ, ತೇಜಸ್, ಧನುಷ್ ಇದ್ದರು.

ಅರ್ಜಿ ಆಹ್ವಾನ

ಮಂಡ್ಯ, ಏ.9–ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳ ಸಣ್ಣ ಉದ್ದಿಮೆದಾರರನ್ನು ಉತ್ತೇಜಿಸುವ ದೃಷ್ಟಿಯಿಂದ ಮೊಬೈಲ್ ಕ್ಯಾಂಟೀನ್ ವಾಹನ ಖರೀದಿಸಲು 5 ಲಕ್ಷ ಸಹಾಯಧನ ವಿತರಣೆ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಏ.30 ಕೊನೆ ದಿನ ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಶೇ.86 ಫಲಿತಾಂಶ

ಮಕ್ಕಳು ಉನ್ನತ ಶಿಕ್ಷಣ ಪಡೆಯಬೇಕು ಹಾಗೂ ನೆರೆಯ ರಾಜ್ಯದ ಮಕ್ಕಳೊಂದಿಗೆ ಪೈಪೋಟಿ ನಡೆಸುವಂತೆ ಆಗಬೇಕು ಎಂಬ ದೃಷ್ಟಿಯಿಂದ ಪರೀಕ್ಷೆ ಮತ್ತು ಅಂಕಗಳ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆ ಮಾಡಲಾಗಿತ್ತು ಇದರ ಪರಿಣಾಮವಾಗಿ ದಾಖಲೆಯ ಫಲಿತಾಂಶ ಬಂದಿದೆ ಎಂದು ವಿವರಿಸಿದರು.

ಬಾಲಕಿಯರೇ ಮೇಲುಗೈ: ಈ ಬಾರಿ ಒಟ್ಟಾರೆ ಶೇ.86 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆ ಬರೆದ 7,10,363 ವಿದ್ಯಾರ್ಥಿಗಳ ಪೈಕಿ 6.10 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಕಳೆದ ವರ್ಷ ಶೇ.73.45ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು ಎಂದರು.

ವಿಜ್ಞಾನ ವಿಭಾಗದಲ್ಲಿ ಅತ್ಯಧಿಕ ಪಾಸ್ ಪ್ರಮಾಣ ಶೇ. 90ಕ್ಕಿಂತ ಹೆಚ್ಚಾಗಿದೆ. ವಾಣಿಜ್ಯ ವಿಭಾಗದಲ್ಲಿ ಸರಾಸರಿ ಶೇ. 80 ಪಾಸ್ ಪ್ರಮಾಣ ಆಗಿದ್ದು, ಕಲಾ ವಿಭಾಗದಲ್ಲಿ ಶೇ. 75 ರಷ್ಟು ಫಲಿತಾಂಶ ದಾಖಲಾಗಿದೆ. ಎಂದಿನಂತೆ ಈ ಬಾರಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಆಳ್ವಾಸ್ ಕಾಲೇಜು ವಿದ್ಯಾರ್ಥಿನಿ ದಿಶಾ ವಾಣಿಜ್ಯ ವಿಭಾಗದಲ್ಲಿ 600ಕ್ಕೆ 600 ಅಂಕ ಪಡೆದು ಕರ್ನಾಟಕಕ್ಕೆ ಟಾಪರ್ ಆಗಿದ್ದಾರೆ. ಈಕೆ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲೇ ತಾಯಿ ನಿಧನದಿಂದ ಆಘಾತ ಅನುಭವಿಸಬೇಕಾಗಿ ಬಂತು. ಆದರೂ ತನ್ನ ಜೀವನದ ಗುರಿಯಾಗಿ ಪರೀಕ್ಷೆಯಲ್ಲಿ ಸಾಧನೆ ಮೆರೆದಿದ್ದಾಳೆ. ವಾಣಿಜ್ಯ ವಿಭಾಗದಲ್ಲಿ ಬೆಳಗಾವಿ ನಗರದ ಗೋಗಟೆ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿನಿ ಧ್ವನಿ ಸಂತೋಷ ಕುಲಕರ್ಣಿ600ಕ್ಕೆ599 ಅಂಕ ಗಳಿಸಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ವಿಜಯನಗರ ಜಿಲ್ಲೆಯ ಕೊಟ್ಟೂರಿನ ಇಂದೂ ಪಿಯು ಕಾಲೇಜಿನ ವಿದ್ಯಾರ್ಥಿನಿಯರಾದ ಸಂಗೀತಾ ಹಾಗೂ ಡಿ.ಎಂ. ಅರ್ಚನಾ ಕಲಾ ವಿಭಾಗದಲ್ಲಿ ತಲಾ 600ಕ್ಕೆ 598 ಅಂಕ ಪಡೆಯುವ ಮೂಲಕ ಕಲಾ ವಿಭಾಗದಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಕಳೆದ 11 ವರ್ಷಗಳಿಂದಲೂ ಈ ಕಾಲೇಜಿನ ವಿದ್ಯಾರ್ಥಿಗಳೇ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಟಾಪರ್‌ಗಳಾಗಿ ಹೊರಹೊಮ್ಮುತ್ತಿದ್ದಾರೆ ಎನ್ನುವುದು ವಿಶೇಷ.

ವಿಜ್ಞಾನ ವಿಭಾಗದಲ್ಲಿ ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿನ ಶಮನ್ಯು ಎಸ್.ಶೆಟ್ಟಿ 598 ಅಂಕ (ಶೇ. 99.67), ನಂದನ್ ನಾಯಕ್ 598 ಅಂಕ (ಶೇ. 99.67), ದೀಕ್ಷಾ ಶೆಣೈ 596 ಅಂಕ (ಶೇ. 99.33), ಅದಿತಿ 596 (ಶೇ 99.33), ಅಮೋಘ ಬಿ. ಲೋಕ 596 ಅಂಕ (ಶೇ. 99.33), ಸುಹಾನ್ ನಾರಾಯಣ ಬಿಲ್ಲವ 598 ಅಂಕ (ಶೇ.99.33) ಗಳಿಸಿ ಸಾಧನೆ ಮಾಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ 9 ವಿದ್ಯಾರ್ಥಿಗಳು 590ಕ್ಕಿಂತ ಅಧಿಕ ಅಂಕ ಗಳಿಸಿದ್ದಾರೆ. ಒಂದೇ ಕಾಲೇಜಿನಲ್ಲಿ 9 ವಿದ್ಯಾರ್ಥಿಗಳು ವಾಣಿಜ್ಯ ವಿಭಾಗದಲ್ಲಿ ಸಾಧನೆ ಮಾಡಿದ್ದಾರೆ ಎಂದು ಹೇಳಿದರು. ಈ ಬಾರಿಯೂ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮುಂಚೂಣಿಯಲ್ಲಿ ಇದ್ದು, ಅತ್ಯಧಿಕ ಪಾಸ್ ಪ್ರಮಾಣ ದಾಖಲಿಸಿದೆ. ಬೆಂಗಳೂರು ನಗರ ಮತ್ತು ಮೈಸೂರು ಜಿಲ್ಲೆಗಳೂ ಉತ್ತಮ ಸಾಧನೆ ತೋರಿವೆ. ಇದೇ ಮೊದಲ ಬಾರಿ ಫಲಿತಾಂಶದ ಜತೆಗೇ ಅಂಕಪಟ್ಟಿಯೂ ಲಭ್ಯವಿದ್ದು, ಡಿಜಿಲಾಕರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.


ಫಲಿತಾಂಶ ಜಿಲ್ಲಾವಾರು ವಿವರ;

- ಉಡುಪಿ – 96.39%
- ದಕ್ಷಿಣ ಕನ್ನಡ– 96.35%
- ಕೊಡಗು– 92.34%
- ವಿಜಯಪುರ– 92.00%
- ಉತ್ತರ ಕನ್ನಡ– 91.78%
- ಬೆಂಗಳೂರು ಗ್ರಾಮಾಂತರ – 91.00%
- ಚಿಕ್ಕಮಗಳೂರು – 90.80%
- ಬೆಂಗಳೂರು ದಕ್ಷಿಣ – 90.55%
- ಚಿಕ್ಕಬಳ್ಳಾಪುರ – 90.24%
- ಬೆಂಗಳೂರು ಉತ್ತರ – 90.05%
- ಹಾಸನ – 89.71%
- ಮಂಡ್ಯ – 88.85%
- ಕೋಲಾರ – 87.38%
- ರಾಮನಗರ – 87.90%
- ಶಿವಮೊಗ್ಗ – 87.62%
- ತುಮಕೂರು – 86.89%
- ಕೊಪ್ಪಳ – 86.80%
- ಬೀದರ್ – 84.61%
- ಚಾಮರಾಜನಗರ – 84.68%
- ಮೈಸೂರು – 84.80%
- ಬಾಗಲಕೋಟೆ – 84.12%
- ಹಾವೇರಿ – 84.11%
- ಧಾರವಾಡ – 83.31%
- ಚಿಕ್ಕೋಡಿ – 83.10%
- ದಾವಣಗೆರೆ – 81.99%
- ಬೆಳಗಾವಿ – 80.32%
- ಚಿತ್ರದುರ್ಗ – 79.12%
- ಬಳ್ಳಾರಿ – 78.69%
- ಕಲಬುರಗಿ – 76.97%
- ಗದಗ – 76.65%
- ರಾಯಚೂರು – 74.09%
- ಯಾದಗಿರಿ – 71.21%


ಫಲಿತಾಂಶ ನೋಡಬೇಕೇ...!

ಫಲಿತಾಂಶವನ್ನು https://karresults.nic.in ಜಾಲತಾಣ ಹಾಗೂ ಕರ್ನಾಟಕ ಒನ್ ಮೊಬೈಲ್ ಆಪ್ ಮೂಲಕ ಪಡೆಯಬಹುದು. ವಿದ್ಯಾರ್ಥಿಗಳ ನೋಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸ್ ಆಪ್, ಎಸ್‌ಎಂಎಸ್ ಮೂಲಕವೂ ಫಲಿತಾಂಶವನ್ನು ರವಾನಿಸಲಾಗುವುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತಿಳಿಸಿದೆ.

ಜಿಲ್ಲೆಯ ಫಲಿತಾಂಶದಲ್ಲಿ ಶೇ.10ರಷ್ಟು ಸುಧಾರಣೆ



ಪೋಷಕರೊಂದಿಗೆ ಡಿ.ಎಸ್.ಧನ್ವಿ



ಕೆ.ಚಿತ್ರ ಸ್ಫೂರ್ತಿ ಹಾಗೂ ಅವರ ಪೋಷಕರು

> **ಕೆಲವು ವಿದ್ಯಾರ್ಥಿಗಳು ಏಕ ವಿಷಯಗಳಲ್ಲಿ ಫೇಲ್ ಆಗಿದ್ದಾರೆ. ಅವರೆಲ್ಲರೂ ಮರು ಎಣಿಕೆಗೆ ಹಾಕಿದರೆ ಜಿಲ್ಲೆಯ ಫಲಿತಾಂಶ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಜಿಲ್ಲೆಯ ಫಲಿತಾಂಶದಲ್ಲಿ ಏರಿಕೆ ಕಂಡಿದೆ. ಯುವತಿಯರು ಮುನ್ನಡೆ ಸಾಧಿಸಿದ್ದಾರೆ. ಕಳೆದ ಬಾರಿ ಶೇ.38ರಷ್ಟು ಫಲಿತಾಂಶ ಹೊಂದಿದ್ದ ಕೆಲವು ಸರ್ಕಾರಿ ಪದವಿಪೂರ್ವ ಕಾಲೇಜುಗಳು ಈ ಬಾರಿ ಶೇ.60ರಷ್ಟು ಫಲಿತಾಂಶ ಗಳಿಸಿವೆ.**
> -ಎಂ.ಪಿ.ನಾಗಮ್ಮ, ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಮೈಸೂರು.

> **ಮುಂದೆ ಏರೋನಾಟಿಕಲ್ ಇಂಜಿನಿಯರಿಂಗ್ ಸೇರಬೇಕೆಂದಿದ್ದೇನೆ. ಆ ಬಳಿಕ ಮಾಸ್ಟರ್ಸ್ ಮಾಡಬೇಕೆಂದಿದ್ದೇನೆ. ರಾಜ್ಯದಲ್ಲಿ ಟಾಪರ್ ಆಗಿ ಹೊರಹೊಮ್ಮಿರುವ ಖುಷಿ ಇದೆ. ನಮ್ಮ ಶಿಕ್ಷಕರು ಹಾಗೂ ಪೋಷಕರ ಸಹಕಾರದಿಂದ ಈ ಸಾಧನೆ ಸಾಧ್ಯವಾಯಿತು.** -ಡಿ.ಎಸ್.ಧನ್ವಿ

> **ಮುಂದೆ ಚಾರ್ಟರ್ಡ್ ಆಕೌಂಟೆಂಟ್ (ಸಿಎ) ಆಗಬೇಕು ಎಂದಿದ್ದೇನೆ ಚಿತ್ರಕಲೆ ಕ್ರೀಡೆಯಲ್ಲಿ ಸಹ ಆಸಕ್ತಿ ಹೊಂದಿದ್ದೇನೆ. ಎಸ್‌ಎಸ್‌ಎಲ್‌ಸಿಯಲ್ಲಿ 619 ಅಂಕ ಗಳಿಸಿದ್ದೆ. ನನ್ನ ಮಾತೃಭಾಷೆ ತೆಲುಗು. ಆದರೆ ಚಿಕ್ಕವಯಸ್ಸಿನಿಂದ ಕನ್ನಡವನ್ನೇ ಹೆಚ್ಚು ಮಾತನಾಡುತ್ತೇನೆ.** -ಕೆ.ಚಿತ್ರ ಸ್ಫೂರ್ತಿ

ಅದೇ ರೀತಿ ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯ ಸದ್ವಿದ್ಯಾ ಕಾಂಪೋಸಿಟ್ ಪಿಯು ಕಾಲೇಜಿನ ಕೆ.ಚಿತ್ರ ಸ್ಫೂರ್ತಿಯವರು ವಾಣಿಜ್ಯ ವಿಭಾಗದಲ್ಲಿ ರಾಜ್ಯದ ನಾಲ್ಕನೇ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ರಾಜ್ಯದಲ್ಲಿ ವಾಣಿಜ್ಯ ವಿಭಾಗದಲ್ಲಿ 22 ಮಂದಿ 597 ಅಂಕ ಗಳಿಸಿ ನಾಲ್ಕನೇ ಸ್ಥಾನದಲ್ಲಿದ್ದು, ಅದರಲ್ಲಿ ಇವರೂ ಸೇರಿದ್ದಾರೆ. ಆ ಮೂಲಕ ಡಿ.ಎಸ್.ಧನ್ವಿ ಹಾಗೂ ಕೆ.ಚಿತ್ರ ಸ್ಫೂರ್ತಿ ಜಿಲ್ಲೆಗೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ.

ಜಿಲ್ಲೆಯಲ್ಲಿ ಈ ಬಾರಿ 32,374 ಮಂದಿ ಪರೀಕ್ಷೆ ಬರೆದಿದ್ದು, ಈ ಪೈಕಿ 27,454 ಮಂದಿ ತೇರ್ಗಡೆ ಹೊಂದಿದ್ದಾರೆ. ಇವರಲ್ಲಿ 15,419 ವಿದ್ಯಾರ್ಥಿಗಳು, 19,846 ವಿದ್ಯಾರ್ಥಿನಿಯರಾಗಿದ್ದಾರೆ. ಆ ಮೂಲಕ ಯುವತಿಯರು ಮುನ್ನಡೆ ಸಾಧಿಸಿದ್ದಾರೆ. ಗ್ರಾಮೀಣ ವಿಭಾಗದಲ್ಲಿ ಶೇ.82.35, ನಗರ ವಿಭಾಗದಲ್ಲಿ ಶೇ.85.67, ಕಲಾ ವಿಭಾಗದಲ್ಲಿ ಶೇ.70.04, ವಾಣಿಜ್ಯ ವಿಭಾಗದಲ್ಲಿ ಶೇ.86.55, ವಿಜ್ಞಾನ ವಿಭಾಗದಲ್ಲಿ ಶೇ.90.04ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ದ್ವಿತೀಯ ಪಿಯು ಪರೀಕ್ಷೆ–1 ಫೆ.28ರಿಂದ ಮಾ.17ರವರೆಗೆ ರಾಜ್ಯಾದ್ಯಂತ ನಡೆದಿತ್ತು. ಅಂತೆಯೇ ಮೈಸೂರು ಜಿಲ್ಲೆಯಲ್ಲಿ 51 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು.

ಡಿ.ಎಸ್.ಧನ್ವಿ ಅಂಕ ವಿವರ: ಇಂಗ್ಲಿಷ್ 98, ಸಂಸ್ಕೃತದಲ್ಲಿ 100, ಭೌತಶಾಸ್ತ್ರದಲ್ಲಿ 100, ರಸಾಯನಶಾಸ್ತ್ರದಲ್ಲಿ 99, ಗಣಿತದಲ್ಲಿ 100, ಗಣಕ ವಿಜ್ಞಾನದಲ್ಲಿ 100 ಅಂಕ ಗಳಿಸಿದ್ದಾರೆ. ಡಿ.ಎಸ್.ಧನ್ವಿ ಅವರ ಅಪ್ಪ ಮತ್ತು ಅಮ್ಮ ಸಹ ಭೌತಶಾಸ್ತ್ರ ಅಧ್ಯಾಪಕರು. ಕುಸುಮ ಮತ್ತು ಸುಧನ್ವ ದಂಪತಿ ಪುತ್ರಿಯಾದ ಧನ್ವಿ ಅವರ ಈ ಶೈಕ್ಷಣಿಕ ಸಾಧನೆಗೆ ಪೋಷಕರು ಬೆಂಬಲವಾಗಿದ್ದಾರೆ. ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್ ಪಿಯು ಕಾಲೇಜಿನಲ್ಲೇ ಧನ್ವಿಯವರ ತಂದೆ–ತಾಯಿ ಭೌತಶಾಸ್ತ್ರದ ಅಧ್ಯಾಪಕರು ಎಂಬುದು ವಿಶೇಷ.

ಏರೋನಾಟಿಕಲ್ ಇಂಜಿನಿಯರಿಂಗ್ ಸೇರುವೆ: ತಮ್ಮ ಕಾಲೇಜಿನಲ್ಲಿ ಅಧ್ಯಾಪಕರಿಂದ ಅಭಿನಂದನೆ ಸ್ವೀಕರಿಸಿದ ಧನ್ವಿ ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಪ್ರಥಮ ಪಿಯುನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದೆ. ದ್ವಿತೀಯ ಪಿಯುನಲ್ಲಿ ಪ್ರತಿನಿತ್ಯ ಅಧ್ಯಯನ ಮಾಡುತ್ತಿದ್ದೆ. ಒಂದು ದಿನವೂ ಸಮಯ ವ್ಯರ್ಥ ಮಾಡುತ್ತಿರಲಿಲ್ಲ. ಯಾವುದೇ ಟ್ಯೂಷನ್‌ಗೆ ಹೋಗುತ್ತಿರಲಿಲ್ಲ. ಕಾಲೇಜಿನಲ್ಲಿ ಕೇಳುತ್ತಿದ್ದ ಪಾಠಗಳನ್ನು ಅಧ್ಯಯನ ಮಾಡುತ್ತಿದ್ದೆ. ಟೈಮ್‌ಟೇಬಲ್ ಹಾಕಿಕೊಂಡು ಸಾಕಷ್ಟು ಓದುತ್ತಿದ್ದೆ. ಇದಲ್ಲದೆ, ಚಿತ್ರಕಲೆ, ಸಂಗೀತದಲ್ಲಿ ಆಸಕ್ತಿ ಹೊಂದಿದ್ದೇನೆ ಎಂದರು.

ಕೆ.ಚಿತ್ರ ಸ್ಫೂರ್ತಿ ಅಂಕದ ವಿವರ: ಕನ್ನಡದಲ್ಲಿ 98, ಇಂಗ್ಲಿಷ್‌ನಲ್ಲಿ 99, ವ್ಯವಹಾರ ಅಧ್ಯಯನದಲ್ಲಿ 100, ಅಕೌಂಟೆನ್ಸಿಯಲ್ಲಿ 100, ಸ್ಟ್ಯಾಟಿಸ್ಟಿಕ್ಸ್‌ನಲ್ಲಿ 100 ಹಾಗೂ ಬೇಸಿಕ್ ಮ್ಯಾಕ್ಸ್‌ನಲ್ಲಿ 100 ಅಂಕ (ಶೇ.99.5ರಷ್ಟು) ಪಡೆದಿದ್ದಾರೆ. ನಂಜನಗೂಡು ಅಂಗಡಿ ಬೀದಿ ನಿವಾಸಿಯಾದ ಕೆ.ಚಿತ್ರ ಸ್ಫೂರ್ತಿ ಅವರ ಶೈಕ್ಷಣಿಕ ಸಾಧನೆಗೆ ಕಾಲೇಜಿನಲ್ಲಿ ಅಭಿನಂದಿಸಲಾಯಿತು. ನಂಜನಗೂಡಿನ ಪೂಜಾ ಸಾಮಗ್ರಿ ಅಂಗಡಿ ಮಾಲೀಕ ಕೆ.ಎಸ್.ಕೃಷ್ಣಮೂರ್ತಿ ಹಾಗೂ ಗೃಹಿಣಿ ಜ್ಯೋತಿ ಕೆ.ಮೂರ್ತಿ ದಂಪತಿ ಪುತ್ರಿಯಾದ ಇವರು, ಪ್ರತಿದಿನ ನಂಜನಗೂಡಿನಿಂದ ಮೈಸೂರಿಗೆ ಬಂದು ವ್ಯಾಸಂಗ ಮಾಡುತ್ತಿದ್ದರು.

ಕಾಲೇಜಿನಲ್ಲಿ ಅಭಿನಂದನೆ ಸ್ವೀಕರಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಇವರು, ಈ ಶೈಕ್ಷಣಿಕ ಸಾಧನೆ ನಿಜಕ್ಕೂ ಖುಷಿ ತಂದಿದೆ. ಪ್ರತಿದಿನ ಬೆಳಗ್ಗೆ 3.30ರಿಂದ 5.30ರವರೆಗೆ ಓದುತ್ತಿದ್ದೆ. ಇದು ಬ್ರಾಹ್ಮಿ ಮುಹೂರ್ತ. ಈ ವೇಳೆ ಶೇ.100ರಷ್ಟು ನಮ್ಮ ಮೆದುಳು ಕೆಲಸ ಮಾಡುತ್ತದೆ. ಇದು ವೈಜ್ಞಾನಿಕವಾಗಿ ಸಾಬೀತಾಗಿದೆ. ಹಾಗಾಗಿ ಈ ಸಮಯ ಆಯ್ಕೆ ಮಾಡಿಕೊಂಡು ಓದುತ್ತಿದ್ದೆ. ಪರೀಕ್ಷೆ ಸಂದರ್ಭದಲ್ಲಿ ಐದು ಗಂಟೆ ಓದುತ್ತಿದ್ದೆ. ಯಾವುದೇ ಟ್ಯೂಷನ್‌ಗೆ ಹೋಗುತ್ತಿರಲಿಲ್ಲ. ಶಿಕ್ಷಕರು ಹಾಗೂ ಪೋಷಕರು ಸಹಕಾರ ನೀಡಿದ್ದಾರೆ. ಶಿಕ್ಷಕರ ಮಾರ್ಗದರ್ಶನ ನನ್ನ ಅಧ್ಯಯನಕ್ಕೆ ಸಹಕಾರಿಯಾಯಿತು ಎಂದರು.

'ಪ್ರಸಾದ್' ಕಾಮಗಾರಿಗೆ 'ಹೈ'ತಡೆ

ಸೇರಿದಂತೆ ಸಂಪೂರ್ಣ ವಿವರವನ್ನು ಅಫಿಡವಿಟ್ ಮೂಲಕ ಎರಡು ವಾರದೊಳಗೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ನ್ಯಾಯಾಲಯ ಸೂಚನೆ ನೀಡಿದೆ.

ಒಂದು ವೇಳೆ ಮಧ್ಯಂತರ ಆದೇಶವನ್ನು ಉಲ್ಲಂಘನೆ ಮಾಡಿದರೆ ಅದನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸುತ್ತದೆ. ಅಲ್ಲದೆ ಇದನ್ನು ನ್ಯಾಯಾಂಗ ನಿಂದನೆ ಎಂದು ಕೂಡ ಪರಿಗಣಿಸಲಿದ್ದು, ಜಿಲ್ಲಾಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ದೇವಾಲಯದಲ್ಲಿ ಕೈಗೊಂಡಿರುವ ಕಾಮಗಾರಿ ಶಾಶ್ವತ ಸ್ವರೂಪದ್ದಾಗಿದೆ ಎಂಬುದನ್ನು ಜಿಲ್ಲಾಧಿಕಾರಿಗಳು ಸಲ್ಲಿಸಿರುವ ಅಫಿಡವಿಟ್ ಮೂಲಕ ಸ್ಪಷ್ಟವಾಗುತ್ತದೆ. ಈ ಸಂಬಂಧ ಕಾಮಗಾರಿ ಸ್ಥಗಿತ ಮಾಡುವಂತೆ ನ್ಯಾಯಾಲಯ ನಿರ್ದೇಶನ ನೀಡಿತ್ತು. ಆದರೂ ಕಾಮ ಗಾರಿ ಮುಂದುವರೆಸಿದ ವಿಚಾರವನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿದ್ದು, ಅಂತಿಮ ವಿಚಾರಣೆಯ ಸಮಯದಲ್ಲಿ ಈ ಬಗ್ಗೆ ಪರಿಶೀಲನೆ ನಡೆಸಲಿದೆ. ಜಿಲ್ಲಾಧಿಕಾರಿಗಳು ನ್ಯಾಯಾಲಯದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ನ್ಯಾಯಾಲಯದ ಎಚ್ಚರಿಕೆ ನೀಡಿದೆ.



> **ಹೈಕೋರ್ಟ್ ಆದೇಶದಂತೆ ಕೂಡಲೇ ಪ್ರಸಾದ್ ಯೋಜನೆಯ ಕಾಮಗಾರಿ ಸ್ಥಗಿತಗೊಳಿಸಬೇಕು. ಈಗಾಗಲೇ ನ್ಯಾಯಾಲಯದ ಎರಡು ಆದೇಶ ಉಲ್ಲಂಘನೆ ಮಾಡಿ, ಕಾಮಗಾರಿ ಮುಂದುವರೆಸಿದ್ದಾರೆ. ಈಗ ಮೂರನೇ ಬಾರಿ ಹೈಕೋರ್ಟ್ ತಡೆ ಯಾಜ್ಞೆ ನೀಡಿದೆ. ಒಂದು ವೇಳೆ ನ್ಯಾಯಾಲಯದ ಆದೇಶವನ್ನು ಈಗಲೂ ಉಲ್ಲಂಘನೆ ಮಾಡಿ ಕಾಮಗಾರಿ ಮುಂದುವರೆಸಿದರೆ ದೊಡ್ಡ ಮಟ್ಟದ ಪ್ರತಿಭಟನೆ ನಡೆಸಬೇಕಾಗುತ್ತದೆ.**
> -ಲೋಹಿತ್ ಅರಸ್, ಸಂಚಾಲಕ, ಚಾಮುಂಡಿಬೆಟ್ಟ ಸಂರಕ್ಷಣಾ ಸಮಿತಿ


ಎರಡು ಬಾರಿ ತಡೆಯಾಜ್ಞೆ ಉಲ್ಲಂಘಿಸಿದ್ದಕ್ಕೆ ಕೋರ್ಟ್ ಆಕ್ರೋಶ

ಚಾಮುಂಡಿಬೆಟ್ಟದಲ್ಲಿ ಪ್ರಸಾದ್ ಯೋಜನೆಯಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿ ಸ್ಥಗಿತ ಮಾಡುವಂತೆ 2026ರ ಜನವರಿ 14 ಹಾಗೂ ಫೆಬ್ರವರಿ 17 ರಂದು ನೀಡಿದ್ದ ತಡೆಯಾಜ್ಞೆಯನ್ನು ಪರಿಗಣಿಸದೆ, ಕಾಮಗಾರಿ ಮುಂದುವರೆಸಿದ ರಾಜ್ಯ ಸರ್ಕಾರ ಹಾಗೂ ಜಿಲ್ಲಾಧಿಕಾರಿಗಳ ನಡೆಗೆ ನ್ಯಾಯಾಧೀಶ ಸಚಿನ್ ಶಂಕರ್ ಮುಗದುಮ್, ಕಠಿಣ ಶಬ್ದಗಳಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಯಾವುದೇ ಶಾಶ್ವತ ಸ್ವರೂಪದ ನಿರ್ಮಾಣ ಮಾಡುವುದಿಲ್ಲ ಎಂದು ರಾಜ್ಯ ಸರ್ಕಾರ ತಿಳಿಸಿದ್ದಂತೆ ಅದಕ್ಕೆ ಬದ್ಧವಾಗಿರಬೇಕು ಎಂದು ನ್ಯಾಯಾಲಯ 2026ರ ಜನವರಿ 14ರಂದು ನೀಡಿದ ಮಧ್ಯಂತರ ಆದೇಶದಲ್ಲಿ ತಿಳಿಸಿತ್ತು. ನಂತರ ಫೆಬ್ರವರಿ 17 ರಂದು ನಡೆದ ವಿಚಾರಣೆ ವೇಳೆಯೂ ನ್ಯಾಯಾಲಯ ಇದೇ ಸೂಚನೆಯನ್ನು ಪುನರುಚ್ಚಾರ ಮಾಡಿತ್ತು. ಆದರೂ ದೇವಾಲಯದ ಆವರಣದಲ್ಲಿ ನಿರ್ಮಾಣ ಚಟುವಟಿಕೆ ಮುಂದುವರೆದಿದೆ. ಈ ಮೂಲಕ ನ್ಯಾಯಾಲಯದ ಆದೇಶವನ್ನು ನಿರ್ಲಕ್ಷಿಸಲಾಗಿದೆ. ನಿರ್ಮಾಣ ಕಾಮಗಾರಿ ಗಣನೀಯ ಪ್ರಮಾಣದಲ್ಲಿದ್ದು, ಸಣ್ಣ ಅಥವಾ ತಾತ್ಕಾಲಿಕ ನಿರ್ಮಾಣ ಕಾರ್ಯವೆಂದು ಅರ್ಥೈಸಲು ಸಾಧ್ಯವಿಲ್ಲ. ಇದು ನ್ಯಾಯಾಲಯಕ್ಕೆ ಸಲ್ಲಿಸಿರುವ ಫೋಟೋಗಳಿಂದ ಸ್ಪಷ್ಟವಾಗಿದೆ ಎಂದು ಸಚಿನ್ ಶಂಕರ್ ಮುಗದುಮ್ ಹೇಳಿದ್ದಾರೆ.

ಇದನ್ನೆಲ್ಲಾ ಪರಿಗಣಿಸಿ ನ್ಯಾಯಾಲಯ ಮಧ್ಯಂತರ ಆದೇಶ ನೀಡಿದ್ದರೂ ಅದನ್ನು ಉಲ್ಲಂಘಿಸಲಾಗಿದೆ. ಭಕ್ತರ ಅನುಕೂಲಕ್ಕಾಗಿ ಮೂಲಭೂತ ಸೌಕರ್ಯ ಕಲ್ಪಿಸಲು ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಇದನ್ನು ನ್ಯಾಯಾಲಯ ಒಪ್ಪಿದೆಯಾದರೂ ತಡೆಯಾಜ್ಞೆ ಬಳಿಕವೂ ಶಾಶ್ವತ ನಿರ್ಮಾಣ ಕಾಮಗಾರಿ ಕೈಗೊಂಡಿರುವುದು ಸರಿಯಲ್ಲ ಎಂದಿದ್ದಾರೆ.

ಅನನ್ಯಗೆ ಉನ್ನತ ಶ್ರೇಣಿ



ಮೈಸೂರು, ಏ.9– ದ್ವಿತೀಯ ಪಿಯು ಪರೀಕ್ಷೆಯಲ್ಲಿ ಮೈಸೂರಿನ ಸಿದ್ದಾರ್ಥ ಲೇಔಟ್‌ನ ಬದ್ರಿ ಪ್ರಸಾದ್‌ಜೀ ಪಿಯು ಕಾಲೇಜಿನ ವಿದ್ಯಾರ್ಥಿನಿ ಜಿ.ಅನನ್ಯಾ 600ಕ್ಕೆ 516 (ಶೇ.86) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾಳೆ. ಪತ್ರಿಕಾ ವಿತರಕರಾದ ಗಣೇಶ್ ಹಾಗೂ ಮಂಗಳ ದಂಪತಿ ಪುತ್ರಿ, ಕನ್ನಡದಲ್ಲಿ 90, ಸಂಸ್ಕೃತ 100, ಭೌತಶಾಸ್ತ್ರ 88 ರಾಸಾಯನ ಶಾಸ್ತ್ರ 74, ಗಣಿತ ಹಾಗೂ ಜೀವಶಾಸ್ತ್ರ ವಿಷಯಗಳಲ್ಲಿ 82 ಅಂಕ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾಳೆ.

ಮೈಸೂರು ಮಿತ್ರ

ಚಾಮರಾಜ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾರ್ಯ ಕೈಗೊಳ್ಳಲು

ಸಚಿವ ಸೋಮಣ್ಣರಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ಮನವಿ



ಕೇಂದ್ರ ಸಚಿವ ವಿ.ಸೋಮಣ್ಣ ಅವರಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ಮನವಿ ಸಲ್ಲಿಸಿದರು.

ಮೈಸೂರು, ಏ.9– ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಾಹನ ದಟ್ಟಣೆ ನಿಯಂತ್ರಣ ಹಾಗೂ ಸುಗಮ ಸಂಚಾರಕ್ಕಾಗಿ ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ಮನವಿ ಸಲ್ಲಿಸಿದರು.

ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿ ಸಭಾಂಗಣದಲ್ಲಿ ಕೇಂದ್ರ ಸಚಿವರುಗಳಾದ ಹೆಚ್.ಡಿ.ಕುಮಾರ ಸ್ವಾಮಿ ಹಾಗೂ ವಿ.ಸೋಮಣ್ಣ ಜಂಟಿ ಸುದ್ದಿಗೋಷ್ಠಿ ನಡೆಸಿದ ಸಂದರ್ಭದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮ ರಾಜ ಒಡೆಯರ್ ಸಮ್ಮುಖದಲ್ಲಿ ಮನವಿ ಸಲ್ಲಿಸಿದ ಪ್ರತಾಪ್ ಸಿಂಹ, ಆದ್ಯತೆಯಾಗಿ ಪರಿಗಣಿಸುವಂತೆ ಕೋರಿದರು.

ನಗರದ ಕೆ.ಜಿ.ಕೊಪ್ಪಲಿನ ರೈಲ್ವೆ ಅಂಡರ್ ಬ್ರಿಡ್ಜ್ ಕಿರಿದಾಗಿರುವುದರಿಂದ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದ್ದು, ಕೂಡಲೇ ರೈಲ್ವೆ ಅಂಡರ್ ಬ್ರಿಡ್ಜ್ ಅನ್ನು ವಿಸ್ತರಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿ ಕೊಡಬೇಕು. ಅಶೋಕಪುರಂ ರೈಲ್ವೆ ನಿಲ್ದಾಣವನ್ನು ಅಮೃತ ಭಾರತ ರೈಲ್ವೆ ನಿಲ್ದಾಣ ಯೋಜನೆಯಡಿ ಅಭಿವೃದ್ಧಿಪಡಿಸ ಬೇಕು ಹಾಗೂ ಯಶವಂತಪುರ– ಬಾರ್ಮೆರ್ ಸಾಪ್ತಾಹಿಕ ರೈಲು(ರೈಲು ಸಂಖ್ಯೆ 14805/06) ಸಂಚಾರವನ್ನು ಮೈಸೂರಿನವರೆಗೆ ವಿಸ್ತರಿಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಶಾಸಕ ಜಿ.ಡಿ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ನಗರ ಬಿಜೆಪಿ ಅಧ್ಯಕ್ಷ ರಾದ ಮಾಜಿ ಶಾಸಕ ಎಲ್.ನಾಗೇಂದ್ರ ಮಾಜಿ ಸಂಸದ ಸಿ.ಎಸ್.ಪುಟ್ಟರಾಜು ಮತ್ತಿತರರಿದ್ದರು.

ಮೈಸೂರು–ಬೆಂಗಳೂರು ರೈಲು ವೇಗ ಗಂಟೆಗೆ 135 ಕಿಮೀಗೆ ಹೆಚ್ಚಳ

● ಇನ್ನು ಒಂದೇ ಗಂಟೆಯಲ್ಲಿ ಉಭಯ ನಗರಗಳ ಸಂಪರ್ಕ ಭಾಗ್ಯ ● ರಾಜ್ಯದಲ್ಲಿ ಪ್ರಗತಿಯಲ್ಲಿದೆ 52 ಸಾವಿರ ಕೋಟಿ ರೈಲ್ವೆ ಯೋಜನೆ ● ಇನ್ನೆರಡು ವರ್ಷದಲ್ಲಿ ರೈಲ್ವೆ ಕ್ರಾಸಿಂಗ್ ಮಾಯ ● ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮಾಹಿತಿ



ಜಂಟಿ ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ, ಎಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಮೈಸೂರು, ಏ.9(ವಿವಿಹೆಚ್)–ಮೈಸೂರು–ಬೆಂಗಳೂರು ರೈಲುಗಳ ವೇಗವನ್ನು ಗಂಟೆಗೆ 110 ಕಿ.ಮೀ.ನಿಂದ 135 ಕಿ.ಮೀ.ಗೆ ಹೆಚ್ಚಳ ಮಾಡಲಾಗಿದ್ದು, ಉಭಯ ನಗರಗಳ ನಡುವೆ ಇನ್ನು ಒಂದೇ ಗಂಟೆಯಲ್ಲಿ ಸಂಪರ್ಕ ಸಾಧ್ಯವಿದೆ ಎಂದು ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ.

ಅಲ್ಲದೆ, ರಾಜ್ಯದಲ್ಲಿ 52 ಸಾವಿರ ಕೋಟಿ ವೆಚ್ಚದ ರೈಲ್ವೆ ಯೋಜನೆಗಳು ಪ್ರಗತಿಯಲ್ಲಿದ್ದು, ಕಳೆದ ಹತ್ತು ವರ್ಷದಲ್ಲಿ 1750 ಕಿ.ಮೀ. ಉದ್ದದ ಹೊಸ ರೈಲು ಮಾರ್ಗ ನಿರ್ಮಿಸಲಾಗಿದೆ ಎಂದು ತಿಳಿಸಿದರು.

ನಗರದ ಮೈಸೂರು ರೈಲ್ವೆ ಜಂಕ್ಷನ್‌ನಲ್ಲಿರುವ ಆರ್‌ಎಂಎ ಸಭಾಂಗಣದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರೊಂದಿಗೆ ವಿ.ಸೋಮಣ್ಣ ಗುರುವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಶೇ.97ರಷ್ಟು ವಿದ್ಯುದ್ದೀಕರಣ: ಪ್ರಧಾನಿ ನರೇಂದ್ರ ಮೋದಿ ಅವರು 2026–27ನೇ ಸಾಲಿಗೆ ರೈಲ್ವೆ ಇಲಾಖೆಗೆ 2.93 ಲಕ್ಷ ಕೋಟಿ ರೂ. ನೀಡಿದ್ದಾರೆ. ಇದರಲ್ಲಿ ಕರ್ನಾಟಕಕ್ಕೆ 52.950 ಕೋಟಿ ರೂ. ವೆಚ್ಚದಲ್ಲಿ ವಿವಿಧ ಹಂತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಹಾಗೂ ರಾಜ್ಯದಲ್ಲಿ ಶೇ.97ರಷ್ಟು ರೈಲು ಸಂಚಾರಗಳು ವಿದ್ಯುದ್ದೀಕರಣವಾಗಿದ್ದು, ಕೇವಲ ಶೇ.3ರಷ್ಟು ಆಗಬೇಕಿದೆ. ಮುಂದಿನ ದಿನಗಳಲ್ಲಿ ಶೇ.100 ರಷ್ಟು ಪ್ರಗತಿ ಸಾಧಿಸಲಾಗುವುದು ಎಂದರು.

ಅಮೃತ ಭಾರತ್ ಯೋಜನೆಯಡಿ 1900 ಕೋಟಿ ವೆಚ್ಚದಲ್ಲಿ 61 ರೈಲು ನಿಲ್ದಾಣಗಳನ್ನು ನವೀಕರಿಸಲಾಗುತ್ತಿದೆ. 14 ಜಿಲ್ಲೆಗಳ 23 ರೈಲ್ವೆ ನಿಲ್ದಾಣದಲ್ಲಿ 12 ಒಂದೇ ಭಾರತ್ ರೈಲುಗಳು ಸಂಚಾರ ನಡೆಸುತ್ತಿವೆ ಎಂದು ಮಾಹಿತಿ ನೀಡಿದರು.

ರೈಲು ವೇಗ ಹೆಚ್ಚಳ: ಬೆಂಗಳೂರು–ಮೈಸೂರು ನಡುವೆ ಸಂಚರಿಸುವ ರೈಲುಗಳ ಗರಿಷ್ಠ ವೇಗವನ್ನು 110 ರಿಂದ 135 ಕಿ.ಮೀ.ಗೆ ಹೆಚ್ಚಿಸಿದ್ದು, ಇದರಿಂದ ಈ ಎರಡು ನಗರಗಳ ನಡುವಿನ ಪ್ರಯಾಣದ ಅವಧಿ ಒಂದು ಗಂಟೆಗೆ ಇಳಿಯಲಿದೆ. ಮೈಸೂರು–ಬೆಂಗಳೂರು ಒಂದೇ ನಾಣ್ಯದ ಎರಡು ಮುಖಗಳಂತೆ ಇದ್ದು, ಈ ಭಾಗದಲ್ಲಿ ಯಾವುದೇ ತೊಂದರೆ ಬಾರದಂತೆ ನೋಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಇನ್ನೆರಡು ವರ್ಷದಲ್ಲಿ ರೈಲ್ವೆ ಕ್ರಾಸಿಂಗ್ ಮಾಯ: ರಾಜ್ಯದ'ಲ್ಲಿ ನಾವು ಬರುವವರೆಗೆ ಕೇವಲ 120–130 ಫ್ಲೈ ಓವರ್ ಆಗಿದ್ದವು. 2014 ರಿಂದ ಇಲ್ಲಿಯವರೆಗೆ 707 ಮೇಲ್ಸೇತುವೆ ಮತ್ತು ಕೆಳ ಸೇತುವೆ ಮಾಡಿದ್ದೇವೆ. ಇನ್ನೆರಡು ವರ್ಷದಲ್ಲಿ ರೈಲ್ವೆ ಕ್ರಾಸಿಂಗ್ ಮುಕ್ತ ರಾಜ್ಯವನ್ನಾಗಿ ಮಾಡುತ್ತೇವೆ ಎಂದರು.

ಮೈಸೂರಿಗೆ ಮತ್ತೆರಡು ಮೆಮು ರೈಲು: ಬೆಂಗಳೂರು ನಗರದ ಜನ ಹಾಗೂ ವಾಹನ ಸಂದಣಿಯನ್ನು ಕಡಿಮೆ ಮಾಡಲು ಕೆಲವು ಮಾರ್ಪಾಡು ಮಾಡಲಾಗುತ್ತಿದೆ. ಬೆಂಗಳೂರಿಗೆ ಪರ್ಯಾಯವಾಗಿ ಮೈಸೂರು, ತುಮಕೂರಿನಂತಹ ನಗರಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ. ರಾಜಧಾನಿಯಿಂದ ಮೈಸೂರಿಗೆ ಸದ್ಯದಲ್ಲೇ ಇನ್ನೂ ಎರಡು ಮೆಮು ರೈಲುಗಳು ಸಂಚರಿಸಲಿವೆ ಎಂದರು.

ರಾಜ್ಯ ಸರ್ಕಾರದ ಅಸಹಕಾರ: ಮಂಗಳೂರು–ಕುಕ್ಕೆ ಸುಬ್ರಹ್ಮಣ್ಯ ನಡುವಿನ 51 ಕಿ.ಮೀ. ಪ್ರಯಾಣದ ರೈಲು ಮಾರ್ಗವನ್ನು ವಿದ್ಯುದೀಕರಣ ಮಾಡಿದ್ದು ನಮ್ಮ ಸಾಧನೆ. 6 ಸಾವಿರ ಕೋಟಿ ವೆಚ್ಚದಲ್ಲಿ ಮೆಗಾ ಕೋಚಿಂಗ್ ಕೇಂದ್ರ ನಿರ್ಮಾಣಕ್ಕೂ ಯೋಜನೆ ರೂಪಿಸಿದ್ದೇವೆ ಎಂದರು.

ರೈಲ್ವೆ ಯೋಜನೆಗೆ ಕಂಟಕ: ಮಲ್ಲಿಕಾರ್ಜುನ ಖರ್ಗೆ ಅವರ ಅಧಿಕಾರಾವಧಿಯಲ್ಲಿ ಬೆಂಗಳೂರಿನಿಂದ ಕನಕಪುರ, ಕೊಳ್ಳೇಗಾಲ ಮಾರ್ಗವಾಗಿ ಚಾಮರಾಜನಗರದವರೆಗೆ 142 ಕಿ.ಮೀ. ಉದ್ದದ ರೈಲು ಮಾರ್ಗ ನಿರ್ಮಾಣಕ್ಕೆ 1200 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗಿತ್ತು. ಆದರೆ 2024ರ ಡಿಸೆಂಬರ್ 12ರಂದು ಪತ್ರ ಬರೆದ ರಾಜ್ಯ ಸರ್ಕಾರ, ಯೋಜನೆಯನ್ನು ಕೈ ಬಿಡುವುದಾಗಿ ಹೇಳಿತ್ತು ಇದರೊಂದಿಗೆ ಮೈಸೂರು–ಹುಣಸೂರು–ಕುಶಾಲನಗರ ಮಾರ್ಗ ನಿರ್ಮಾಣವನ್ನು ಸಹ ಕೈಬಿಟ್ಟಿತು. ಆ ಮೂಲಕ ಅಭಿವೃದ್ಧಿಗೆ ರಾಜ್ಯ ಸರ್ಕಾರ ತೊಡಕಾಗಿದೆ.

ನಾನು ಬರುವುದಕ್ಕೂ ಮುಂಚೆಯೇ ಸುಮಾರು 3270 ಎಕರೆ ಜಾಗ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಇನ್ನು ಸಾವಿರಾರು ಎಕರೆ ಜಾಗ ಸ್ವಾಧೀನಪಡಿಸಿ ಕೊಳ್ಳಬೇಕಿದೆ. ಹಾಗೂ ರಾಜ್ಯದಲ್ಲಿ ಅತ್ಯಗತ್ಯವಾಗಿ ಬೇಕಾಗಿರುವ ಹಲವಾರು ಅಭಿವೃದ್ಧಿ ಕಾಮಗಾರಿಗಳಿಗೆ ಸಹಾಯವನ್ನೂ ನೀಡದೆ ರಾಜ್ಯಸರ್ಕಾರ ನೀರಸ ಪ್ರತಿಕ್ರಿಯೆ ತೋರುತ್ತಿದೆ ಎಂದರು.

ಸಿಎಂಗೆ ಎದಿರೇಟು: 18 ಬಾರಿ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮಣ್ಣ ಅವರಿಗೆ ಕೆಲಸ ಇಲ್ಲ, ಸುಖಾಸುಮ್ಮನೆ ಕಾಲ ಕಳೆಯುತ್ತಿದ್ದಾರೆ ಎಂದು ಹೇಳಿದ್ದರು. ಆದರೆ ಅನಿರೀಕ್ಷಿತವಾಗಿ ಕೇಂದ್ರ ಸಚಿವರು ಆದ ನಾನು ಹಾಗೂ ಎಚ್.ಡಿ.ಕುಮಾರಸ್ವಾಮಿ ಸಾಕಷ್ಟು ಕೆಲಸ ಮಾಡುತ್ತಿದ್ದೇವೆ. ಜನರೊಂದಿಗೆ ಒಡನಾಟ, ಪ್ರೀತಿ ಮತ್ತು ನಂಬಿಕೆಯನ್ನು ಕಣ್ಣಾರೆ ನೋಡಿದ್ದೇನೆ ಎಂದರು.

ಕೇಂದ್ರ ಎಲ್ಲವನ್ನೂ ಕೊಟ್ಟಿದೆ: ಸಿದ್ದರಾಮಯ್ಯ ಎಲ್ಲೋ ಒಂದು ಕಡೆ ಕುಳಿತು ಪ್ರದಾನಿ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ರಾಜ್ಯಕ್ಕೆ ಏನನ್ನೂ ಕೊಟ್ಟಿಲ್ಲ ಎಂದು ದೂರುತ್ತಿದ್ದಾರೆ. ಇದನ್ನೆಲ್ಲಾ ಕೊಟ್ಟಿರುವುದು ಕೇಂದ್ರವೇ. ಆದರೆ ನೀವು ಯಾವುದೋ ಸಣ್ಣಪುಟ್ಟ ಭಾಗ್ಯಗಳನ್ನು ಕೊಟ್ಟು, ಅದರ 500 ಪಟ್ಟು ಲಾಭವಿಲ್ಲದೇ ಹಳ್ಳ ಹಿಡಿಯುತ್ತಿದೆ. ಈ ಬಗ್ಗೆ ಚಿಂತಿಸದೇ ಎನ್‌ಡಿಎ ಸರ್ಕಾರವನ್ನು ದೂಷಿಸುವ ಕೆಲಸ ಮಾಡುತ್ತೀದೀರಿ ಎಂದು ಕಿಡಿಕಾರಿದರು.

ಮಾತನಾಡುವ ಬದಲು ದಾಖಲೆಗಳ ಸಮೇತ ಪ್ರಶ್ನಿಸಲಿ, ಅದಕ್ಕೆ ತಕ್ಕ ಉತ್ತರ ನೀಡುತ್ತೇವೆ. ಅದನ್ನು ಬಿಟ್ಟು ಹಿಟ್ ಅಂಡ್ ರನ್ ಹೇಳಿಕೆ ನೀಡುವುದು ಸರಿಯಲ್ಲ ಎಂದರು.

ವಿಂಡೋ ಟ್ರೇಲಿಂಗ್: ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ, ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರ ಸ್ವಾಮಿ ಹಾಗೂ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಒಳಗೊಂಡ ತಂಡವು ಗುರುವಾರ ವಿಶೇಷ ರೈಲಿನಲ್ಲಿ ಬೆಂಗಳೂರು–ಮೈಸೂರು ನಡುವೆ ವಿಂಡೋ ಟ್ರೇಲಿಂಗ್ ಪರಿವೀಕ್ಷಣೆ ಮಾಡಿದರು.

ಬೆಳಗ್ಗೆ 10ಕ್ಕೆ ಬೆಂಗಳೂರು ಕೆಎಸ್‌ಆರ್ ನಿಲ್ದಾಣದಿಂದ ಹೊರಟು ಮಧ್ಯಾಹ್ನ 2.45ರ ವೇಳೆಗೆ ಮೈಸೂರಿಗೆ ಆಗಮಿಸಿದರು. ಎಂಟು ನಿಲ್ದಾಣಗಳಿಗೆ ಭೇಟಿ ಕೊಟ್ಟು ಜನರ ಅಹವಾಲು ಆಲಿಸಿ, ನಿಲ್ದಾಣದಲ್ಲಿನ ಮೂಲ ಸೌಕರ್ಯ, ಅಭಿವೃದ್ಧಿ ಕಾಮಗಾರಿ, ಸ್ವಚ್ಛತೆ, ಸ್ಥಳ ಪರಿಶೀಲನೆ ನಡೆಸಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರ ಸ್ವಾಮಿ, ಸೋಮಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಡಿ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಆರ್‌ಎಂಎ ಮುದಿತ್ ಮಿತ್ತಲ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಸಂಸದ ಪ್ರತಾಪ್ ಸಿಂಹ ಉಪಸ್ಥಿತರಿದ್ದರು.

ದಾವಣಗೆರೆ–ಬಾಗಲಕೋಟೆಯಲ್ಲಿ ಕ್ರಮವಾಗಿ ಶೇ.68.55, ಶೇ.68.74 ರಷ್ಟು ಮತದಾನ!

ಬೆಂಗಳೂರು: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಮತದಾರರು ತಮ್ಮ ಹಕ್ಕು ಚಲಾಯಿಸಿದ್ದು, ಅಭ್ಯರ್ಥಿಗಳ ಭವಿಷ್ಯ ಈಗ ಇವಿಎಂ ಸೇರಿದೆ.

ರಾಷ್ಟ್ರೀಯ ಮಟ್ಟದ ಅಬ್ಬರದ ನಡುವೆ ಕರ್ನಾಟಕದ ಎರಡು ಪ್ರಮುಖ ಜಿಲ್ಲೆಗಳಲ್ಲೂ ಮತದಾರರು ತಮ್ಮ ತೀರ್ಪನ್ನು ನೀಡಿದ್ದಾರೆ.

ದಾವಣಗೆರೆ ದಕ್ಷಿಣ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿ ಒಟ್ಟು ಶೇ. 68.55 ರಷ್ಟು ಮತದಾನವಾಗಿದೆ. ಕುತೂಹಲಕಾರಿ ಸಂಗತಿಯೆಂದರೆ, 2023ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಇಲ್ಲಿ ಮತದಾನದ ಪ್ರಮಾಣ ತುಸು ಕಡಿಮೆಯಾಗಿದೆ. 2023ರಲ್ಲಿ ಶೇ. 69.08 ರಷ್ಟು ಮತದಾನವಾಗಿತ್ತು. ಬಿಸಿಲಿನ ತಾಪ ಅಥವಾ ಮತದಾರರ ನಿರಾಸಕ್ತಿ ಈ ಅಲ್ಪ ಇಳಿಕೆಗೆ ಕಾರಣವೇ ಎಂಬ ಚರ್ಚೆ ಈಗ ಶುರುವಾಗಿದೆ.

ಬಾಗಲಕೋಟೆ ಉಪಚುನಾವಣೆ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆ–2026ರ ಪ್ರಕ್ರಿಯೆಯು ಬಹುತೇಕ ಶಾಂತಿಯುತವಾಗಿ ಮುಕ್ತಾಯ ಗೊಂಡಿದೆ. ಪ್ರಾಥಮಿಕ ವರದಿಗಳ ಪ್ರಕಾರ, ಕ್ಷೇತ್ರದಲ್ಲಿ ಅಂದಾಜು ಶೇ. 68.74 ರಷ್ಟು ಮತದಾನ ದಾಖಲಾಗಿದೆ. ಜಿಲ್ಲಾಡಳಿತದ ಬಿಗಿ ಭದ್ರತೆ ಹಾಗೂ ಸೂಕ್ತ ವ್ಯವಸ್ಥೆಗಳಿಂದಾಗಿ ಯಾವುದೇ ಅಹಿತಕರ ಘಟನೆ ನಡೆಯದೆ ಪ್ರಕ್ರಿಯೆ ಯಶಸ್ವಿಯಾಗಿದೆ.

ಯಾರಿಗೆ ಒಲಿಯಲಿದೆ ವಿಜಯಲಕ್ಷ್ಮೀ: ದಾಖಲೆ ಪ್ರಮಾಣದ ಮತದಾನ ನಡೆದಿರುವುದು ರಾಜಕೀಯ ವಿಶ್ಲೇಷಕರಲ್ಲಿ ಸಂಚಲನ ಮೂಡಿಸಿದೆ. ಸಾಮಾನ್ಯವಾಗಿ ಹೆಚ್ಚಿನ ಮತದಾನವು ಬದಲಾವಣೆಯ ಹಂಬಲವನ್ನು ಸೂಚಿಸುತ್ತದೆ ಎನ್ನಲಾಗುತ್ತಿದೆ.

ಕೇರಳ 78.24%, ಅಸ್ಸಾಂ 85.66%, ಪುದುಚೇರಿಯಲ್ಲಿ 89.89% ಮತದಾನ

ನವದೆಹಲಿ: ಅಸ್ಸಾಂ, ಕೇರಳ ಮತ್ತು ಪುದುಚೇರಿಯಲ್ಲಿ ಇಂದು ಮತದಾನ ಮುಕ್ತಾಯವಾಯಿತು. ಬೆಳಿಗ್ಗೆ 7 ಗಂಟೆಗೆ ಪ್ರಾರಂಭವಾದ ಮತದಾನ ಪ್ರಕ್ರಿಯೆ ಬಿಗಿ ಭದ್ರತೆಯಲ್ಲಿ ನಡೆಯಿತು.

ಕೇರಳದ 140, ಅಸ್ಸಾಂನ 126 ಮತ್ತು ಪುದುಚೇರಿಯ 30 ವಿಧಾನಸಭಾ ಸ್ಥಾನಗಳಿಗೆ ಮತದಾನ ನಡೆಯಿತು. ಪುದುಚೇರಿಯಲ್ಲಿ ಅತೀ ಹೆಚ್ಚು ಶೇ. 89.89% , ಅಸ್ಸಾಂ ಶೇ. 85.66%, , ಕೇರಳ ಶೇ78.24%, ಮತದಾನ ನಡೆದಿದೆ. ಕೇರಳದಲ್ಲಿ, 2.71 ಕೋಟಿ ಮತದಾರರು 883 ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ. ಇದರಲ್ಲಿ 1.32 ಕೋಟಿ ಪುರುಷರು, 1.39 ಕೋಟಿ ಮಹಿಳೆಯರು ಮತ್ತು 273 ಟ್ರಾನ್ಸ್‌ಜೆಂಡರ್ ಮತದಾರರು ಸೇರಿದ್ದಾರೆ. ಅಸ್ಸಾಂನಲ್ಲಿ ಒಟ್ಟು 2.50 ಕೋಟಿ ಮತದಾರರಿದ್ದು, ಅವರು 31,490 ಮತಗಟ್ಟೆಗಳಲ್ಲಿ ತಮ್ಮ ಮತ ಚಲಾಯಿಸಿದರು.

ಪುದುಚೇರಿಯಲ್ಲಿ ಸಾರ್ವಕಾಲಿಕ ದಾಖಲೆ: ಈ ಬಾರಿಯ ಚುನಾವಣೆಯಲ್ಲಿ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿ ಇಡೀ ದೇಶದ ಗಮನ ಸೆಳೆದಿದೆ ರಾತ್ರಿ 7 ಗಂಟೆಯ ವೇಳೆಗೆ ದೊರೆತ ಮಾಹಿತಿ ಪ್ರಕಾರ, ಪುದುಚೇರಿಯಲ್ಲಿ ಶೇ. 89.7 ರಷ್ಟು ದಾಖಲೆ ಮತದಾನವಾಗಿದೆ.

ಇದು ಈ ಪ್ರದೇಶದ ಇತಿಹಾಸದಲ್ಲೇ ಅತ್ಯಂತ ಹೆಚ್ಚಿನ ಮತದಾನ ಎಂದು ಗುರುತಿಸಲ್ಪಟ್ಟಿದೆ. ಹಗಲಿಡೀ ಮತಗಟ್ಟೆಗಳ ಮುಂದೆ ಸುದೀರ್ಘ ಸಾಲಿನಲ್ಲಿ ನಿಂತಿದ್ದ ಮತದಾರರು, ಪ್ರಜಾಪ್ರಭುತ್ವದ ಮೇಲಿರುವ ತಮ್ಮ ನಂಬಿಕೆಯನ್ನು ಸಾಬೀತುಪಡಿಸಿದ್ದಾರೆ.


ಮಲ್ಲಿಕಾರ್ಜುನ ಖರ್ಗೆ 21ನೇ ಶತಮಾನದ ಮಹಮ್ಮದ್ ಅಲಿ ಜಿನ್ನಾ; ಸಿಂಹ ವಾಗ್ದಾಳಿ

ಮೈಸೂರು, ಏ.9– ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 21ನೇ ಶತಮಾನದ ಮಹಮ್ಮದ್ ಅಲಿ ಜಿನ್ನಾ ರೀತಿಯಲ್ಲಿ ಮಾತನಾಡುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ವಾಗ್ದಾಳಿ ನಡೆಸಿದ್ದಾರೆ. ಮೈಸೂರಿನಲ್ಲಿ ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ವಿಷ ಸರ್ಪವಿದ್ದಂತೆ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯನ್ನು ಕಟುವಾಗಿ ಖಂಡಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವತ್ತಿನ ಮುಸ್ಲಿಂ ಲೀಗ್ ಅಧ್ಯಕ್ಷ ಜಿನ್ನಾ ಹೇಗೆ ಮಾತನಾಡಿದ್ದರೋ, ಅದೇ ಶೈಲಿಯಲ್ಲಿ ಮಾತನಾಡುತ್ತಿದ್ದಾರೆ. ಇಂದು ಕಾಂಗ್ರೆಸ್‌ನಲ್ಲಿ ಖರ್ಗೆಯೇ ಮುಸ್ಲಿಂ ಲೀಗ್ ಮನೋಭಾವವನ್ನು ಪ್ರತಿನಿಧಿಸುತ್ತಿದ್ದಾರೆ. ಅಪ್ಪ–ಮಗನಿಗೆ ಆರ್‌ಎಸ್‌ಎಸ್ ಹುಚ್ಚು ಹಿಡಿದಿದೆ. ಮಗನಿಗೆ ಹಿಡಿದ ಹುಚ್ಚು ಈಗ ಅಪ್ಪನಿಗೂ ಬಂದಿದೆ. ಆರ್‌ಎಸ್‌ಎಸ್ ಬಗ್ಗೆ ಮಾತನಾಡದೆ ಇದ್ದರೆ ಅಪ್ಪ–ಮಗನಿಗೆ ತಿಂದಿದ್ದು ಕರಗಲ್ಲ. ಎಐಸಿಸಿ ಅಧ್ಯಕ್ಷ ಸ್ಥಾನವನ್ನು ಉಳಿಸಿಕೊಳ್ಳುವ ಉದ್ದೇಶದಿಂದಲೇ ಖರ್ಗೆ ಈ ರೀತಿಯ ಹೇಳಿಕೆಗಳನ್ನು ನೀಡುತ್ತಿರಬಹುದು ಎಂದು ವ್ಯಂಗ್ಯವಾಡಿದರು.

ದೇಶಾದ್ಯಂತ ಕೋಮು ದ್ವೇಷವನ್ನು ಉಂಟುಮಾಡುವ ರೀತಿಯಲ್ಲಿ ಖರ್ಗೆ ಹೇಳಿಕೆ ನೀಡಿದ್ದಾರೆ. ಆರ್‌ಎಸ್‌ಎಸ್ ಅನ್ನು ಬೆಳೆಸಿರುವುದು ಹಿಂದೂಗಳು. ಹೀಗಾಗಿ, ಅವರ ಹೇಳಿಕೆಗಳಿಂದ ಹಿಂದೂ ಸಮುದಾಯವನ್ನು ಅವಮಾನಿಸಿದಂತಾಗಿದೆ. ಖರ್ಗೆ ಅವರ ಕುಟುಂಬವೇ ಹಿಂದೆ ಕೋಮು ಹಿಂಸಾಚಾರದ ನೋವು ಅನುಭವಿಸಿದೆ. ಆದರೂ ಅವರು ಇಂದು ಅದೇ ಸಮುದಾಯದ ಓಲೈಕೆ ಮಾತನಾಡುತ್ತಿರುವುದು ವಿಷಾದನೀಯ. ಇದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯಗಿಂತಲೂ ಖರ್ಗೆ ಮುಂದೆ ಹೋಗಿದ್ದಾರೆ. ಖರ್ಗೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಪ್ರತಾಪ್ ಸಿಂಹ ಆಗ್ರಹಿಸಿದರು.

ಸೌಜನ್ಯ ಭೇಟಿ



ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಗುರುವಾರ ಮೈಸೂರು ಅರಮನೆಯಲ್ಲಿ ರಾಜವಂಶಸ್ಥರಾದ ಶ್ರೀಮತಿ ಪ್ರಮೋದಾ ದೇವಿ ಅವರನ್ನು ಭೇಟಿ ಮಾಡಿ, ಕುಶಲೋಪರಿ ವಿಚಾರಿಸಿದರು. ಈ ವೇಳೆ ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಸಂಸದ ಪ್ರತಾಪ್ ಸಿಂಹ ಉಪಸ್ಥಿತರಿದ್ದರು.

ಅತ್ಯುನ್ನತ ಶ್ರೇಣಿ



ಮೈಸೂರು, ಏ.9– ದ್ವಿತೀಯ ಪಿಯು ಪರೀಕ್ಷೆಯಲ್ಲಿ ಬೆಂಗಳೂರಿನ ಸಿಎಂಆರ್ ಕಾಲೇಜು ವಿದ್ಯಾರ್ಥಿ ಎಸ್.ಆದಿತ್ಯ ಸುಬ್ರಹ್ಮಣ್ಯ ವಿಜ್ಞಾನ ವಿಭಾಗದಲ್ಲಿ 600ಕ್ಕೆ 589(ಶೇ.98.5) ಅಂಕಗಳಿಸಿ, ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಸತೀಶ್ ಹಾಗೂ ಕಲಾ ದಂಪತಿ ಪುತ್ರನಾದ ಈತ, ಕನ್ನಡದಲ್ಲಿ 98, ಇಂಗ್ಲಿಷ್‌ನಲ್ಲಿ 95, ಭೌತಶಾಸ್ತ್ರ ರಾಸಾಯನ ಶಾಸ್ತ್ರ ಗಣಿತ ಹಾಗೂ ಜೀವಶಾಸ್ತ್ರದಲ್ಲಿ ತಲಾ 99 ಅಂಕ ಗಳಿಸಿದ್ದಾನೆ.

ಉನ್ನತ ಶ್ರೇಣಿ



ಮೈಸೂರು, ಏ.9– ಮೈಸೂರಿನ ಎಸ್‌ವಿಜಿ ಕಾಲೇಜಿನ ವಿದ್ಯಾರ್ಥಿನಿ ಕೆ.ಆರ್.ಸಿಂಚನಾ, ವಿಜ್ಞಾನ ವಿಭಾಗದಲ್ಲಿ 600ಕ್ಕೆ 546(ಶೇ.91) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾಳೆ. ಕನ್ನಡದಲ್ಲಿ 93, ಇಂಗ್ಲಿಷ್ 92, ಭೌತಶಾಸ್ತ್ರ 90, ರಾಸಾಯನ ಶಾಸ್ತ್ರ 84, ಗಣಿತ 93 ಹಾಗೂ ಜೀವಶಾಸ್ತ್ರದಲ್ಲಿ 94 ಅಂಕ ಗಳಿಸಿರುವ ಈಕೆ, ರಾಜೇಶ್ ಹಾಗೂ ಆಶಾ ದಂಪತಿ ಪುತ್ರಿ.

ಚಾಮುಂಡೇಶ್ವರಿ, ಶ್ರೀಕಂಠೇಶ್ವರನಿಗೆ ಸಚಿವ ಕುಮಾರಸ್ವಾಮಿ ಇಂದು ಪೂಜೆ



ಮೈಸೂರು, ಏ.9– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಶುಕ್ರವಾರ ಮೈಸೂರು ಹಾಗೂ ನಂಜನಗೂಡಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಚಾಮುಂಡಿಬೆಟ್ಟಕ್ಕೆ ಬೆಳಗ್ಗೆ 7ಕ್ಕೆ ಕುಟುಂಬ ಸಮೇತ ತೆರಳಿ ದೇವಿಯ ದರ್ಶನ ಪಡೆದ ಬಳಿಕ ಬೆ.8.30ಕ್ಕೆ ನಂಜನಗೂಡಿನ ಶ್ರೀ ನಂಜುಂಡೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಲಿದ್ದಾರೆ.

ಬಳಿಕ ನಂಜನಗೂಡು ಪಟ್ಟಣದಲ್ಲಿ ಕಾಲುಗಳನ್ನು ಕಳೆದು ಕೊಂಡು ಸುಮಾರು 11 ಬಾರಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ತೀವ್ರ ಅಸ್ವಸ್ಥತೆಯಿಂದ ಬಳಲುತ್ತಿರುವ ಮಹಿಳೆಯನ್ನು ಭೇಟಿಯಾಗಿ ಸಾಂತ್ವನ ಹೇಳಲಿದ್ದಾರೆ.

ಮೈಸೂರು ರೈಲ್ವೆ ಗೂಡ್ಸ್ ಸ್ಥಳಾಂತರ ಪ್ರಸ್ತಾಪ

ಸಂಪೂರ್ಣ ಮಾಹಿತಿ ಪಡೆದ ನಂತರ ಹೋರಾಟಕ್ಕೆ ನಿರ್ಧಾರ

● ಪೂರ್ವಭಾವಿ ಸಭೆಯಲ್ಲಿ ಶಾಸಕ ತನ್ವೀರ್ ಸೇಠ್ ಸ್ಪಷ್ಟನೆ ● ಈ ಬಗ್ಗೆ ಡಿಆರ್‌ಎಂಗೆ ಪತ್ರ ಬರೆಯಲು ತೀರ್ಮಾನ



ಪೂರ್ವಭಾವಿ ಸಭೆಯಲ್ಲಿ ಶಾಸಕ ತನ್ವೀರ್ ಸೇಠ್, ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಇತರರು ಇದ್ದಾರೆ

ಮೈಸೂರು, ಏ.9(ವಿವಿಹೆಚ್)– ಮೈಸೂರಿನಿಂದ ರೈಲ್ವೆ ಗೂಡ್ಸ್ ಶೆಡ್ ಸ್ಥಳಾಂತರಿಸುವ ಚಿಂತನೆ ಬಗ್ಗೆ ಅಧಿಕಾರಿಗಳಿಂದ ವಾರದಲ್ಲಿ ಸ್ಪಷ್ಟತೆ ಪಡೆದ ನಂತರ ಮುಂದಿನ ನಡೆಯ ಬಗ್ಗೆ ತೀರ್ಮಾನಿಸೋಣ. ಅಲ್ಲಿಯವರೆಗೆ ಯಾವುದೇ ಮುಷ್ಕರ ನಡೆಸಬೇಡಿ ಎಂದು ಹಿರಿಯ ಶಾಸಕ ತನ್ವೀರ್ ಸೇಠ್ ಮನವಿ ಮಾಡಿದರು.

ಮೈಸೂರ್ ನ್ಯೂ ಗೂಡ್ಸ್ ಟರ್ಮಿನಲ್(ಎಂಎನ್‌ಜಿಟಿ) ಅನ್ನು ಮಂಡ್ಯ ಜಿಲ್ಲೆ ಎಲಿಯೂರಿಗೆ ಸ್ಥಳಾಂತರಿಸಲಾಗುತ್ತಿದೆ ಎಂದು ಶುಕ್ರವಾರ(ಏ.10)ದಿಂದಲೇ ಮುಷ್ಕರ ನಡೆಸಲು ನಿರ್ಧರಿಸಿದ್ದ ಲಾರಿ ಮಾಲೀಕರು, ಚಾಲಕರು ಹಾಗೂ ಕೂಲಿ ಕಾರ್ಮಿಕರು ಈ ಸಂಬಂಧ ಅಂತಿಮ ತೀರ್ಮಾನ ಕೈಗೊಳ್ಳಲೆಂದು ಗುರುವಾರ ಬನ್ನಿಮಂಟಪದ ಗೂಡ್ಸ್ ಶೆಡ್ ಆವರಣದಲ್ಲಿ ನಡೆಸಿದ ಪೂರ್ವಭಾವಿ ಸಭೆಯಲ್ಲಿ ಶಾಸಕ ತನ್ವೀರ್ ಸೇಠ್ ಮಾತನಾಡಿದರು.

ಮಹಾರಾಜರ ಕಾಲದಲ್ಲಿ 1882ರಲ್ಲಿ ಗೂಡ್ಸ್ ಶೆಡ್ ಆರಂಭಿಸಲಾಗಿದ್ದು, ಸಾವಿರಾರು ಕುಟುಂಬ ಜೀವನ ನಿರ್ವಹಣೆಗೆ ನೆರವಾಗಿದೆ. ಪಡಿತರ, ಗೊಬ್ಬರ, ಸಿಮೆಂಟ್ ಇನ್ನಿತರ ಸರಕು ಸಾಗಾಣಿಕೆಯಿಂದ ಮೈಸೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳಿಗೆ ಶೀಘ್ರ ವಿತರಿಸಲಾಗುತ್ತಿದೆ. 2025–26ನೇ ಸಾಲಿನಲ್ಲಿ ಮೈಸೂರು ವಿಭಾಗಕ್ಕೆ ಪ್ರಯಾಣಿಕರಿಂದ 470 ಕೋಟಿ ಹಾಗೂ ಸರಕು ಸಾಗಾಣಿಕೆಯಿಂದ 4900 ಕೋಟಿ ಲಾಭ ಬಂದಿದೆ. ಇಷ್ಟೊಂದು ಆದಾಯವನ್ನು ಧಿಕ್ಕರಿಸಿ, ಸಾವಿರಾರು ಕೂಲಿ ಕಾರ್ಮಿಕರು, ಲಾರಿ ಚಾಲಕರು ಹಾಗೂ ಮಾಲೀಕರ ಹೊಟ್ಟೆಯ ಮೇಲೆ ಹೊಡೆದು ಗೂಡ್ಸ್ ಶೆಡ್ ಸ್ಥಳಾಂತರಿಸುವ ಉದ್ದೇಶವಾದರೂ ಏನು? ವಂದೇ ಭಾರತ್ ರೈಲು ಡಿಪೋಗಾಗಿ ಸ್ಥಳಾಂತರ ನಿರ್ಧಾರಕ್ಕೆ ಬಂದಿದ್ದಾರೆ ಎನ್ನುವ ಚರ್ಚೆ ನಿಜವಾ? ಇದೆಲ್ಲದರ ಬಗ್ಗೆ ಸ್ಪಷ್ಟವಾಗಿ ತಿಳಿಯಬೇಕಿದೆ ಎಂದರು.

ಈ ವಿಚಾರವಾಗಿ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ(ಡಿಆರ್‌ಎಂ)ರಿಗೆ ಪತ್ರ ಬರೆದು ವಾರದ ಗಡುವು ನೀಡುತ್ತೇವೆ. ಗೂಡ್ಸ್ ಶೆಡ್ ಸ್ಥಳಾಂತರದ ವಿಚಾರವಾಗಿ ಸ್ಪಷ್ಟ ಉದ್ದೇಶ ಹಾಗೂ ತೀರ್ಮಾನದ ಬಗ್ಗೆ ಮಾಹಿತಿ ಪಡೆಯೋಣ. ವಾರದವರೆಗೆ ಯಾವುದೇ ಮುಷ್ಕರಕ್ಕೆ ಮುಂದಾಗಬೇಡಿ. ಏಕಾಏಕಿ ಪಡಿತರ, ಗೊಬ್ಬರ ಸಾಗಾಣಿಕೆ ನಿಲ್ಲಿಸಿದರೆ ಜನಸಾಮಾನ್ಯರಿಗೆ ತೊಂದರೆಯಾಗುತ್ತದೆ. ಏನೇ ಆದರೂ ನಿಮ್ಮ ಜೊತೆ ನಿಲ್ಲುತ್ತೇವೆ. ಈಗಾಗಲೇ ಮುಖ್ಯಮಂತ್ರಿಗಳು ಕೇಂದ್ರ ರೈಲ್ವೆ ಸಚಿವರಿಗೆ ಪತ್ರ ಬರೆದಿದ್ದು, ಇಂತಹ ಯಾವುದೇ ಉದ್ದೇಶ ಇಲ್ಲ ಎಂದು ಸಚಿವರು ಪ್ರತಿಕ್ರಿಯಿಸಿದ್ದಾರೆ. ಆದರೂ ಇಂತಹ ಬೆಳವಣಿಗೆ ಏಕೆಂದು ತಿಳಿದುಕೊಳ್ಳೋಣ. ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗೆ ಇದೊಂದೇ ಗೂಡ್ಸ್ ಟರ್ಮಿನಲ್ ಇರುವುದು. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮೈಸೂರಿಗೆ ಇದರ ಅವಶ್ಯತೆ ಇದೆ. ಸ್ಥಳಾಂತರದಿಂದ ಕೂಲಿ ಕಾರ್ಮಿಕರು, ಲಾರಿ ಮಾಲೀಕರು ಹಾಗೂ ಚಾಲಕರಿಗಷ್ಟೇ ಅಲ್ಲದೆ ಸಾರ್ವಜನಿಕರೂ ಹೆಚ್ಚು ಸಾಗಾಣಿಕೆ ವೆಚ್ಚ ಇನ್ನಿತರ ನಷ್ಟ ಅನುಭವಿಸಬೇಕಾಗುತ್ತದೆ ಡಿಆರ್‌ಎಂ ಅವರಿಂದ ಮಾಹಿತಿ ಪಡೆದು ಮುಂದಿನ ರೂಪುರೇಷೆ ಬಗ್ಗೆ ಚರ್ಚಿಸೋಣ ಎಂದು ತಿಳಿಸಿದರು.

ಹೋರಾಟ ತೀವ್ರ ಎಚ್ಚರಿಕೆ: ಇದೇ ವೇಳೆ ಮಾತನಾಡಿದ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್, ರೈಲ್ವೆ ಗೂಡ್ಸ್ ಟರ್ಮಿನಲ್ ಸ್ಥಳಾಂತರಿಸುವ ಉದ್ದೇಶ ಕೈಬಿಡದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸಲಾಗುವುದು. ಇಲ್ಲಿಂದ ದಿನನಿತ್ಯ ಸುಮಾರು 600 ಲಾರಿಗಳು ದವಸ ಧಾನ್ಯ, ರಸಗೊಬ್ಬರವನ್ನು ಹಲವು ಜಿಲ್ಲೆಗಳಿಗೆ ಸಾಗಿಸುತ್ತಿದೆ. ಎಫ್‌ಸಿಐ ಮೂಲಕ ಅನ್ನಭಾಗ್ಯದಡಿ ವಿತರಿಸಲಾಗುತ್ತಿರುವ ಅಕ್ಕಿಯನ್ನು ಇಲ್ಲಿಂದಲೇ ವಿತರಣೆ ಮಾಡಲಾಗುತ್ತಿದೆ. ಸುಮಾರು 10,000 ಕೂಲಿ ಕಾರ್ಮಿಕರು ಎಂಎನ್‌ಜಿಟಿ ಮೇಲೆ ಅವ ಲಂಬಿತರಾಗಿದ್ದಾರೆ ಇದನ್ನು ಸ್ಥಳಾಂತರಿಸಲು ಮುಂದಾಗಿ ರುವುದು ಸರಿಯಲ್ಲ. ಬಿಜೆಪಿ–ಜೆಡಿಎಸ್ ಜನ ವಿರೋಧಿ ನೀತಿಯನ್ನು ಪಾಲಿಸುತ್ತದೆ ಎನ್ನುವುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ? ಈ ಹಿಂದೆಯೂ ಇಂತಹುದೇ ಒಂದು ಪ್ರಸ್ತಾವನೆ ಬಂದಿದ್ದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ, ರೈಲ್ವೆ ಸಚಿವರಿಗೆ ಪತ್ರ ಬರೆದು ಪ್ರಕ್ರಿಯೆ ನಿಲ್ಲಿಸಿದ್ದರು. ಈಗ ಮತ್ತೊಮ್ಮೆ ಪ್ರಾರಂಭವಾಗಿದೆ. ಇದರ ವಿರುದ್ಧ ಜನರು ಧ್ವನಿ ಎತ್ತಬೇಕಿದೆ ಎಂದು ಹೇಳಿದರು.

ಈ ವೇಳೆ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಕೋದಂಡರಾಮ, ಲೋಡರ್ಸ್ ಅಸೋಸಿಯೇಷನ್ ಅಧ್ಯಕ್ಷ ಶಾಹೀದ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಿದ್ದರಾಮಯ್ಯರಿಗೆ ಅಭಿವೃದ್ಧಿ ಬಗ್ಗೆ ಆಸಕ್ತಿ ಇಲ್ಲ

● ರೈಲ್ವೆ ರಾಜ್ಯ ಸಚಿವ ಸೋಮಣ್ಣ ವಾಗ್ದಾಳಿ ● ಚಾ.ನಗರ, ಕುಶಾಲನಗರ ರೈಲು ಯೋಜನೆ ಸ್ಥಗಿತಕ್ಕೆ ಇವರೇ ಕಾರಣ

ಮೈಸೂರು, ಏ.9(ವಿವಿಹೆಚ್)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಕಾಮಗಾರಿಗಳನ್ನು ಹೊರತುಪಡಿಸಿ ಉಳಿದೆಲ್ಲವನ್ನು ಮಾಡುತ್ತಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಕಿಡಿಕಾರಿದರು.

ಮೈಸೂರಲ್ಲಿ ಗುರುವಾರ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಯೊಂದನ್ನು ಬಿಟ್ಟು ಉಳಿದೆಲ್ಲವನ್ನು ಮಾಡುತ್ತಿದೆ. ಚುನಾವಣೆಗೆ ಕೊಟ್ಟಂತಹ ಆಸಕ್ತಿಯಲ್ಲಿ ಶೇ.2 ರಷ್ಟು ರಾಜ್ಯದ ಜನತೆ ಮೇಲೆ ತೋರಿದ್ದರೆ ಎಲ್ಲೋ ಒಂದು ಕಡೆ ಸಿಎಂ ಮಾಡಿದ ತಪ್ಪಿಗೆ ಪ್ರಾಯಶ್ಚಿತ ಎಂದು ಕೊಳ್ಳಬಹುದಾಗಿತ್ತು ಎಂದರು.

ಸಿಎಂ ಸಿದ್ದರಾಮಯ್ಯ ಹತಾಶರಾಗಿದ್ದಾರೆ. ಯಾವುದೋ ಹೇಳಿಕೆಗೆ ಇನ್ನಾವುದೋ ಉತ್ತರ ನೀಡುತ್ತಿದ್ದಾರೆ. ಏನು ಹೇಳಬೇಕು ಎಂಬುದನ್ನು ಹೇಳದೇ, ನನ್ನನ್ನು ಯಾಕೆ ಬಯ್ಯಬೇಕು. ನಮಗೆ ಫೈಲ್ ತರಿಸಿಕೊಳ್ಳುವುದು ಗೊತ್ತಿದೆ. ಅಭಿವೃದ್ಧಿ ಕಾಮಗಾರಿಗಳೊಟ್ಟಿಗೆ ಜನರನ್ನು ಕರೆದೊಯ್ಯುವುದು ತಿಳಿದಿದೆ ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

ನಾವು ಪಾರದರ್ಶಕತೆಯಿಂದ ಕೆಲಸ ಮಾಡು ವವರು. ಸಿಎಂ ಅವರಿಗೆ ರಾಜ್ಯದ ಜನತೆಯ ಮೇಲೆ ಪ್ರೀತಿ, ಕಾಳಜಿಯಿದ್ದರೆ, ಬೆಂಗಳೂರು – ಚಾ.ನಗರ, ಮೈಸೂರು–ಕುಶಾಲನಗರ ರೈಲ್ವೆ ಯೋಜನೆ ನೀಡಿ. ಅದನ್ನು ಬಿಟ್ಟು ಯೋಜನೆಯನ್ನೇ ಕೈಬಿಟ್ಟು, ನಾಟಕವಾಡುತ್ತಿದ್ದಾರೆ. ಕಾಂಗ್ರೆಸ್ ಬೊಕ್ಕಸದಲ್ಲಿ ಹಣವಿಲ್ಲ. ಸುಳ್ಳು ಹೇಳುತ್ತಾ ಕಾಲ ಕಳೆಯುತ್ತಿದ್ದಾರೆ. ಹಾಗಾಗಿ ಅಭಿವೃದ್ಧಿಗೆ ಸಹಕರಿಸುತ್ತಿಲ್ಲ ಎಂದರು.

ಸಿಎಂ ಸಿದ್ದರಾಮಯ್ಯ ಅವರು ಮಾತೆತ್ತಿ ದರೆ ಸೋಮಣ್ಣ ಎನ್ನುತ್ತಾರೆ. ಯಾವುದೇ ಫೈಲ್ ಅವರ ಬಳಿಗೆ ಬರುವುದಿಲ್ಲ ಎನ್ನುತ್ತಾರೆ. ಇಲಾಖೆಗೆ ಸಂಬಂಧಿಸಿದ ಕಡತಗಳು ನಮ್ಮ ಬಳಿ ಬರದೇ ಸಿದ್ದರಾಮಯ್ಯ ಅವರ ಮನೆಗೆ ಹೋಗುತ್ತದೆಯೇ? ಸಿದ್ದರಾಮಯ್ಯ ಏನು ದೇವರೇ? ಭಾರತ ಸರ್ಕಾರ ತನ್ನ ಅಧಿಕಾರಿಗಳಿಗೆ 500 ಕೋಟಿ ರೂ. ವರೆಗೂ ಕಾಮಗಾರಿ ಮಾಡುವ ಅಧಿಕಾರ ನೀಡಿದೆ. ರಾಜ್ಯ ಸರ್ಕಾರದ ರೀತಿ ನಮಗೆ ಯಾವುದೇ ಟೆಂಡರ್ ಬರುವುದಿಲ್ಲ. ನಮಗೆ ಬೇಕಾದ ವರಿಗೆ ಕೊಡುವುದಕ್ಕಾಗಿ ಪರ್ಸಂಟೇಜ್ ಫಿಕ್ಸ್ ಮಾಡುವ ಪದ್ಧತಿ ಇಲ್ಲ ಎಂದು ಟಾಂಗ್ ಕೊಟ್ಟರು.

ಬೆಂಗಳೂರು ನಗರದ ಒತ್ತಡವನ್ನು ಕಡಿಮೆ ಮಾಡುವ ಏಕೈಕ ನಗರ ಮೈಸೂರು ಹಾಗೆಯೇ ತುಮಕೂರು ರಾಜ್ಯದ ಎಲ್ಲಾ ಭಾಗಗಳಿಗೂ ಸೇರುವ ಏಕೈಕ ಜಿಲ್ಲೆ. ಹಾಗಾಗಿ ಅಲ್ಲಿ ಹೆಚ್ಚಿನ ಅಭಿವೃದ್ಧಿಗೆ ಮುಂದಾಗಿದ್ದೇವೆ. ಬೆಂಗಳೂರಿನಿಂದ ಕೋಲಾರಕ್ಕೆ ನೇರ ರೈಲು ಇರಲಿಲ್ಲ. ತಮಿಳುನಾಡು ಮಾರ್ಗವಾಗಿ ಸಂಚರಿಸುವ ರೈಲು ಮಾರ್ಗದಲ್ಲೇ ಕೋಲಾರಕ್ಕೆ ಸಂಚಾರ ಮಾಡಲಾಗುತ್ತಿತ್ತು. ಇದನ್ನು ಸರಿಪಡಿಸಿ, ನೇರ ರೈಲು ಸಂಚಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ದಾವಣಗೆರೆ ಹಾಗೂ ಬಾಗಲಕೋಟೆ ಉಪ ಚುನಾವಣೆ ಮೂಲಕ ರಾಜ್ಯ ಸರ್ಕಾರಕ್ಕೆ ಸ್ಪಷ್ಟ ಸಂದೇಶ ಹೋಗಲಿದೆ. ಎರಡೂ ಕಡೆ ಬಿಜೆಪಿ ಅಭ್ಯರ್ಥಿಗಳು ಗೆಲ್ಲಲಿದ್ದಾರೆ. ಇದಕ್ಕೆ ಜನರ ಆಶೀರ್ವಾದ ಹಾಗೂ ಕಾಂಗ್ರೆಸ್ಸಿಗರೆ ಪರೋಕ್ಷವಾಗಿ ಬೆಂಬಲವನ್ನೂ ಸೂಚಿಸಿದ್ದಾರೆ. ಅಲ್ಪಸಂಖ್ಯಾತರ ತೀರ್ಮಾನವೂ ಹಾಗೆಯೇ ಇದ್ದರೆ ಮುಂದೆ ಕಾಂಗ್ರೆಸ್ ಉಳಿಯುವುದು ಅನುಮಾನ ಎಂದರು.

> ಮೈಸೂರು–ಬೆಂಗಳೂರು ನಡುವೆ ಆದಷ್ಟು ರೈಲ್ವೆ ಕ್ರಾಸಿಂಗ್‌ಗಳನ್ನು ಮುಚ್ಚಿ, ರೈಲ್ವೆ ಅಂಡರ್ ಪಾಸ್ ಅಥವಾ ಮೇಲ್ಸೇತುವೆ ನಿರ್ಮಾಣ ಮಾಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಸರ್ಕಾರ ಬಂದ ಮೇಲೆ ರೈಲ್ವೆ ಇಲಾಖೆಯಲ್ಲಿ ಜನರು ಸುಲಭವಾಗಿ ಪ್ರಯಾಣ ಮಾಡುವುದಕ್ಕೆ ಸೌಲಭ್ಯ ಕಲ್ಪಿಸಲಾಗಿದೆ. ಕೆಲವು ರೈಲ್ವೆ ನಿಲ್ದಾಣಗಳಲ್ಲಿ ರೈಲು ನಿಲುಗಡೆ ಆಗುತ್ತಿಲ್ಲ ಎಂಬ ಬಗ್ಗೆ ದೂರುಗಳು ಬಂದಿದೆ. ಸದ್ಯ ಕೆಲವು ನಿಲ್ದಾಣಗಳ ಅಗಲೀಕರಣ ಕಾಮಗಾರಿ ನಡೆಯುತ್ತಿದ್ದು ಪ್ರಯಾಣಿಕರ ಅನುಕೂಲಕ್ಕೆ ತಕ್ಕಂತೆ ನಿಲುಗಡೆಗೆ ಅನುವು ಮಾಡಿಕೊಡಲಾಗುವುದು.
>
> ಹಾಗೆಯೇ ಮೈಸೂರು ಶೆಡ್‌ನ್ನು ಪಾಂಡವಪುರಕ್ಕೆ ಸ್ಥಳಾಂತರಿಸುವ ಯಾವುದೇ ಯೋಚನೆ ಇಲ್ಲ. ಹಾಗೊಂದು ವೇಳೆ ಆಗಬೇಕಿದ್ದರೆ ಅಲ್ಲೇ ಒಂದು ಶೆಡ್ ಅನ್ನು ನಿರ್ಮಿಸಲಾಗುವುದು. ಇದು ಆಧಾರರಹಿತ ಆರೋಪವಾಗಿದೆ.
>
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ.

ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟ

ಕೊಡಗು ಜಿಲ್ಲೆಗೆ 3ನೇ ಸ್ಥಾನ

ಕಳೆದ ಬಾರಿ 4ನೇ ಸ್ಥಾನ ಪಡೆದಿದ್ದ ಜಿಲ್ಲೆ

ಮಡಿಕೇರಿ, ಏ.9– ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿದ್ದು, ಕೊಡಗು ಜಿಲ್ಲೆ 3ನೇ ಸ್ಥಾನ ಪಡೆದು ಉತ್ತಮ ಸಾಧನೆ ತೋರಿದೆ. ಕಳೆದ ಬಾರಿ ಶೇ.83.84 ಅಂಕ ದಾಖಲಿಸಿ ರಾಜ್ಯದಲ್ಲಿ 4ನೇ ಸ್ಥಾನ ಪಡೆದಿದ್ದರೆ, ಈ ಬಾರಿ ಶೇ.92.34 ಪಡೆದು 3ನೇ ಸ್ಥಾನ ಅಲಂಕರಿಸಿದೆ. ಮಾತ್ರವಲ್ಲದೇ, ಈ ಬಾರಿಯೂ ಫಲಿತಾಂಶದಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿ ಬೀಗಿದ್ದಾರೆ.

ಜಿಲ್ಲೆಯಲ್ಲಿ 4745 ವಿದ್ಯಾರ್ಥಿಗಳ ಪೈಕಿ 1898 ಗಂಡು ಹಾಗೂ 2847 ಹೆಣ್ಣು ಮಕ್ಕಳು ಪರೀಕ್ಷೆ ಬರೆದಿದ್ದು, ಈ ಪೈಕಿ ಒಟ್ಟು 4380 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಜಿಲ್ಲೆಯ ಒಟ್ಟು 13 ಪಿಯು ಕಾಲೇಜುಗಳು ಶೇ.100ರಷ್ಟು ಫಲಿತಾಂಶ ದಾಖಲಿಸಿವೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಶೇ92.34 ರಷ್ಟು ಮಂದಿ ತೇರ್ಗಡೆ, ಈ ಬಾರಿಯೂ ಬಾಲಕಿಯರೇ ಮೇಲುಗೈ

ಕಲಾ ವಿಭಾಗ: ಕಲಾ ವಿಭಾಗದಲ್ಲಿ ಶನಿವಾರಸಂತೆ ಭಾರತಿ ಪದವಿ ಪೂರ್ವ ಕಾಲೇಜಿನ ಫಾತಿಮಾ ಎಸ್.ಎ.(592) ಪ್ರಥಮ, ಕೂಡಿಗೆ ಸರಕಾರಿ ಪದವಿ ಪೂರ್ವ ಕಾಲೇಜಿನ ನಂದಿತಾ(584) ದ್ವಿತೀಯ ಸ್ಥಾನ, ಮೂರ್ನಾಡು ಪಿ.ಯು. ಕಾಲೇಜು ಮೂರ್ನಾಡುವಿನ ಕೆ.ಎಂ.ಜುಹಾರ (570) ತೃತೀಯ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗ: ವಾಣಿಜ್ಯ ವಿಭಾಗದಲ್ಲಿ ಮಡಿಕೇರಿ ಸಂತ ಮೈಕಲರ ಪಿ.ಯು. ಕಾಲೇಜಿನ ಸಿಂಚನ ಪ್ರಸನ್ನ (597) ಪ್ರಥಮ, ಕುಶಾಲನಗರದ ವಿವೇಕಾನಂದ ಪಿ.ಯು. ಕಾಲೇಜಿನ ರೈಲಾ ಸಾರಮ್ಮ(590) ದ್ವಿತೀಯ, ಕುಶಾಲನಗರದ ವಿವೇಕಾನಂದ ಪಿ.ಯು. ಕಾಲೇಜಿನ ಕೀರ್ತನ(588) ಹಾಗೂ ವಿರಾಜಪೇಟೆ ಕಾವೇರಿ ಪಿ.ಯು. ಕಾಲೇಜಿನ ಫರೀದ ಎಂ.ಎಸ್.(588) ಅಂಕಗಳನ್ನು ಪಡೆದು ತೃತೀಯ ಸ್ಥಾನ ಹಂಚಿಕೊಂಡಿದ್ದಾರೆ.

ವಿಜ್ಞಾನ ವಿಭಾಗ: ವಿಜ್ಞಾನ ವಿಭಾಗದಲ್ಲಿ ಪೊನ್ನಂಪೇಟೆ ಸಿಐ ಪಿಯು. ಕಾಲೇಜಿನ ಭಾಶಿತ ಕೆ.ಡಿ(594)ಪ್ರಥಮ ಸ್ಥಾನ ಪಡೆದಿದ್ದಾರೆ. ವಿದ್ಯಾನಿಕೇತನ ಪಿಯು. ಕಾಲೇಜಿನ ಗೋಣಿಕೊಪ್ಪದ ಹರಿಕೃಷ್ಣನ್ ಎಂ.(591) ಮತ್ತು ವಿಪುಲ್ ಉತ್ತಪ್ಪ(591) ದ್ವಿತೀಯ ಸ್ಥಾನ ಹಂಚಿಕೊಂಡಿದ್ದಾರೆ. ಕುಶಾಲ ನಗರದ ವಿವೇಕಾನಂದ ಪಿ.ಯು. ಕಾಲೇಜಿನ ಗ್ರೀಷ್ಮ ಕೆ.ಎಲ್. (590) ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

ರಸ್ತೆ ಬದಿ ಕಟ್ಟಡ ಮಾಲೀಕರಿಗೆ ಪರಿಹಾರ ಕೊಡಿ, ಪುರಸಭೆಯಲ್ಲಿ ಲಂಚದ ಹಾವಳಿ, ರಸ್ತೆ ದುರಸ್ತಿಗೊಳಿಸಲು ಆಗ್ರಹ



ನಾಗರಿಕ ಸಮಿತಿ ಮತ್ತು ಸಾಮಾಜಿಕ ಕಾರ್ಯಕರ್ತರ ಕೂಟದ ಸಂಯುಕ್ತ ಹೋರಾಟ ಸಮಿತಿ ಪುರಸಭೆ ಕಚೇರಿ ಎದುರು ಪ್ರತಿಭಟನೆ ನಡೆಸಿತು.

ವಿರಾಜಪೇಟೆ, ಏ.9– ವಿರಾಜಪೇಟೆ ಪಟ್ಟಣದ ಸುಂಕದ ಕಟ್ಟೆ ಬಳಿಯಿಂದ ಮೀನುಪೇಟೆ ವರೆಗೂ ಮುಖ್ಯ ರಸ್ತೆ ಅಗಲೀಕರಣ ಯೋಜನೆ ಕಾಮಗಾರಿ ಪ್ರಾರಂಭಗೊಂಡಿದ್ದು ರಸ್ತೆ ಬದಿ ಇರುವ ಕಟ್ಟಡದ ಮಾಲಿಕರಿಗೆ ಸೂಕ್ತ ಪರಿಹಾರ ಒದಗಿಸಬೇಕು, ಹಾಗು ಪುರಸಭೆ ಕಚೇರಿಯಲ್ಲಿ ಲಂಚದ ಬೇಡಿಕೆ ಹಾವಳಿ ಹೆಚ್ಚಾಗಿರುವುದನ್ನು ತಡೆಯುವಂತೆ ಆಗ್ರಹಿಸಿ ವಿರಾಜಪೇಟೆ ನಾಗರಿಕ ಸಮಿತಿ ಮತ್ತು ಸಾಮಾಜಿಕ ಕಾರ್ಯಕರ್ತರ ಕೂಟದ ಸಂಯುಕ್ತ ಹೋರಾಟ ಸಮಿತಿ ಪುರಸಭೆ ಕಚೇರಿ ಎದುರು ಪ್ರತಿಭಟನೆ ನಡೆಸಿ ಮುಖ್ಯಾಧಿಕಾರಿ ನಾಚಪ್ಪ ಅವರಿಗೆ ಮನವಿ ಸಲ್ಲಿಸಿತು.

ಈ ವೇಳೆ ನಾಗರಿಕ ಸಮಿತಿ ಸಂಚಾಲಕರಾದ ಡಾ.ದುರ್ಗಾಪ್ರಸಾದ್ ಮಾತನಾಡಿ ಪುರಸಭೆ ವ್ಯಾಪ್ತಿಯಲ್ಲಿ ಅನೇಕ ಅಡ್ಡ ರಸ್ತೆಗಳಿದ್ದು ಅವುಗಳನ್ನು ಅನೇಕರು ಅತಿಕ್ರಮಿಸಿಕೊಂಡಿರುವ ಪರಿಣಾಮ ಸಾರ್ವಜನಿಕರಿಗೆ, ಪಾದಚಾರಿಗಳಿಗೆ ಸಲಿಸಾಗಿ ಓಡಾಡಲು ಸಾಧ್ಯವಾಗುತ್ತಿಲ್ಲ. ಅದುದರಿಂದ ಅತಿಕ್ರಮಣ ಜಾಗವನ್ನು ತೆರವುಗೊಳಿಸಬೇಕು ಮತ್ತು ಕೆರೆಗಳನ್ನು ಸುಂದರಗೊಳಿಸುವ ಹೆಸರಿನಲ್ಲಿ ಕೈಗೊಂಡ ಯೋಜನೆಗೆ ಶಾಸಕರ ತಂದಿರುವ ಅನುದಾನ ಯಾರ ಕೈ ಸೇರಿದೆ ಎಲ್ಲಿ ಹೋಗಿದೆ ಎಂಬುದನ್ನು ಜನರ ಮುಂದೆ ಮಂಡಿಸಬೇಕು ಎಂದು ಆಗ್ರಹಿಸಿದರು.

ಸಾಮಾಜಿಕ ಕಾರ್ಯಕರ್ತರ ಕೂಟದ ಹೋರಾಟ ಸಮಿತಿಯ ವಕೀಲರಾದ ಕೆ.ವಿ. ಸುನೀಲ್ ಮಾತನಾಡಿ ವಿರಾಜಪೇಟೆ ನಗರಕ್ಕೆ ಅಗ್ನಿಶಾಮಕ ಠಾಣೆಯ ಅಗತ್ಯವಿದೆ, ಇತ್ತೀಚೆಗೆ ಪುರಸಭೆ ಮಳಿಗೆಗಳ ಹರಾಜು ಪ್ರಕ್ರಿಯೆ ನಡೆದು ವಾರ್ಷಿಕ ಆದಾಯ ಕಡಿಮೆಯಾಗಿದೆ, ಚುನಾಯಿತ ಸದಸ್ಯರುಗಳ ಅವಧಿ ಮುಗಿದು 6 ತಿಂಗಳು ಕಳೆದರು ಕೆಲವು ಸದಸ್ಯರು ಪುರಸಭೆ ಸಭಾಂಗಣದಲ್ಲಿ ದಿನನಿತ್ಯ ಕುಳಿತು ಕಾಲಹರಣ ಮಾಡುತ್ತಿದ್ದಾರೆ. ಇದರ ಮರ್ಮವೇನು ಎಂದು ಪ್ರಶ್ನಿಸಿದರು.

ಎಲ್ಲಾ ರಸ್ತೆಗಳಲ್ಲಿ ಕುಡಿಯುವ ನೀರಿನ ಪೈಪುಗಳನ್ನು ಅಳವಡಿಸುವ ಹೆಸರಿನಲ್ಲಿ ರಸ್ತೆಗಳನ್ನು ಒಡೆದು ಹಾಕಿದ್ದಾರೆ. ಈಗ ಎಲ್ಲಾ ರಸ್ತೆಗಳನ್ನು ದುರಸ್ತಿ ಪಡಿಸಬೇಕು. ರಸ್ತೆ ಬದಿ ಚರಂಡಿಗಳಿಲ್ಲ, ಪುರಸಭೆಗೆ ಅಭಿಯಂತರರಿಲ್ಲ ಈ ಅವ್ಯವಸ್ಥೆಗಳ ಬಗ್ಗೆ ಅಧಿಕಾರಿಗಳು ಮೌನವಹಿಸಿರುವುದರ ಕಾರಣ ತಿಳಿದಿಲ್ಲ. ಮುಖ್ಯ ರಸ್ತೆಗಳಲ್ಲಿ ಬೀಡಾಡಿ ದನಗಳ ಹಾವಳಿ ಹೆಚ್ಚಾಗಿದ್ದರು ದೊಡ್ಡಿ ಇಲ್ಲ ಸಾರ್ವಜನಿಕರ ಅನುಕೂಲಕ್ಕಾಗಿ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕು ಇಲ್ಲ ಮುಂದಿನ ದಿನದಲ್ಲಿ ಹೆಚ್ಚಿನ ಹೋರಾಟದ ಅನಿವಾರ್ಯವಿದೆ ಎಂದು ವಕೀಲ ಸುನೀಲ್ ಎಚ್ಚರಿಸಿದರು,

ಸಾಮಾಜಿಕ ಕಾರ್ಯಕರ್ತರ ಕೂಟದ ಸತೀಶ್ ಕುಮಾರ್ ಮಾತನಾಡಿದರು. ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ ಮನವಿ ಸ್ವೀಕರಿಸಿದರು,

ಪ್ರತಿಭಟನೆಯಲ್ಲಿ ಮಳೆಟಿರ ಕಾಳಯ್ಯ, ಎನ್.ಕೆ.ಶರೀಫ್, ಶಾಜಿ ರಮೇಶ್, ರಮೇಶ್ ಮಯಮುಡಿ, ಪಿ.ಕೆ.ಅಬ್ದುಲ್ ಇದ್ದರು.

ಸುಂಟಿಕೊಪ್ಪದಲ್ಲಿ ಪೇಂಟ್ ಅಂಗಡಿಗೆ ಬೆಂಕಿ



ಸುಂಟಿಕೊಪ್ಪ, ಏ.9– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಗದ್ದೆಹಳ್ಳದ ಪೇಂಟ್ ಮತ್ತು ಹಾರ್ಡ್‌ವೇರ್ ಮಳಿಗೆಗೆ ಬೆಂಕಿ ತಗುಲಿ ಪೇಂಟ್ ಸೇರಿದಂತೆ ಪ್ಲಾಸ್ಟಿಕ್ ಶೀಟ್‌ಗಳು ಸುಟ್ಟು ಕರಕಲಾಗಿ ಲಕ್ಷಾಂತರ ರೂ. ನಷ್ಟ ಉಂಟಾಗಿರುವ ಬಗ್ಗೆ ವರದಿಯಾಗಿದೆ.

ಸುಂಟಿಕೊಪ್ಪ ಸಮೀಪದ ಗದ್ದೆಹಳ್ಳದ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿರುವ ಶರತ್ ಎಂಬುವರ ಹೆಮ್ಮಾರ ಮಾರ್ಟ್ ಶಾಪ್ ಮಳಿಗೆಯನ್ನು ಮುಚ್ಚಿ ಮನೆಗೆ ತೆರಳಿದ್ದರು. ಈ ವೇಳೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಆಗಿದ್ದು ಇದರಿಂದ ಅಂಗಡಿಯಲ್ಲಿ ಇರಿಸಿದ್ದ ಪೈಯಿಂಟ್ ಹಾಗೂ ಮೇಲ್ಚಾವಣಿಯ ಪ್ಲಾಸ್ಟಿಕ್ ಶೀಟ್‌ಗಳು ಹಾಗೂ ಕಟ್ಟಡ ಸಾಮಾಗ್ರಿಗಳು ಸೇರಿದಂತೆ ಬಹುಪಾಲು ಸಾಮಾಗ್ರಿಗಳು ಬೆಂಕಿಯ ಜ್ವಾಲೆಗೆ ಸಿಲುಕಿ ಸುಟ್ಟು ಹೋಗಿವೆ.

ಅದೃಷ್ಟವಶಾತ್ ಮಳಿಗೆಯ ಒಳಭಾಗದಲ್ಲಿ ಮಹೇಂದ್ರ ಸ್ಕಾರ್ಪಿಯೊ ವಾಹನ ವಿದ್ದು ಸ್ಥಳೀಯ ನಿವಾಸಿಗಳು ಅದನ್ನು ಹೊರ ತಂದಿದ್ದಾರೆ. ಸುಂಟಿಕೊಪ್ಪ ಹಾಗೂ ಗದ್ದೆಹಳ್ಳದ ನಿವಾಸಿಗಳು ಮತ್ತು ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾದರು. ಘಟನಾ ಸ್ಥಳಕ್ಕೆ ಸುಂಟಿಕೊಪ್ಪ ಠಾಣಾಧಿಕಾರಿ ಮೋಹನ್‌ರಾಜ್ ಮತ್ತು ಸಿಬ್ಬಂದಿಗಳು ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

8ನೇ ದಿನಕ್ಕೆ ಕಾಲಿಟ್ಟ ನಿವೇಶನ ಹೋರಾಟ

ಶಾಶ್ವತ ಸೂರು ಕಲ್ಪಿಸುವಂತೆ ಆಗ್ರಹ



ಪ್ರತಿಭಟನೆ ನಡೆಸುತ್ತಿರುವ ದಲಿತ ಸಂಘರ್ಷ ಸಮಿತಿಯ ಸದಸ್ಯರು.

ಮಡಿಕೇರಿ,ಏ.9– ಪೊನ್ನಂಪೇಟೆ ತಾಲೂಕಿನ ಬಿ.ಶೆಟ್ಟಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋತ್ರಿಕಾಡು ಎಂಬಲ್ಲಿ ಕೊಡಗು ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಹೆಚ್.ಆರ್ ಪರಶುರಾಮ್ ಮುಂದಾಳತ್ವದಲ್ಲಿ ನಿವೇಶನಕ್ಕಾಗಿ ಕಾಯ್ದಿರಿಸಿದ ಸರ್ವೇ ನಂಬರ್ 37/26 ರಲ್ಲಿ ತಾತ್ಕಾಲಿಕ ಗುಡಿಸಲು ಕಟ್ಟಿ ಶಾಶ್ವತ ಸೂರಿಗಾಗಿ ನಡೆಸುತ್ತಿರುವ ಅಹೋರಾತ್ರಿ ಪ್ರತಿಭಟನೆಯು 8ನೇ ದಿನಕ್ಕೆ ಕಾಲಿರಿಸಿದೆ.

ಪಾಲಿಬೆಟ್ಟ, ಗೋಣಿಕೊಪ್ಪ, ತಿತಿಮತಿ, ಕಾನೂರು, ಪೊನ್ನಂಪೇಟೆ ಹಾಗೂ ಮಾಯಮುಡಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಮಾರು 96 ದಲಿತ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಕುಟುಂಬಗಳು ಅಹೋರಾತ್ರಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿವೆ ಪುಟ್ಟ ಮಕ್ಕಳೊಂದಿಗೆ ವಯೋವೃದ್ದರು, ಮಹಿಳೆಯರು, ಪುರುಷರು ತಾತ್ಕಾಲಿಕ ಗುಡಿಸಲು ನಿರ್ಮಿಸಿ 8 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದು, ಶಾಶ್ವತ ನಿವೇಶನ ವ್ಯವಸ್ಥೆ ಕಲ್ಪಿಸುವವರೆಗೂ ಪ್ರತಿಭಟನೆ ಮುಂದುವರೆಸುವುದಾಗಿ ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಹೆಚ್.ಆರ್.ಪರಮೇಶ್, ಕಳೆದ 8 ದಿನಗಳಿಂದ ಬಿ.ಶೆಟ್ಟಿಗೇರಿ ಗ್ರಾಮದ 37/26 ಸರ್ವೇ ನಂಬರ್ ಜಾಗದಲ್ಲಿ ಹಗಲು ರಾತ್ರಿ ಎನ್ನದೆ ಅಹೋರಾತ್ರಿ ಹೋರಾಟ ನಡೆಸುತ್ತಿದ್ದು ಯಾವುದೇ ಅಧಿಕಾರಿಗಳು ಇಲ್ಲಿಗೆ ಭೇಟಿ ನೀಡಿಲ್ಲ. ಕಳೆದ ಹಲವು ವರ್ಷಗಳಿಂದ ನಿವೇಶನಕ್ಕಾಗಿ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿ ಪ್ರತಿಭಟನೆ, ಹೋರಾಟ ನಡೆಸಿದ್ದರು ಯಾವುದೇ ಪ್ರಯೋಜನವಾಗಿಲ್ಲ. ಈ ಹಿಂದೆ ಹಾತೂರು, ಬೈಗೋಡು ಎಂಬಲ್ಲಿ ಸುಮಾರು 250 ಕುಟುಂಬ ಒಂದು ವಾರಗಳ ಕಾಲ ವಾಸ್ತವ್ಯ ಹೂಡಿ ಹೋರಾಟ ಕೈಗೊಂಡಿದ್ದೆವು, ಅಧಿಕಾರಿಗಳು ನಿವೇಶನಗಳನ್ನು ಕೊಡುವುದಾಗಿ ಭರವಸೆ ನೀಡಿ ಅಲ್ಲಿಂದ ತೆರವುಗೊಳಿಸಿದ್ದಾರೆ ಎಂದು ಆರೋಪಿಸಿದರು. ದಲಿತ ಸಂಘರ್ಷ ಸಮಿತಿಯ ತಾಲೂಕು ಸಂಚಾಲಕಿ ಜೆ.ಎ.ಲಕ್ಷ್ಮಿ ಮಾತನಾಡಿದರು.

ಈ ಸಂದರ್ಭ ಜೆ.ಡಿ.ಶಿವಣ್ಣ, ಸಿಂಗ, ಪಿ.ಸಿ.ಪುಟ್ಟ, ಪಿ.ಪಿ.ಬೋಜ, ಪಿ.ಬಿ.ಚೋಮ, ಗೌರಿ, ಮಲ್ಲಿಗೆ, ರವಿ, ಮಧು, ರಾಜು, ಪಾರ್ವತಿ ಸೇರಿದಂತೆ ಮತ್ತಿತರರು ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ.

ಸಿದ್ದಾಪುರ ಸುತ್ತ ಮುತ್ತ ಆನೆ ದಾಳಿ ಆಯ್ತು, ಈಗ ಚಿರತೆ ಕಾಟ

ಚಿರತೆ ದಾಳಿಯಿಂದ ಹಸುವಿಗೆ ಗಂಭೀರ ಗಾಯ



ಸಿದ್ದಾಪುರ, ಏ.9– ಸಿದ್ದಾಪುರ ಸುತ್ತ–ಮುತ್ತ ಆನೆಗಳ ದಾಳಿ ಆಯ್ತು ಈಗ ಚಿರತೆಗಳ ಕಾಟ ಶುವಾಗಿದೆ. ಚಿರತೆ ದಾಳಿಗೆ ಹಸುಗಳು ಗಂಭೀರ ಗಾಯ ಗೊಂಡಿರುವ ಘಟನೆ ವಿರಾಜಪೇಟೆ ತಾಲೂಕಿನ ಸಿದ್ದಾಪುರ ಸಮೀಪದ ಕೂಡುಗಡ್ಡೆಯಲ್ಲಿ ನಡೆದಿದೆ.

ಗ್ರಾಮದ ಉಮೇಶ್(ಜಪ್ಪು) ಎಂಬುವರು ತಮ್ಮ ಮನೆಯ ಪಕ್ಕದಲ್ಲೇ ಕಟ್ಟಿದ್ದ ಹಸುಗಳ ಮೇಲೆ ಚಿರತೆ ದಾಳಿ ಮಾಡಿದೆ. ಚಿರತೆ ದಾಳಿಯಿಂದ ಹಸುಗಳು ಗಂಭೀರ ಗಾಯಗೊಂಡಿವೆ. ಬುಧವಾರ ರಾತ್ರಿ 9.30ರ ಸುಮಾರಿಗೆ ಘಟನೆ ನಡೆದಿದ್ದು, ಮಾಹಿತಿ ತಿಳಿದು ಘಟನಾ ಸ್ಥಳಕ್ಕೆ ಅರಣ್ಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಈ ಘಟನೆಯಿಂದ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿದ್ದು, ಚಿರತೆಯನ್ನು ಕೂಡಲೇ ಸೆರೆ ಹಿಡಿಯುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಆನೆ ಹಾವಳಿಯಿಂದ ಬೇಸತ್ತಿದ್ದ ಜನತೆಗೆ ಇದೀಗ ಚಿರತೆ ದಾಳಿ ಮತ್ತಷ್ಟು ತಲೆನೋವಾಗಿ ಪರಿಣಮಿಸಿದೆ.

ಚಿರತೆ ದಾಳಿ ಹಿನ್ನೆಲೆ ಸುತ್ತಮುತ್ತಲ ಗ್ರಾಮಸ್ಥರು ಎಚ್ಚರಿಕೆ ವಹಿಸುವಂತೆ ಅರಣ್ಯ ಇಲಾಖೆ ಸೂಚನೆ ನೀಡಿದೆ. ಇನ್ನೂ ಗಂಭೀರ ಗಾಯಗೊಂಡಿರುವ ಹಸುಗಳಿಗೆ ಚಿಕಿತ್ಸೆ ಕೊಡಿಸಲು ನಿರ್ಲಕ್ಷ್ಯ ತೋರಿರುವ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಸ್ಥಳೀಯರು ಕೂಡಲೇ ಪಶುಪಾಲನಾ ಇಲಾಖೆಯ ವೈದ್ಯರನ್ನು ಕರೆಸಿ ಚಿಕಿತ್ಸೆ ಕೊಡಿಸಲು ಆಗ್ರಹಿಸಿದ್ದಾರೆ. ಅಲ್ಲದೆ ಚಿರತೆ ಸೆರೆಗೆ ಕ್ರಮ ಕೈಗೊಳ್ಳದಿದ್ದಲ್ಲಿ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಕೆಲವು ದಿನಗಳ ಹಿಂದೆ ಇದೇ ರೀತಿ ದಾಳಿಗೊಳಗಾಗಿ ತೀವ್ರ ಗಾಯಗೊಂಡಿದ್ದ ಹಸುವೊಂದು ಸಾವನ್ನಪ್ಪಿತ್ತು. ಸ್ಥಳೀಯರು ಕೂಡಾ ಆ ಹಸು ನಾಯಿಗಳಿಂದ ದಾಳಿಗೆ ಒಳಗಾಗಿ ಸಾವನ್ನಪ್ಪಿರಬಹುದು ಎಂದು ಅದನ್ನು ಹೂತು ಹಾಕಿದ್ದರು. ಆದರೆ ಅಂದು ಸಾವನ್ನಪ್ಪಿರೋ ಹಸು ಕೂಡ ಇದೆ ಚಿರತೆ ದಾಳಿಗೆ ಒಳಗಾಗಿ ಸತ್ತಿದೆ ಎನ್ನುವ ಶಂಕೆ ವ್ಯಕ್ತವಾಗಿದೆ. ರಜೆ ಹಿನ್ನೆಲೆ ಮಕ್ಕಳು ಕೂಡ ಮನೆಯಲ್ಲಿದ್ದು ಪೋಷಕರಿಗೂ ಭಯ ಕಾಡುತ್ತಿದೆ.

ಎಪಿಎಂಸಿ ಅಧ್ಯಕ್ಷರಾಗಿ ಹೆಚ್.ಬಿ.ಚಂದ್ರಪ್ಪ ಆಯ್ಕೆ



ಕುಶಾಲನಗರ: ಪ್ರತಿಷ್ಠಿತ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ತೊರೆನೂರು ಗ್ರಾಮದ ಹೆಚ್.ಬಿ. ಚಂದ್ರಪ್ಪ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಹೆಬ್ಬಾಲೆಯ ಚಂದ್ರಕಲಾ ಮುಂದುವರೆದಿದ್ದಾರೆ. ಒಟ್ಟು 12 ಮಂದಿ ನಿರ್ದೇಶಕರನ್ನು ಹೊಂದಿರುವ ಎಪಿಎಂಸಿಯಲ್ಲಿ ಹೆಚ್.ಬಿ.ಚಂದ್ರಪ್ಪ ಅವರಿಗೆ 7 ಮತಗಳು, ಪ್ರತಿಸ್ಪರ್ಧಿ ಅಭ್ಯರ್ಥಿ ಮಂಗಲದ ಕೆ.ಎಂ.ಪ್ರಸನ್ನ ಅವರಿಗೆ 5 ಮತಗಳು ದೊರೆತವು. ರಿಟರ್ನಿಂಗ್ ಅಧಿಕಾರಿಯಾಗಿ ಡಿಸಿಸಿ ಬ್ಯಾಂಕಿನ ಮೋಹನ್ ಅವರು ಕಾರ್ಯನಿರ್ವಹಿಸಿದರು.

ಹಿರಿಯ ಸಹಕಾರಿ ಎಂ.ಎನ್.ಕುಮಾರಪ್ಪ ಅವರ ನಿಧನದಿಂದಾಗಿ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಗುರುವಾರ ಚುನಾವಣೆ ನಡೆಯಿತು. ನಿರ್ದೇಶಕರಾದ ಪಾರ್ವತಿ, ಮಂಜುನಾಥ್, ಪೊನ್ನಪ್ಪ, ಶರತ್, ಮಲ್ಲಿಕಾರ್ಜುನ, ನಂದಕುಮಾರ್, ಗಂಗಾಧರ್ ಇದ್ದರು.

ಮಹಿಳೆಯರ ಒಳ ಉಡುಪು ಕಳವು ಮಾಡುತ್ತಿದ್ದ ಆರೋಪಿ ಬಂಧನ




ಚಾಮರಾಜನಗರ: ಮಹಿಳೆಯರ ಒಳ ಉಡುಪುಗಳನ್ನು ಕದಿಯುತ್ತಿದ್ದ ಆರೋಪಿಯನ್ನು ಪಟ್ಟಣ ಠಾಣೆಯ ಪೊಲೀಸರು ಬಂಧಿಸಿ, ವೈದ್ಯಕೀಯ ತಪಾಸಣೆಗೆ ಒಳಪಡಿಸಲು ಕ್ರಮ ಕೈಗೊಂಡಿದ್ದಾರೆ.

ಹೌಸಿಂಗ್ ಬೋರ್ಡ್ ಬಡಾವಣೆಯ ಅಮೃತ್ (24) ಬಂಧಿತ ಆರೋಪಿ. ನಗರದ ಹೌಸಿಂಗ್ ಬೋರ್ಡ್ ಕಾಲೋನಿ, ಇಂದಿರಾ ನಗರ ಮತ್ತು ಕರಿನಂಜನಪುರ ಬಡಾವಣೆಗಳಲ್ಲಿ ಮಧ್ಯರಾತ್ರಿ ವೇಳೆ ಪುರುಷ ವ್ಯಕ್ತಿಯೊಬ್ಬ ಮಹಿಳೆಯಂತೆ ಬಟ್ಟೆ ಧರಿಸಿ ಅಕ್ರಮವಾಗಿ ನಿರ್ಜನ ಪ್ರದೇಶಗಳ ಮನೆಯ ಮುಂಭಾಗದಲ್ಲಿ ಒಗೆದು ಒಣಗಲು ಹಾಕಿದ್ದ ಮಹಿಳೆಯರ ಒಳ ಉಡುಪುಗಳನ್ನು ಕದಿಯುತ್ತಿರುವ ಬಗ್ಗೆ ದೂರು ದಾಖಲಾಗಿತ್ತು.

ದೂರನ್ನು ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿ ಪ್ರಕರಣ ದಾಖಲಾದ 24 ಗಂಟೆಗಳ ಅವಧಿಯಲ್ಲೇ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಈ ಸಂಬಂಧ ಪ್ರತಿಕ್ರಿಯೆ ನೀಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ಬಂಧಿತ ಆರೋಪಿಯು ಮೇಲ್ನೋಟಕ್ಕೆ ಮಾನಸಿಕ ಅಸ್ವಸ್ಥನಂತೆ ಕಾಣುತ್ತಿದ್ದು, ಈತನನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸುವಂತೆ ಸೂಚನೆ ನೀಡಿರುವುದಾಗಿ ತಿಳಿಸಿದರು.

ಕಾರ್ಯಾಚರಣೆಯಲ್ಲಿ ಡಿವೈಎಸ್‌ಪಿ ಸ್ನೇಹಾರಾಜ್, ಸಂತೇಮರಹಳ್ಳಿ ಪಿಐ ಸಾಗರ್, ಪೇದೆಗಳಾದ ಮೋಹನ್‌ಕುಮಾರ್, ಮಹದೇವ, ನಿಂಗರಾಜು, ಜಗದೀಶ, ಚಿನ್ನಸ್ವಾಮಿ ಹಾಗೂ ಶರತ್ ಇದ್ದರು.

ಜೆಎಸ್‌ಎಸ್ ಕಾಲೇಜಿಗೆ 90ರಷ್ಟು ಫಲಿತಾಂಶ


ಅಫ್ಜಭಾನು


ಐಶ್ವರ್ಯ

ಕೊಳ್ಳೇಗಾಲ, ಏ.9– ಗುರುವಾರ ಪ್ರಕಟವಾದ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ಪಟ್ಟಣದ ಜೆಎಸ್‌ಎಸ್ ಬಾಲಕಿಯರ ಪದವಿಪೂರ್ವ ಕಾಲೇಜು 90ರಷ್ಟು ಫಲಿತಾಂಶ ಪಡೆದುಕೊಂಡಿದೆ.

ಕಲಾ ವಿಭಾಗದಲ್ಲಿ ಅಪ್ಜಭಾನು 579, ವಾಣಿಜ್ಯ ವಿಭಾಗದಲ್ಲಿ ಐಶ್ವರ್ಯ 578, ವಿಜ್ಞಾನ ವಿಭಾಗದಲ್ಲಿ ದೀಪಿಕ 565 ಅಂಕಗಳಿಸಿ ಸಾಧನೆಗೈದಿದ್ದಾರೆ. ಪರೀಕ್ಷೆಗೆ ಹಾಜರಾದ 119 ವಿದ್ಯಾರ್ಥಿಗಳ ಪೈಕಿ 107 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಪ್ರಾಂಶುಪಾಲ ಮಹದೇವಸ್ವಾಮಿ ತಿಳಿಸಿದ್ದಾರೆ.

ಬಿಆರ್‌ಟಿ ಅರಣ್ಯದಲ್ಲಿ ಬೆಂಕಿ: 9 ಎಕರೆ ಕಾಡು ನಾಶ



ಚಾಮರಾಜನಗರ: ಬಿಆರ್‌ಟಿ ಹುಲಿ ಸಂರಕ್ಷಿತಾರಣ್ಯ ಪ್ರದೇಶದ ಕರಡಿಮುಟ್ಟಿನ ಸಿರೆಹಳ್ಳ ಅರಣ್ಯ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು 9 ಎಕರೆ ಅರಣ್ಯ ನಾಶವಾಗಿದೆ.

ಬೈಲೂರು ವನ್ಯಜೀವಿ ವಲಯದ ಮಾವತ್ತೂರು 'ಬಿ' ಗಸ್ತಿನ ವ್ಯಾಪ್ತಿಯ ಹಾವಿನಮೂಲೆ ಗ್ರಾಮದ ಹತ್ತಿರವಿರುವ ಸಿರೆಹಳ್ಳ ಅರಣ್ಯದಲ್ಲಿ ಕಾಣಿಸಿಕೊಂಡಿದ್ದು ವಿಷಯ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಹಾಗೂ ಅಗ್ನಿ ಶಾಮಕದಳದ ಸಿಬ್ಬಂದಿ ತೆರಳಿ ಬೆಂಕಿ ನಂದಿಸಿದ್ದಾರೆ.

ಸಂಜೆ ಹಾವಿನಮೂಲೆ ಗ್ರಾಮದ ಆನೆಮದ್ದಿನ ಕಾಡು ಅರಣ್ಯ ಪ್ರದೇಶದಲ್ಲಿ ಮತ್ತೆ ಬೆಂಕಿ ಕಾಣಿಸಿಕೊಂಡಿದ್ದು ಅಪಾರ ಪ್ರಮಾಣದ ಅರಣ್ಯ ನಾಶವಾಗಿದೆ. ವಿಷಯ ತಿಳಿದು ಬೈಲೂರು ವನ್ಯಜೀವಿ ವಲಯದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಬೆಂಕಿ ವಾಚರ್‌ಗಳು ಸೇರಿ ಒಟ್ಟು 30 ಸಿಬ್ಬಂದಿ ಸ್ಥಳಕ್ಕೆ ತೆರಳಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದು ಹೆಚ್ಚಿನ ಪ್ರಮಾಣದಲ್ಲಿ ಬೆಂಕಿ ಹರಡುವುದನ್ನು ತಡೆದಿದ್ದಾರೆ. ಹಾವಿನಮೂಲೆ ಗ್ರಾಮದಲ್ಲಿ 100 ಕುಟುಂಬಗಳು ವಾಸ ಮಾಡುತ್ತಿದ್ದು ಈಗಾಗಲೇ ಅರಣ್ಯ ಇಲಾಖೆಯಿಂದ ಅರಿವು ಮೂಡಿಸುವ ಕಾರ್ಯ ಮಾಡಲಾಗಿದ್ದರೂ ಬೆಂಕಿ ಕಾಣಿಸಿಕೊಳ್ಳುತ್ತಿರುವುದು ವಿಪರ್ಯಾಸವಾಗಿದೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಬೈಲೂರು ವನ್ಯಜೀವಿ ವಲಯದಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತಿದ್ದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಕಾಡಾನೆಗಳ ಹಾವಳಿ ತಡೆಗೆ ರೈಲ್ವೆ ಬ್ಯಾರಿಕೇಡ್ ಅಳವಡಿಕೆ



ಬೇಗೂರು(ಗುಂಡ್ಲುಪೇಟೆ): ಸಮೀಪದ ಬಂಡೀಪುರ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಓಂಕಾರ ಅರಣ್ಯ ವಲಯದ ಕಾಡಂಚಿನ ಗ್ರಾಮಗಳಾದ ಮಂಚಹಳ್ಳಿ ಮತ್ತು ಕುರುಬರಹುಂಡಿ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ತಡೆಯಲು 6 ಕೋಟಿ 50 ಲಕ್ಷ ರೂ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಸಲು ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು ಕುರುಬರಹುಂಡಿ (ಶಿವಕುಮಾರ್ ಪುರ) ಗ್ರಾಮದ ಬಳಿಯಿಂದ 9 ಕಿ.ಮೀವರೆಗೆ ರೈಲ್ವೆ ಬ್ಯಾರಿಕೆಟ್ ಅಳವಡಿಸಲಾಗುತ್ತಿದ್ದು ಮೊದಲ ಹಂತವಾಗಿ 4.67 ಕಿ ಮೀ ವರೆಗೆ 6 ಕೋಟಿ 50 ಲಕ್ಷ ರೂ ಹಣ ಬಿಡುಗಡೆಯಾಗಿದೆ ಎಂದರು.

ಕಾಡಾನೆಗಳು ಬರುತ್ತಿರುವ ಸ್ಥಳಗಳನ್ನು ಗುರುತಿಸಿ ಎಲ್ಲಾ ಕಡೆಯೂ ರೈಲ್ವೆ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗುವುದು. ಅರಣ್ಯ ಇಲಾಖೆ ಮತ್ತು ಅರಣ್ಯ ಸಚಿವರೊಂದಿಗೆ ಈ ಬಗ್ಗೆ ಚರ್ಚಿಸಲಾಗಿದೆ ಎಂದರು. ನಾನು ಶಾಸಕನಾಗಿ ಮೂರು ವರ್ಷಗಳ ನಂತರ ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗುತ್ತಿದೆ. ರೈತರ ತಾಳ್ಮೆಗೆ ನಾನು ಆಭಾರಿಯಾಗಿದ್ದೇನೆ ಎಂದರು. ಒಂಟಿ ಆನೆ ಆಗಾಗ ದಾಳಿ ಮಾಡುತ್ತಿರುವ ಬಗ್ಗೆ ರೈತರಿಂದ ಕೇಳಿ ಬಂದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ ಆ ಕಾಡಾನೆಯನ್ನು ಸೆರೆ ಹಿಡಿಯಲಾಗುವುದು ಎಂದರು.

ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಪ್ರಭಾಕರನ್, ಲೋಕೇಶ್, ಚಾಮುಲ್ ಮಾಜಿ ಅಧ್ಯಕ್ಷ ನಂಜುಂಡ ಪ್ರಸಾದ್, ಭೋಗಯ್ಯನ ಹುಂಡಿ ಕೃಷಿ ಬ್ಯಾಂಕ್ ಅಧ್ಯಕ್ಷ ಕುರುಬರ ಹುಲಿ ಮಹದೇವಸ್ವಾಮಿ, ಸೇರಿದಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ರೈತ ಮುಖಂಡರು ಹಾಜರಿದ್ದರು.

ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟ

19ನೇ ಸ್ಥಾನಕ್ಕೆ ಕುಸಿದ ಚಾಮರಾಜನಗರ

ಜಿಲ್ಲೆಗೆ ಶೇ.84.68ರಷ್ಟು ಫಲಿತಾಂಶ


ಸಂಜನಾ.ಬಿ.ಎಸ್


ನೇತ್ರಾ.ಎಸ್


ಭೂಮಿಕಾ


ಚೈತ್ರಕಲಾ

ಚಾಮರಾಜನಗರ: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಗಡಿ ಜಿಲ್ಲೆ ಚಾಮರಾಜನಗರಕ್ಕೆ ಉತ್ತಮ ಫಲಿತಾಂಶ ಬಂದಿದೆ. ಆದರೆ, ಕಳೆದ ಬಾರಿಗೆ ಹೋಲಿಸಿದರೇ ಈ ಬಾರಿ ರಾಜ್ಯ ಫಲಿತಾಂಶ ಪಟ್ಟಿಯಲ್ಲಿ 6 ಸ್ಥಾನ ಕುಸಿತವಾಗಿದ್ದು, ಶೇಕಡವಾರು ಫಲಿತಾಂಶದಲ್ಲಿ ಸುಧಾರಣೆಯಾಗಿದೆ.

ಕಳೆದ ಬಾರಿ ಶೇ. 73.97ರಷ್ಟು ಫಲಿತಾಂಶದೊಂದಿಗೆ 13ನೇ ಸ್ಥಾನದಲ್ಲಿದ್ದ ಜಿಲ್ಲೆಯೂ ಈ ಬಾರಿ ಶೇ. 84.68ರಷ್ಟು ಫಲಿತಾಂಶ ಪಡೆಯುವ ಮೂಲಕ ಸುಧಾರಣೆಯಾಗಿದೆ. ಆದರೆ, ಜಿಲ್ಲಾವಾರು ಪಟ್ಟಿಯಲ್ಲಿ 19ನೇ ಸ್ಥಾನ ಪಡೆಯುವ ಮೂಲಕ ಕುಸಿತವಾಗಿದೆ. ಜಿಲ್ಲೆಯಲ್ಲಿ ಈ ಬಾರಿ ಒಟ್ಟು 6,239 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಇವರಲ್ಲಿ 5,283 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಜಿಲ್ಲೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು: ಕಲಾ ವಿಭಾಗದಲ್ಲಿ ಕೊಳ್ಳೇಗಾಲದ ಎಸ್‌ವಿಕೆ ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನ ವಿದ್ಯಾರ್ಥಿನಿ ಎಂ. ಚೈತ್ರ 586 (ಶೇ.97.6), ಎಂ.ರಮ್ಯ 577, (ಶೇ. 96.16), ಕುದೇರು ಸರ್ಕಾರಿ ಪಿಯು ಕಾಲೇಜಿನ ರಮ್ಯ 575 (ಶೇ. 95.83) ಅಂಕ ಪಡೆದಿದ್ದಾರೆ.

ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪೈಕಿ ರಾಮಾಪುರದ ಜೆಎಸ್‌ಎಸ್ ಪಿಯು ಕಾಲೇಜಿನ ಎಂ. ಗೌತಮಿ 582 (ಶೇ. 97), ಗುಂಡ್ಲುಪೇಟೆ ಜೆಎಸ್‌ಎಸ್ ಪಿಯು ಕಾಲೇಜಿನ ಪಿ. ಅಭಿಲಾಷ್ 573 (ಶೇ. 95.50), ಚಾಮರಾಜನಗರ ಜೆಎಸ್‌ಎಸ್ ಪಿಯು ಕಾಲೇಜಿನ ಸುಪ್ರೀತ 571 (ಶೇ. 95.17) ಅಂಕ ಪಡೆದಿದ್ದಾರೆ.

ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕೊಳ್ಳೇಗಾಲ ನಿಸರ್ಗ ಪಿಯು ಕಾಲೇಜಿನ ಅಫ್ರೀನ್ 583 (ಶೇ. 97.31), ಜೆಎಸ್‌ಎಸ್ ಪಿಯು ಕಾಲೇಜಿನ ಅಫುಭಾನು 579 (ಶೇ. 96.50) ಅಂಕ ಪಡೆದಿದ್ದಾರೆ.

ವಾಣಿಜ್ಯ ವಿಭಾಗ: ಲೊಕ್ಕನಹಳ್ಳಿ ಸರ್ಕಾರಿ ಪಿಯು ಕಾಲೇಜಿನ ಎಸ್. ರಂಜಿನಿ 584 (ಶೇ.97.33), ಗುಂಡ್ಲುಪೇಟೆ ಬಾಲಕಿಯರ ಸರ್ಕಾರಿ ಪಿಯು ಕಾಲೇಜಿನ ಸಿಂಚನಾ 583 (ಶೇ. 97.16) ಅಂಕ ಪಡೆದಿದ್ದಾರೆ.

ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪೈಕಿ ಚಾಮರಾಜನಗರ ಜೆಎಸ್‌ಎಸ್ ಪಿಯು ಕಾಲೇಜಿನ ಎಂ. ಸೌಮ್ಯ 580 (ಶೇ 96.67), ಗುಂಡ್ಲುಪೇಟೆ ಜೆಎಸ್‌ಎಸ್ ಪಿಯು ಕಾಲೇಜಿನ ಅಮೂಲ್ಯ 578 (ಶೇ 96.33) ಅಂಕ ಪಡೆದಿದ್ದಾರೆ.

ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಪೈಕಿ ಚಾಮರಾಜನಗರದ ಬ್ರೈಟ್ ಪದವಿ ಪೂರ್ವ ಕಾಲೇಜಿನ ಸಂಜನ 592 (ಶೇ.98.66), ನೇತ್ರ 592 (ಶೇ.98.66) ಅಂಕ ಪಡೆದಿದ್ದಾರೆ.

ವಿಜ್ಞಾನ ವಿಭಾಗ: ಗುಂಡ್ಲುಪೇಟೆ ಸರ್ಕಾರಿ ಪಿಯು ಕಾಲೇಜಿನ ಡಿ.ಬಿ. ಸುಪ್ರಿಯ 566 (ಶೇ.94.33), ಕೊಳ್ಳೇಗಾಲದ ಎಸ್.ವಿ.ಕೆ ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನ ಸಿ.ಡಿ ಯಮುನಾ 564 (ಶೇ. 94) ಅಂಕ ಪಡೆದಿದ್ದಾರೆ.

ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪೈಕಿ ಚಾಮರಾಜನಗರ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಅನು 575 (ಶೇ. 95.83), ಯಶಸ್ವಿನಿ 574 (ಶೇ. 95.67) ಅಂಕ ಪಡೆದಿದ್ದಾರೆ.

ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಪೈಕಿ ಕೊಳ್ಳೇಗಾಲ ವಾಸವಿ ಪಿಯು ಕಾಲೇಜಿನ ಭೂಮಿಕಾ 587 (ಶೇ.98), ಸಜಿನಿ 585 (ಶೇ:97.5) ಅಂಕ ಪಡೆದಿದ್ದಾರೆ.

ಅತಿ ಹೆಚ್ಚು ಫಲಿತಾಂಶ ಕಾಲೇಜು: ಗುಂಡ್ಲುಪೇಟೆ ತಾಲೂಕಿನ ಕಬ್ಬಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ಶೇ. 91.30 ಫಲಿತಾಂಶ ಪಡೆದಿದೆ. ಉಳಿದಂತೆ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪೈಕಿ ಹನೂರು ತಾಲೂಕಿನ ಮಾರ್ಟಳ್ಳಿ ಗ್ರಾಮದ ಸೆಂಟ್ ಮೇರಿಸ್ ಪದವಿ ಪೂರ್ವ ಕಾಲೇಜು ಶೇ.97.67 ಹಾಗೂ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಪೈಕಿ ಹನೂರು, ಗುಂಡ್ಲುಪೇಟೆ ತಾಲೂಕಿನ ಯಡವನಹಳ್ಳಿ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು ಹಾಗೂ ಹನೂರಿನ ಮಂಗಲ ಗ್ರಾಮದಲ್ಲಿರುವ ಏಕಲವ್ಯ ಮಾದರಿ ವಸತಿ ಪದವಿ ಪೂರ್ವ ಕಾಲೇಜು ಶೇ. 100ರಷ್ಟು ಫಲಿತಾಂಶ ಪಡೆದಿದೆ.

ಟಿಪ್ಪರ್ ಹಾವಳಿ, ಅಕ್ರಮ ಗಣಿಗಾರಿಕೆ ತಡೆಗೆ ಆಗ್ರಹಿಸಿ ಧರಣಿ

ಶಾಸಕರು, ಡಿಸಿ, ಎಡಿಸಿ, ಅಧಿಕಾರಿಗಳು ಧರಣಿ ಸ್ಥಳಕ್ಕೆ ಭೇಟಿ, ಪ್ರತಿಭಟನಾಕಾರರಿಂದ ಅಹವಾಲು ಸ್ವೀಕಾರ



ಗುಂಡ್ಲುಪೇಟೆ, ಏ.9– ಟಿಪ್ಪರ್ ಹಾವಳಿ, ಅಕ್ರಮ ಗಣಿಗಾರಿಕೆ, ಸಫಾರಿ ಬಂದ್ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾಮೂಹಿಕ ನಾಯಕತ್ವ ರೈತ ಸಂಘಟನೆ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ನಡೆಸುತ್ತಿದ್ದ ಧರಣಿ ಸ್ಥಳಕ್ಕೆ ಗುರುವಾರ ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್, ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ, ಜಿ.ಪಂ ಸಿಇಒ, ಎಸ್ಪಿ, ಇತರೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಸಮಸ್ಯೆ ಆಲಿಸಿದರು.

ತಾಲೂಕು ಕಚೇರಿ ಮುಂಭಾಗ ಧರಣಿ ನಡೆಸುತ್ತಿದ್ದ ಧರಣಿ ನಿರತರು ಹಿಂದೆ ಪ್ರತಿಭಟನೆ ನಡೆಸಿದ ನಂತರ ಪತ್ರಿಕಾ ಗೋಷ್ಠಿ ನಡೆಸಿ ಶಾಲಾ ಅವಧಿಯಲ್ಲಿ ಟಿಪ್ಪರ್‌ಗಳ ಓಡಾಟ ನಡೆ ಸಬಾರದೆಂಬ ನಿಯಮ ಪಾಲನೆಯಾಗು ತ್ತಿಲ್ಲ ಕ್ವಾರಿಗಳಲ್ಲಿ ಸಮಯ ಮೀರಿ ಬ್ಲಾಸ್ಟಿಂಗ್, ಡಿಗ್ಗಿಂಗ್ ಇತರೆ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಸಫಾರಿ ಪುನರಾರಂಭದ ನಂತರ ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗಿ ಜಾನುವಾರುಗಳು ಬಲಿಯಾಗುತ್ತಿವೆ. ಕೆರೆಗಳಿಗೆ ನೀರು ತುಂಬಿಸುವುದು, ಜಾನುವಾರು ವಿಮೆ, ಗ್ರಾಮೀಣ ಭಾಗದಲ್ಲಿ ಗೋಮಾಳ ಇತರೆ ಸರಕಾರಿ ಭೂಮಿಯಲ್ಲಿ ರೈತರಿಗೆ ತಿರುಗಾಡುವ ದಾರಿ ಸೇರಿ ಹಲವು ಬೇಡಿಕೆಗಳು ಈಡೇರಿಸಬೇಕು ಎಂದು ಧರಣಿ ನಿರತರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ ಟಿಪ್ಪರ್‌ಗಳ ಓಡಾಟದ ವಿಷಯದಲ್ಲಿ ನೀಡಿದ್ದ ಸೂಚನೆಯ ಶೇ.70 ರಷ್ಟು ಪಾಲನೆಯಾಗುತ್ತಿದೆ. ಉಳಿದ ವ್ಯತ್ಯಾಸ ಸರಿಪಡಿಸುವ ಭರವಸೆ ನೀಡಿದರು. ನಿಯಮಾನುಸಾರ ಪರವಾನಗಿ ಪಡೆದವರು ಮಾತ್ರ ತಾಲೂಕಿನಲ್ಲಿ ಗಣಿಗಾರಿಕೆ ನಡೆಸುತ್ತಿದ್ದು, ಅಕ್ರಮಕ್ಕೆ ಅವಕಾಶವಿಲ್ಲ. ಅಲ್ಲದೇ ಕ್ವಾರಿಗಳಲ್ಲಿ ಸಮಯ ಪಾಲನೆ ಬಗ್ಗೆ ಗಮನ ನೀಡುವಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಡಿಡಿ ಜನಾರ್ಧನ್‌ರಿಗೆ ಶಾಸಕರು ಸೂಚನೆ ನೀಡಿದರು. ಪ್ರವಾಸೋದ್ಯಮ ಅಭಿವೃದ್ಧಿ ನಿಟ್ಟಿನಲ್ಲಿ ಸಫಾರಿ ಅನಿವಾರ್ಯ. ರಾಷ್ಟ್ರದ ಬಹುತೇಕ ಕಡೆಗಳಲ್ಲಿ ಸಫಾರಿ ನಡೆಯುತ್ತಿದೆ. ವನ್ಯಪ್ರಾಣಿಗಳ ಸಂತತಿ ಹೆಚ್ಚಳದ ಕಾರಣ ಹೊರಗೆ ಬರುತ್ತಿವೆ ಹೊರತು ಇದಕ್ಕೆ ಸಫಾರಿ ಕಾರಣವಲ್ಲ ಎಂದು ಸಮಜಾಯಿಷಿ ನೀಡಿದರು.

ಡಿಸಿ ಶ್ರೀರೂಪ, ಜಿ.ಪಂ ಸಿಇಒ ಮೋನಾ ರೋತ್, ಎಡಿಸಿ ಜವರೇಗೌಡ ಇದ್ದರು.

'ಎನ್.ಹೆಚ್. 66'ರಲ್ಲಿ ಪ್ರಮೋದ್‌ಶೆಟ್ಟಿ ಥ್ರಿಲ್ಲರ್ ಜರ್ನಿ..!



ಎನ್.ಹೆಚ್.66 ಎರಡು ರಾತ್ರಿಗಳಲ್ಲಿ ಮಂಗಳೂರಿನಿಂದ ಗೋವಾಗೆ ಹೋಗುವ ಮಾರ್ಗ ಮಧ್ಯದಲ್ಲಿ ನಡೆಯುವ ಥ್ರಿಲ್ಲರ್ ಕಥೆಯಾಗಿದ್ದು, ಮೂರು ಅಥವಾ ನಾಲ್ಕು ಪಾತ್ರಗಳ ಸುತ್ತ ಸುತ್ತುವ ಚಿತ್ರಕಥೆಯಾಗಿದೆ. ಮಂಜುನಾಥ್ ಟಿ.ಆರ್. ಅವರ ನಿರ್ಮಾಣ ಹಾಗೂ ನಿರ್ದೇಶನದ ಈ ಚಿತ್ರದಲ್ಲಿ ಕಾಂತಾರ ಖ್ಯಾತಿಯ ಪ್ರಮೋದ್ ಶೆಟ್ಟಿ ಹಾಗೂ ಶೃತಿ ಹರಿಹರನ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ಸಮಾರಂಭ ನಡೆಯಿತು.

ಮುಹೂರ್ತದ ನಂತರ ಮಾತನಾಡಿದ ನಿರ್ದೇಶಕ ಮಂಜುನಾಥ್ ಟಿ.ಆರ್. ಮಾತನಾಡುತ್ತ ನಾನು ರಾಯರ ಭಕ್ತ, ಅವರ ಹೆಸರಿನಲ್ಲೇ ರಾಯ ಫಿಲಂಸ್ ಸಂಸ್ಥೆ ಹುಟ್ಟುಹಾಕಿ ಈ ಚಿತ್ರ ಮಾಡುತ್ತಿದ್ದೇನೆ. ಎನ್‌ಹೆಚ್ 66 ಹೆಸರೇ ಹೇಳುವಂತೆ ಇದೊಂದು ರೋಡ್ ಥ್ರಿಲ್ಲರ್... ಥ್ರಿಲ್ಲರ್... ಡ್ರಾಮಾ ಜಾನರ್ ಚಿತ್ರ. ಪ್ರಮೋದ್ ಶೆಟ್ಟಿ ಅವರಿಗೆ ಈ ಕಥೆ ಹೇಳಿದಾಗ, ಪಾತ್ರವನ್ನು ಇಷ್ಟಪಟ್ಟು ನಟಿಸಲು ಒಪ್ಪಿದರು. ರಾಜೇಶ್ ನಟರಂಗ ಮತ್ತೊಂದು ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಸದ್ಯದಲ್ಲೇ ಮಂಗಳೂರಿನಿಂದ 'ಎನ್.ಹೆಚ್.66' ಚಿತ್ರದ ಚಿತ್ರೀಕರಣವನ್ನು ಪ್ರಾರಂಭಿಸಲಿದ್ದೇವೆ ಎಂದರು.

ನಾಯಕ ಪ್ರಮೋದ್ ಶೆಟ್ಟಿ ಮಾತನಾಡಿ ಇದೇ ಮೊದಲ ಬಾರಿಗೆ ಈಥರದ ಪಾತ್ರ ಮಾಡುತ್ತಿದ್ದೇನೆ, ಕಥೆ ತುಂಬಾ ಇಂಟರೆಸ್ಟಿಂಗ್ ಆಗಿದೆ ಎಂದು ಹೇಳಿದರು. ಒನ್ ಹೈವೇ ಮೆನಿ ಸೀಕ್ರೆಟ್ಸ್ ಅಡಿಬರಹವಿರುವ ಈ ಚಿತ್ರಕ್ಕೆ ಸುನೀತ್ ಹಲಗೇರಿ ಅವರ ಛಾಯಾಗ್ರಹಣ ಹಾಗೂ ಸ್ವಾಮಿನಾಥನ್ ಸಂಗೀತ ನಿರ್ದೇಶನವಿದೆ.






'ಟಾಕ್ಸಿಕ್‌ಗೆ' ಮತ್ತೊಂದು ಕಂಟಕ

ರಾಕಿಂಗ್ ಸ್ಟಾರ್ ಯಶ್ ಅಭಿನಯ ಹಾಗೂ ನಿರ್ಮಾಣದ ಟಾಕ್ಸಿಕ್ ಚಿತ್ರದ ಬಿಡುಗಡೆಗೆ ಅದ್ಯಾಕೋ ಒಳ್ಳೇ ಮುಹೂರ್ತವೇ ಸಿಗುತ್ತಿಲ್ಲ, ಈ ಹಿಂದೆ ಧುರಂದರ್-2 ಚಿತ್ರದಿಂದ ತಪ್ಪಿಸಿಕೊಂಡ 'ಟಾಕ್ಸಿಕ್' ಚಿತ್ರಕ್ಕೀಗ ಮತ್ತೊಂದು ಕಂಟಕ ಎದುರಾಗಿದೆ. ಸದ್ಯ ಜೂನ್ 4ಕ್ಕೆ ಯಶ್ ಅಭಿನಯದ 'ಟಾಕ್ಸಿಕ್' ರಿಲೀಸಾಗಲು ಅಣಿಯಾಗುತ್ತಿದೆ. ಆದರೆ ಸಲ್ಮಾನ್‌ಖಾನ್ ಅಭಿನಯದ 'ಮಾತೃಭೂಮಿ' ಬಿಗ್ ಬಜೆಟ್ ಚಿತ್ರವೂ ಜೂನ್ ಮೊದಲ ವಾರವೇ ಬಿಡುಗಡೆಯಾಗಲಿದೆ. ಈ ಮೊದಲು ಮೇ 15ರಂದೇ ಬಿಡುಗಡೆಯಾಗಬೇಕಿದ್ದ 'ಮಾತೃಭೂಮಿ' ಚಿತ್ರ ರೀ ಶೂಟ್, ಸೆನ್ಸಾರ್ ಸಮಸ್ಯೆಯಿಂದ ಮುಂದಕ್ಕೆ ಹೋಗಿದ್ದು, ಅದೂ ಸಹ ಜೂನ್ 4ರಂದೇ ತೆರೆ ಕಾಣಲು ಅಣಿಯಾಗುತ್ತಿದೆ. ಈ ಮೂಲಕ 'ಟಾಕ್ಸಿಕ್' ಚಿತ್ರದ ಸದ್ಯದ ಪರಿಸ್ಥಿತಿ ಬೆಂಕಿಯಿಂದ ಬಾಣಲಿಗೆ ಬಿದ್ದಂತಾಗಿದೆ. ಚಿತ್ರದಲ್ಲಿ ಕಾಂಟ್ರೊವರ್ಸಿ ಕಥೆಯಿದ್ದ ಕಾರಣದಿಂದ ಮಾತೃಭೂಮಿ ಚಿತ್ರಕ್ಕೆ ಈ ಮೊದಲಿದ್ದ 'ಬ್ಯಾಟಲ್ ಆಫ್ ಗಲ್ವಾನ್' ಎಂಬ ಟೈಟಲ್ ಹಾಗೂ ಕಥೆಯನ್ನೂ ಬದಲಿಸಿ 40 ದಿನಗಳ ಕಾಲ ಮರುಚಿತ್ರೀಕರಣ ನಡೆಸಲಾಗಿದೆ.

ಮೇ 15, ಶಾಲಾ-ಕಾಲೇಜುಗಳಿಗೆ ರಜೆ ಇರುತ್ತದೆ ಎಂಬ ಕಾರಣಕ್ಕೇ ಸಲ್ಮಾನ್‌ಖಾನ್ ತಮ್ಮ ಚಿತ್ರವನ್ನು ಅಂದು ರಿಲೀಸ್ ಮಾಡಲು ಮುಂದಾಗಿದ್ದರು. ಆದರೆ, ಚಿತ್ರದಲ್ಲಿ ಭಾರತ ಹಾಗೂ ಚೀನಾ ನಡುವಿನ ಗಲ್ವಾನ್ ಘರ್ಷಣೆಯ ವಿಷಯ ಇರುವುದರಿಂದ ಇದರಲ್ಲಿ ಸ್ವಲ್ಪ ಎಡವಟ್ಟಾದರೂ ಸಮಸ್ಯೆಯಾಗಬಹುದು ಎಂಬ ಕಾರಣಕ್ಕೆ ಚಿತ್ರಕಥೆಯಲ್ಲಿ ಬದಲಾವಣೆ ಮಾಡಿಕೊಳ್ಳಲಾಯಿತು, ಇದೀಗ ಸೆನ್ಸಾರ್ ಮಂಡಳಿ ಈ ಚಿತ್ರವನ್ನು ವಿಸ್ತೃತವಾಗಿ ನೋಡುವ ಸಾಧ್ಯತೆಯಿದೆ. ಸದ್ಯ ಚಿತ್ರದ ಪೋಸ್ಟ್‌ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಸಿನಿಮಾ ವೀಕ್ಷಣೆಗೆ ರೆಡಿಯಾಗಲು ಸಾಕಷ್ಟು ಸಮಯ ಬೇಕಾಗುತ್ತದೆ. ಹೀಗಾಗಿ, ಮಾತೃಭೂಮಿ ಚಿತ್ರ ಕೂಡ ಮೇ 15ಕ್ಕೆ ಬದಲಾಗಿ ಜೂನ್ 4ಕ್ಕೆ ತೆರೆಕಾಣುವ ಸಾಧ್ಯತೆ ದಟ್ಟವಾಗಿದೆ.





'ಜಸ್ಟ್ ಲೀವ್ ಇಟ್...!'

ಕರ್ನಾಟಕದ ನಂಬರ್ ಒನ್ ನಿರೂಪಕಿ ಎನಿಸಿಕೊಂಡ ಅನುಶ್ರೀ, ಪುನೀತ್ ರಾಜ್‌ಕುಮಾರ್ ಅವರ ಅಪ್ಪಟ ಅಭಿಮಾನಿ. ಇತ್ತೀಚೆಗೆ ಅನುಶ್ರೀ ಪುನೀತ್ ಹೆಸರಿನಲ್ಲಿ ಹಣ ಮಾಡುತ್ತಿದ್ದಾರೆ ಎಂಬ ಅಪಾದನೆ ಅವರ ಮೇಲೆ ಬಂದಿತ್ತು. ಅದಕ್ಕೀಗ ಅನುಶ್ರೀ ಖಡಕ್ ಉತ್ತರ ನೀಡಿದ್ದಾರೆ. ಪುನೀತ್ ರಾಜ್‌ಕುಮಾರ್ ಕಂಡ್ರೆ ಅನುಶ್ರೀಗೆ ಮೊದಲಿಂದಲೂ ಅಭಿಮಾನ. ಅದೇ ಕಾರಣದಿಂದ ಅನುಶ್ರೀ ತಮ್ಮ ಯೂಟ್ಯೂಬ್ ಚಾನೆಲ್ ಲೋಗೋದಲ್ಲಿ ಪುನೀತ್ ಅವರ ಫೋಟೋ ಸೇರಿಸಿಕೊಂಡಿದ್ದಾರೆ. ತಮ್ಮ ಮದುವೆಯ ಸಂದರ್ಭದಲ್ಲಿ ಪುನೀತ್‌ರ ಫೋಟೋ ಇಟ್ಟು ಪೂಜಿಸಿದ್ದರು. ಇದು ಪುನೀತ್ ಮೇಲೆ ಅವರಿಗಿರೋ ಗೌರವಕ್ಕೆ ಸಾಕ್ಷಿ. ಆದರೆ, ಕೆಲವರು ಇದನ್ನು ಟ್ರೋಲ್ ಮಾಡಿದ್ದರು, ಅದಕ್ಕೆ ಅನುಶ್ರೀ ಖಡಕ್ ಉತ್ತರ ನೀಡಿದ್ದಾರೆ.



ಪುನೀತ್‌ರನ್ನು ಅನುಶ್ರೀ ಆರಾಧಿಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಪುನೀತ್‌ರ ಬಗ್ಗೆ ಹಾಡಿ ಹೊಗಳಿದ್ದಾರೆ. ನೆನೆದು ಕಣ್ಣೀರೂ ಹಾಕಿದ್ದಾರೆ. ಇದನ್ನು ನೋಡಿದ ಅನೇಕರು 'ಅವರದ್ದು ಮೊಸಳೆ ಕಣ್ಣೀರು, ಪುನೀತ್ ಹೆಸರಲ್ಲಿ ಅವರು ದುಡ್ಡು ಮಾಡುತ್ತಿದ್ದಾರೆ ಎಂದಿದ್ದರು.


ಕಾರ್ಯಕ್ರಮವೊಂದರಲ್ಲಿ ಪುನೀತ್, ಅನುಶ್ರೀ ಅವರ ವಾಕ್ಚಾತುರ್ಯಕ್ಕೆ ಬೆರಗಾಗಿ ನೀವು ತುಂಬಾನೇ ಸ್ವೀಟ್. ನಿಮ್ಮಂತಹವರ ಅಭಿಮಾನ ಹೊಂದಲು ನಿಜಕ್ಕೂ ಖುಷಿಯಾಗುತ್ತದೆ. ದೇವರು ನಿಮಗೆ ಒಳ್ಳೆಯದು ಮಾಡಲಿ ಎಂದು ಹೇಳಿದ್ದರಂತೆ. ಇದರ ಸ್ಕ್ರೀನ್‌ಶಾಟ್ ಕೂಡ ಇಟ್ಟುಕೊಂಡಿರುವ ಅನುಶ್ರೀ, ನಾನು ಎಂತಹ ಫ್ಯಾನ್ ಅಂತ ಅವರಿಗೆ ಗೊತ್ತು. ಹೀಗಿರುವಾಗ ಇಂಥವರಿಗೆ ಯಾಕೆ ಉತ್ತರಿಸಬೇಕು. ಜಸ್ಟ್ ಲೀವ್ ಇಟ್ ಎಂದು ಅನುಶ್ರೀ ಹೇಳಿದ್ದಾರೆ.



ಸಿನಿಪದಬಂಧ-621



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________

ವಿಳಾಸ ____________

____

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ಅನಂತ್ ನಾಗ್ - ಲಕ್ಷ್ಮಿಗೆ ಮುಕ್ತಿ ಸಿಕ್ಕರೂ ಕೋಳ ಹಾಕಿಕೊಂಡಿದ್ದಾರೆ 7
4. ರವಿಚಂದ್ರನ್ 'ವಿಲಾಸ ಪ್ರಿಯ' 3
8. ರಂಗೇನಾ ಹಳ್ಳಿಯಲ್ಲಿ _ _ _ _ _ _ _ 7
9. ದನ ಮೇಯಿಸುವಾಗ ವನದಲ್ಲಿ ಸಿಕ್ಕ ಸುವಾಸಿತ ಗಿಡ 3
11. 'ತಾನ ತಂದಾನ ಜೋಡಿ ಆದೆ ನಾ ಎಂದೂ ಬಿಡಲಾರೆ ನಿನ್ನ...', ಗೀತೆಯ ಚಿತ್ರ 5
13. ಕಲ್ಪನಾ ಬಾಣಗಳಿಂದ ನಿರ್ಮಿಸಿದ ಗೂಡು 5
16. ಪ್ರಾಣಿಗಳೆರಡು ಸೇರಿಕೊಂಡಾಗ ಯಶ್ ಚಿತ್ರ ಪ್ರತ್ಯಕ್ಷ ! 5
17. ಡಾ. ರಾಜ್‌ಕುಮಾರ್ ಕೊಡಲಿ ಹಿಡಿದ ಭಾರ್ಗವ 5
18. ಕಾಡಿನ ರಾಜ ಚಿತ್ರದ ನಾಯಕಿ 2
19. ಕುರುಬನ ರಾಣಿ ಚಿತ್ರದ ನಾಯಕಿ ಬೆತ್ತಲೆಯಲ್ಲ 2

ಮೇಲಿನಿಂದ ಕೆಳಕ್ಕೆ

1. ಪ್ರಭಾಕರ್ - ಸುಜಾತ ಅಭಿನಯಕ್ಕೆ ಕೆ. ವಿ. ಜಯರಾಂ ನಿರ್ದೇಶಕ 6
2. ಲಾಕಪ್‌ನಲ್ಲಿ ಆದ ಸಾವು 2
3. ಎ. ಟಿ. ರಘು ನಿರ್ದೇಶನದಲ್ಲಿ ಅಂಬರೀಷ್ ಶಿಕಾರಿಯಾಡಿದ್ದಾನೆ 4
5. ಸಿ. ವಿ. ಶಿವಶಂಕರ್ ನಮ್ಮ ಭಾಷೆಯ ಪುತ್ರ 6
6. ಊರ್ವಶಿ, ಮೇನಕೆಯೊಂದಿಗೆ ಬಂದವಳು ಇಲ್ಲಿ ತಲೆಕೆಳಗು 2
7. ಪೋಲಿ ಹುಡುಗ ಚಿತ್ರದ ಹಾಡೊಂದರಲ್ಲಿ ಬಂದ ಹುಟ್ಟು ಸಾವುಗಳೆರಡು 'ಕುರುಡು' 6
10. 'ಸಂಗಾತಿಯು ಬಳಿ ಬಾರದೆ ಈ ಜೀವನ ಬರಡಾಗಿದೆ...', ಗೀತೆಯ ಗಾಯಕಿ 6
12. ಬಂಡಾರು ಗಿರಿಬಾಬು ಬೆಲೆ ಬಾಳುವ ಮಣಿಯ ನೀರು ಧುಮುಕಿಸಿದ್ದಾನೆ 7
14. ಶಂಕರ್ ನಾಗ್ - ದೀಪಿಕಾಳ ನೂತನ ಬದುಕು 5
15. ಸರಸದ ಮಾತಿಗೆ ಹೀಗೊಂದು ಪದ 3

ಸಿನಿ ಪದಬಂಧ 620ರ ಉತ್ತರ

ಬಂ	ಗಾ	ರ	ದ	ಪಂ	ಜ	ರ		ಸಂ	ಗ	ಮ
ಗಾ			ತ್ತ		ರಾ		ಬಿಂ			ಜ
ರ		ಅ		ವ	ಸಂ	ತ	ಬ	ರೆ	ದ	ನು
ದ	ಲ್ಲಾ	ಳಿ			ಧ					ನಿ
ಜಿಂ		ಯ		ರಾ		ಶು	ಭ	ಮಿ	ಲ	ನ
ಕೆ		ಗೆ		ಮ			ಕ್ತ			ಗೆ
	ಇ	ಳಿ	ಯ	ರಾ	ಜ		ಕ		ಶೃಂ	
ಆ		ಯ		ಮ		ಕ	ನ	ಸು	ಗಾ	ರ
ಲಾ				ರಾ			ಕ		ರ	
ಪ	ವಿ	ತ್ರ	ಪ್ರೇ	ಮ		ದಾ	ದಾ		ರಾ	
							ಸ		ಜ	ನ್ಮ

ವಿಜೇತರು: ಪ್ರಮೋದ್, ನಂ.64, 3ನೇ ಅಡ್ಡರಸ್ತೆ, 2ನೇ ಮೇನ್, ಶ್ರೀರಾಂಪುರ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಬೆಟ್ಟಿಂಗ್, ಡ್ರಗ್ಸ್‌ನ 'ಲೂಪ್'



ಇತ್ತಿಚಿನ ದಿನಗಳಲ್ಲಿ ಬೆಟ್ಟಿಂಗ್, ಆನ್‌ಲೈನ್‌ಗೇಮ್, ಡ್ರಗ್ಸ್ ಗೀಳಿಗೆ ಬಿದ್ದು ಅನೇಕ ಕುಟುಂಬಗಳೇ ಸರ್ವನಾಶವಾಗಿವೆ. ಆದರೂ, ನಮ್ಮ ಯುವಜನಾಂಗ ಅದನ್ನು ಬಿಡುತ್ತಿಲ್ಲ. ಈ ಚಟಕ್ಕೆ ಬಲಿಯಾದವರ ಕಥೆ ಇಟ್ಟುಕೊಂಡು ನಿರ್ದೇಶಕ ಯಶವಂತ್ 'ಲೂಪ್' ಚಿತ್ರವನ್ನು ಮಾಡುತ್ತಿದ್ದಾರೆ, ನಿರ್ಮಾಪಕ ಯಲ್ಲಪ್ಪ ಅವರ ಪುತ್ರ ಶಶಿಕಿರಣ್ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಇತ್ತೀಚೆಗೆ 'ಲೂಪ್' ಚಿತ್ರದ ಟ್ರೈಲರ್‌ನ್ನು ನಟ ಪ್ರಥಮ್ ಬಿಡುಗಡೆಗೊಳಿಸಿ, ಚಿತ್ರತಂಡಕ್ಕೆ ಶುಭ ಹಾರೈಸಿದರು. ಜೀವನ್‌ಗೌಡ ಅವರ ಛಾಯಾಗ್ರಹಣ, ಸಂತೋಷ್ ಜಾಶ್ವಾ ಅವರ ಸಂಗೀತ ಈ ಚಿತ್ರಕ್ಕಿದೆ.

ಈ ವೇಳೆ ಮಾತನಾಡಿದ ಪ್ರಥಮ್, ಈಗಿನ ಜನರೇಶನ್ ಹಾಳಾಗ್ತಿರೋದೇ ಬೆಟ್ಟಿಂಗ್, ಡ್ರಗ್ಸ್‌ನಂಥ ಕೆಟ್ಟ ಹವ್ಯಾಸಗಳಿಂದ ಇಂತಹ ಒಳ್ಳೆಯ ಕಂಟೆಂಟ್ ಇಟ್ಟುಕೊಂಡು ಈ ಚಿತ್ರ ಮಾಡಿದ್ದಾರೆ. ಅದರಿಂದಾಗುವ ಕಷ್ಟ, ನೋವು, ದುಷ್ಪರಿಣಾಮಗಳನ್ನೂ ಸಹ ತೋರಿಸಿದ್ದಾರೆ, ಒಳ್ಳೇದಾಗಲಿ ಎಂದರು.

ನಾಯಕ ಶಶಿಕಿರಣ್ ಮಾತನಾಡಿ ನಾವು ಈ ಚಿತ್ರ ನಿರ್ಮಾಣ ಮಾಡುವಾಗ ಸಾಕಷ್ಟು ಏಳು-ಬೀಳುಗಳ ನೋಡಿದೆವು. ಹೊಸಬರು ತಮ್ಮ ಸಿನಿಮಾನ ತೆರೆಮೇಲೆ ತರೋದೇ ಒಂದು ಸಾಹಸ. ಚಿತ್ರದಲ್ಲಿ ಒಳ್ಳೆಯ ಕಂಟೆಂಟ್ ಇದೆ ಎಂದರು.

ನಾಯಕಿ ಶೋಭಿತಾ ಮಾತನಾಡಿ ಗೇಮ್ ಅಂತ ಹೋದಾಗ ಮುಂದೆ ಅದೇ ಅಭ್ಯಾಸವಾಗಿ ಬಿಡುತ್ತದೆ. ಹೋಗ್ತಾ... ಹೋಗ್ತಾ... ಅದರಲ್ಲಿ ನಾವು ಸಿಕ್ಕಿಹಾಕಿಕೊಳ್ತೇವೆ. ಅದೇ ಅಂಶ ನಮ್ಮ ಚಿತ್ರದಲ್ಲಿದೆ. ನಾಯಕನ ಕಷ್ಟದ ಸಮಯದಲ್ಲೂ ಆತನಿಗೆ ಬೆಂಬಲವಾಗಿ ನಿಲ್ಲುವ ಹುಡುಗಿಯ ಪಾತ್ರ ನನ್ನದು ಎಂದರು. ನಿರ್ಮಾಪಕ ಯಲ್ಲಪ್ಪ ಮಾತನಾಡಿ ನನ್ನ ಮಗ ಚಿಕ್ಕವಯಸಿನಿಂದಲೂ ಡಾನ್ಸರ್ ಆಗಿದ್ದಾನೆ. ತಾನೊಬ್ಬ ನಟನಾಗಬೇಕೆಂಬ ಆಸೆ ಇಟ್ಟುಕೊಂಡಿದ್ದ, ಆತನಿಗೋಸ್ಕರ ನಾನೀ ಚಿತ್ರ ಮಾಡಿದ್ದೇನೆ ಎಂದು ಹೇಳಿದರು.

ಇಂದಿನಿಂದ ಸೈಕಾಲಜಿಕಲ್ ಥ್ರಿಲ್ಲರ್ 'ಕಾಡಾ'



ರಿಂಗ್‌ಮಾಸ್ಟರ್', 'ಮಂಜರಿ'ಯಂಥ ಚಿತ್ರಗಳ ನಿರ್ದೇಶಕ ವಿಶೃತ್ ನಾಯಕ್ ಆಕ್ಷನ್ ಕಟ್ ಹೇಳಿರುವ ಸೈಕಾಲಜಿಕಲ್ ಥ್ರಿಲ್ಲರ್ ಚಿತ್ರ 'ಕಾಡಾ' ಈ ವಾರ ತೆರೆ ಕಾಣುತ್ತಿದೆ. ಜಯರಾಮ್ ಕಾರ್ತಿಕ್ (ಜೆಕೆ), ಕಾವ್ಯ ಶೆಟ್ಟಿ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದಲ್ಲಿ ವಾಸಿಯಾಗದೆ ಇರುವಂಥ ಖಾಯಿಲೆಯೊಂದನ್ನು ಹಿನ್ನೆಲೆಯಾಗಿಟ್ಟುಕೊಂಡು ಥ್ರಿಲ್ಲರ್ ಕಥೆಯನ್ನು ನಿರೂಪಿಸಲಾಗಿದೆ. ಸಮಾಜ ದಲ್ಲಿ ಇಂಥ ಖಾಯಿಲೆಯನ್ನು ಮರೆಮಾಚಿಕೊಂಡು ಜೀವನ ಹೇಗೆ ಎದುರಿಸಬಹುದು ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಚಿತ್ರದಲ್ಲಿ ನಾಯಕನ ಹೆಸರೇ ಕಾಡಾ.

ಇತ್ತೀಚೆಗೆ ನಡೆದ ಟ್ರೈಲರ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ನಿರ್ದೇಶಕ ವಿಶೃತ್ ನಾಯಕ್, ಶೇಕಡಾ 2ರಷ್ಟು ಜನ ಯಾವುದೋ ಕಾರಣಕ್ಕಾಗಿ ಸೈಕೋಗಳಾಗುವುದಿಲ್ಲ. ಹುಟ್ಟುತ್ತಲೇ ಅವರು ಸೈಕೋಪಾತ್‌ಗಳಾಗಿರುತ್ತಾರೆ. ಇದನ್ನೇ ಪ್ರಧಾನವಾಗಿಟ್ಟುಕೊಂಡು ಈ ಚಿತ್ರದ ಕಥಾಹಂದರ ಹೆಣೆದಿದ್ದೇನೆ. ಎರಡು ಕಥೆಯಿಂದ ಶುರುವಾಗುವ ಚಿತ್ರ ಹೋಗ್ತಾ... ಹೋಗ್ತಾ... ಒಂದೇ ಕಡೆ ಸೇರುತ್ತದೆ. ಇದೊಂದು ಸಸ್ಪೆನ್ಸ್, ಥ್ರಿಲ್ಲರ್ ಚಿತ್ರವಾಗಿದ್ದು, ಕಥೆಯ ಓಟಕ್ಕೆ ಧಕ್ಕೆಯಾಗಬಾರದೆಂಬ ಕಾರಣಕ್ಕೆ ಹಾಡುಗಳನ್ನು ಇಟ್ಟಿಲ್ಲ. ಪ್ರೇಕ್ಷಕರಿಗೆ ಏನು ಬೇಕೋ ಅಷ್ಟನ್ನು ಮಾತ್ರ ಹೇಳಿದ್ದೇವೆ ಎಂದರು. ಸ್ಪ್ಲೆಂಡಿಡ್ ಫಿಲಂಸ್ ನಿರ್ಮಾಣದ ಈ ಚಿತ್ರಕ್ಕೆ ನಂದು ಅವರ ಸಂಗೀತ ಸಂಯೋಜನೆ, ಅರುಣ್ ಸುರೇಶ್ ಅವರ ಕ್ಯಾಮರಾ ಕೈಚಳಕವಿದೆ, ಅಚ್ಯುತ್‌ಕುಮಾರ್, ಉಗ್ರಂ ಮಂಜು ಉಳಿದ ಪಾತ್ರಗಳಲ್ಲಿದ್ದಾರೆ.

ಉಕ್ಕಲಗೆರೆಯಲ್ಲಿ ಶ್ರೀಭಕ್ತ ಕನಕದಾಸರ ಪ್ರತಿಮೆ ಅನಾವರಣ

ಮಹನೀಯರ ಆದರ್ಶಗಳನ್ನು ಪಾಲಿಸಿ: ಅರುಣ ಸಿದ್ದೇಶ್ವರ ಸ್ವಾಮೀಜಿ

ತಿ.ನರಸೀಪುರ, ಏ.9– ಮಹನೀಯರ ಮೂರ್ತಿ ಹಾಗೂ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿದರೇ ಸಾಲದು. ಅವರ ಆದರ್ಶಗಳನ್ನು ಪಾಲಿಸಿದಾಗ ಮಾತ್ರ ಬದುಕು ಸುಂದರವಾಗಲು ಸಾಧ್ಯ ಎಂದು ಕಾಗಿನೆಲೆ ಮಹಾಸಂಸ್ಥಾನ ಕೆ.ಆರ್.ನಗರ ಶಾಖಾ ಮಠದ ಕಿರಿಯ ಶ್ರೀಗಳಾದ ಅರುಣ ಸಿದ್ದೇಶ್ವರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಉಕ್ಕಲಗೆರೆ ಗ್ರಾಮದಲ್ಲಿ ಶ್ರೀಭಕ್ತ ಕನಕದಾಸರ ಯುವಕರ ಬಳಗದಿಂದ ನೂತನವಾಗಿ ನಿರ್ಮಿಸಿರುವ ಶ್ರೀಭಕ್ತ ಕನಕದಾಸರ ಪ್ರತಿಮೆ ಅನಾವರಣಗೊಳಿಸಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಂಸ್ಕಾರ ಮರೆಯಾಗುತ್ತಿದೆ. ಮಕ್ಕಳಿಗೋಸ್ಕರ ತಂದೆ–ತಾಯಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಮನೆ, ಆಸ್ತಿ, ಜಮೀನು ಮಾಡುತ್ತಿದ್ದಾರೆ. ಆದರೆ ಅವರಿಗೆ ಸಂಸ್ಕಾರ ಕೊಡುವುದರಲ್ಲಿ ಎಡವುತ್ತಿದ್ದಾರೆ. ಸಂಸ್ಕಾರವಂತರಾಗಿ ಬದುಕುವುದಕ್ಕೋಸ್ಕರ ಸಾತ್ವಿಕರು ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದಾರೆ. ಸಮಾಜಕ್ಕೋಸ್ಕರ ಹಲವು ಬಗೆಯ ಕಷ್ಟಗಳು, ಪೆಟ್ಟುಗಳನ್ನು ತಿಂದಿದ್ದಾರೆ. ಹೀಗಾಗಿ ಯುವಕರು, ಮಕ್ಕಳು ಸಂಸ್ಕಾರ ಕಲಿಯಬೇಕು. ತಂದೆ ತಾಯಿಗೆ ಗೌರವ ಕೊಡಬೇಕು. ಅವರ ಪಾದ ಪೂಜೆ ಮಾಡಬೇಕು. ಹಾಗಾದಾಗ ಮಾತ್ರ ಅವರ ಪರಿಶ್ರಮಕ್ಕೆ ಅರ್ಥ ಸಿಗುತ್ತದೆ ಎಂದರು.

ಪ್ರಸ್ತುತ ಶಾಂತಿ ಮುಖ್ಯ. ಮನುಷ್ಯನಲ್ಲಿ ಶಾಂತಿ ನೆಲೆಸಿದ್ದರೇ ಯಾವುದೇ ಸಾಧನೆ ಬೇಕಾದರೂ ಮಾಡಬಹುದು. ಸಾಧಿಸಲು ಬೇಕಾದಷ್ಟು ರಂಗಗಳಿವೆ. ಶಾಂತಚಿತ್ತದಿಂದಿದ್ದು, ತಮಗೆ ಬೇಕಾದ ರಂಗಗಳನ್ನು ಆಂಯ್ಕೆ ಮಾಡಿಕೊಂಡು ಆರ್ಥಿಕ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಿದೆ. ನಾವು ಪ್ರತಿ ವರ್ಷ ಗ್ರಾಮಕ್ಕೆ ಭೇಟಿ ನೀಡುವ ಉದ್ದೇಶವೆಂದರೆ ನಮ್ಮ ಸಮಾಜದವರು ಒಗ್ಗಟ್ಟಾಗಿದ್ದಾರೆಯೇ, ಅಭಿವೃದ್ಧಿ ಹೊಂದುತ್ತಿದ್ದಾರೆಯೇ, ದ್ವೇಷ ಸಾಧನೆ ಮಾಡುವ ಪರಿಪಾಠವಿದೆಯೇ ಎಂಬುದನ್ನು ತಿಳಿಯುವ ಸಲುವಾಗಿ ಬರುತ್ತೇನೆ. ಯಾವುದೇ ಸಾಧನೆ ಮಾಡಬೇಕಾದರೆ ಒಗ್ಗಟ್ಟು ಬಹು ಮುಖ್ಯ. ದ್ವೇಷದಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ದ್ವೇಷ ಬಿಟ್ಟು ಪ್ರೀತಿಯಿಂದ ನಡೆದರೆ ಯಾವುದೇ ಕೆಲಸ ಕಷ್ಟವಾಗದು ಎಂದರು.



ಭಕ್ತ ಕನಕದಾಸರ ಪ್ರತಿಮೆಯನ್ನು ಅರುಣ ಸಿದ್ದೇಶ್ವರ ಸ್ವಾಮೀಜಿ ಅನಾವರಣಗೊಳಿಸಿದರು.

ಕನಕದಾಸರು ಮಹಾರಾಜರಾಗಿದ್ದು, ಸಿರಿ, ಸಂಪತ್ತು ಎಲ್ಲವನ್ನು ತ್ಯಾಗಮಾಡಿ ಸಮಾಜ ಸುಧಾರಣೆಗಾಗಿ ಶ್ರಮಿಸಿದ್ದಾರೆ. ವಿಶೇಷವಾಗಿ ಕೋಪವನ್ನು ಬಿಟ್ಟು, ನಗುಮುಖದೊಂದಿಗೆ ಎಲ್ಲರ ಮನಸ್ಸನ್ನು ಗೆದ್ದರು. ಜನಸಾಮಾನ್ಯರಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಲು ದಾಸ ಸಾಹಿತ್ಯ, ಭಕ್ತಿ ಪಂಥದ ಮೂಲಕ ಮನುಕುಲಕ್ಕೆ ಅತ್ಯುತ್ತಮ ಸಂದೇಶವನ್ನು ಕನಕದಾಸರು ಕೊಟ್ಟಿದ್ದಾರೆ. ಮಾನವನ ಒಳಿತಿಗಾಗಿ ಅವರ ಕೊಡುಗೆಯನ್ನು ಎಲ್ಲರೂ ಸ್ಮರಿಸಬೇಕು ಎಂದರು.

ಕನಕ ಭವನಕ್ಕೆ 53 ಲಕ್ಷ ಅನುದಾನ: ಕಿಯೋನಿಕ್ಸ್ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ ಮಾತನಾಡಿ, ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಕನಕ ಭವನ ನಿರ್ಮಾಣಕ್ಕೆ ಈವರೆಗೆ 53 ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ. 2016–17ನೇ ಸಾಲಿನಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಹೆಚ್.ಸಿ.ಮಹದೇವಪ್ಪ ಲೋಕೋಪಯೋಗಿ ಸಚಿವರಾಗಿದ್ದ ವೇಳೆ ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಅಭಿವೃದ್ಧಿಗೆ ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದರು. ಆ ಪೈಕಿ 15 ಲಕ್ಷ ರೂ.ಗಳನ್ನು ಹೊಸ ಬಡಾವಣೆ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಹಾಗೂ 23ಲಕ್ಷ ರೂ.ಗಳನ್ನು ಕನಕ ಭವನ ನಿರ್ಮಿಸಲು ಬಳಸಲಾಗಿತ್ತು. ಅಲ್ಲದೇ ಮಹದೇವಪ್ಪ ಕೂಡ ಹಿಂದುಳಿದ ವರ್ಗದಿಂದ 10 ಲಕ್ಷ ಬಿಡುಗಡೆ ಮಾಡಿದ್ದರು. ಈಗ ಮತ್ತೆ ಮುಂದುವರೆದ ಕಾಮಗಾರಿಗಾಗಿ 20 ಲಕ್ಷ ಬಿಡುಗಡೆಯಾಗಿದ್ದು, ಕಾಮಗಾರಿ ಬಿರುಸು ಪಡೆಯಲಿದೆ ಎಂದರು.

ಎಲ್ಲಾ ಸಮಾಜದವರೂ ಬೇಕು: ಒಂದು ಊರಿನಲ್ಲಿದ್ದಾಗ ಒಂದೇ ಸಮಾಜ ಏನನ್ನೂ ಮಾಡಲು ಸಾಧ್ಯವಿಲ್ಲ. ಎಲ್ಲಾ ಸಮಾಜದವರ ಬೆಂಬಲ ಬೇಕಾಗುತ್ತದೆ. ಎರಡೂ ಕೈ ಸೇರಿದರೆ ಚಪ್ಪಾಳೆ ಎನ್ನುವಂತೆ ಗ್ರಾಮದಲ್ಲಿ ಎಲ್ಲರೊಂದಿಗೂ ಸಹಬಾಳ್ವೆಯಿಂದ ಇರಬೇಕಾಗುತ್ತದೆ. ನಮಗೆ ಅವರು, ಅವರಿಗೆ ನಾವು ನೆರವಾಗಬೇಕು. ಅದನ್ನು ಬಿಟ್ಟು ಜೊತೆಯಲ್ಲಿದ್ದುಕೊಂಡೇ ದ್ವೇಷ ಸಾಧನೆ ಮಾಡಬಾರದು ಎಂದು ಯುವಕರಿಗೆ ಕಿವಿಮಾತು ಹೇಳಿದ ಅವರು ಕನಕದಾಸರ ಬದುಕು ಹಾಗೂ ತತ್ವಗಳು ಅಪಾರವಾಗಿವೆ. ಎಲ್ಲಾ ಮಹನೀಯರು, ಸಂತರು, ಶರಣರು ಸಮಾಜದ ಒಳಿತಿಗಾಗಿಯೇ ತಮ್ಮ ಸಂದೇಶಗಳನ್ನು ನೀಡಿರುವುದರಿಂದ ಎಲ್ಲಾ ಮಹನೀಯರ ಆದರ್ಶಗಳ ಪಾಲನೆ ಆಗಬೇಕಿದೆ ಎಂದರು.

ಈ ವೇಳೆ ಶ್ರೀನಿವಾಸ್, ಶಿವಸ್ವಾಮಿ, ಸಿದ್ದರಾಮು, ಶಿವು, ರಾಜು, ಕಿರಣ್, ರವಿ, ಶಿವಣ್ಣ, ಸಿದ್ದರಾಮ, ಶಿವಸ್ವಾಮಿ, ಮಹದೇವ್, ಮೊಳ್ಳಪ್ಪ, ಚಂದ್ರು, ಸಿದ್ದೇಶ, ಬಸವರಾಜು, ನಾಗರಾಜು, ಕುಳ್ಳ, ಮರಿಸ್ವಾಮಿ, ಚೌಹಳ್ಳಿ ಮಲ್ಲೇಶ್, ಮುದ್ದಬೀರನ ಹುಂಡಿ ಗುರುಸ್ವಾಮಿ ಮತ್ತಿತರರಿದ್ದರು.

ರೋಟರಿಯಿಂದ ನಿರಂತರ ಸಾಮಾಜಿಕ ಸೇವೆ



ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಲಾಯಿತು.

ಬನ್ನೂರು, ಏ.9– ಇಲ್ಲಿನ ರೋಟರಿ ಸಂಸ್ಥೆ ಸಾರ್ವಜನಿಕ ಸೇವೆಯಲ್ಲಿ ನಿರಂತರವಾಗಿ ತನ್ನನ್ನು ತೊಡಗಿಸಿಕೊಂಡಿರುವುದು ಸಂತಸದ ವಿಚಾರವಾಗಿದ್ದು, ಮುಂದಿನ ದಿನದಲ್ಲಿ ಮತ್ತಷ್ಟು ಸೇವಾ ಕಾರ್ಯ ಕೈಗೊಳ್ಳುವಂತೆ ರೋಟರಿ ಜಿಲ್ಲಾ ಗವರ್ನರ್ ಪಿ.ಕೆ.ರಾಮಕೃಷ್ಣ ತಿಳಿಸಿದರು.

ಪಟ್ಟಣದ ಬಸ್ ನಿಲ್ದಾಣ ಬಳಿಯ ರೋಟರಿ ಸಂಸ್ಥೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಸಲಹೆ ಸೂಚನೆಗಳನ್ನು ನೀಡಿ ಅವರು ಮಾತನಾಡಿದರು.

ರೋಟರಿ ಅಧ್ಯಕ್ಷ ಡಾ.ರಾಜೀವ್ ಮಾತನಾಡಿ, ರೋಟರಿ ಸದಸ್ಯರ ಸಹಕಾರದಿಂದ ಹಲವು ಸೇವಾ ಕಾರ್ಯಗಳನ್ನು ಕೈಗೊಳ್ಳಲಾಗಿದ್ದು, ಮಹಿಳೆಯರ ಅನುಕೂಲಕ್ಕಾಗಿ ಹೊಲಿಗೆ ಯಂತ್ರ ವಿತರಣೆ, ಚಾಮನಹಳ್ಳಿ ಸರ್ಕಾರಿ ಶಾಲೆ ಅಭಿವೃದ್ಧಿಗೆ 46 ಸಾವಿರ ರೂ. ಸಹಾಯಧನ, ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿಗೆ 50 ಕುರ್ಚಿ, ಚಾಮನಹಳ್ಳಿ ಅಂಗನವಾಡಿ ಕೇಂದ್ರಕ್ಕೆ ಫ್ಯಾನ್, ಬನ್ನೂರು ಅಂಗನವಾಡಿ ಕೇಂದ್ರಕ್ಕೆ ಕುರ್ಚಿಗಳನ್ನು ವಿತರಣೆ ಮಾಡಲಾಗಿದೆ ಎಂದರು.

ಇದೇ ವೇಳೆ ಜಿಲ್ಲಾ ಗರ್ವನರ್ ಪಿ.ಕೆ.ರಾಮಕೃಷ್ಣ, ವಲಯ ಪ್ರತಿನಿಧಿ ಕೆಂಪೇಗೌಡರನ್ನು ಸನ್ಮಾನಿಸಲಾಯಿತು. ಕಾರ್ಯದರ್ಶಿ ರಾಜೇಶ್‌ಗೌಡ ಹಲವರಿದ್ದರು.

ಸಂತ ನೋರ್ಬರ್ಟ್ ಕಾಲೇಜಿಗೆ ಉತ್ತಮ ಫಲಿತಾಂಶ





ತಿ.ನರಸೀಪುರ, ಏ.9– ತಾಲೂಕಿನ ಚೌಹಳ್ಳಿ ಗ್ರಾಮ ವ್ಯಾಪ್ತಿಯ ಸಂತ ನೋರ್ಬರ್ಟ್ ಕಾಲೇಜಿಗೆ ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ.

ವಿಜ್ಞಾನ ವಿಭಾಗದಲ್ಲಿ ಶೇ.100, ವಾಣಿಜ್ಯ ವಿಭಾಗ ಶೇ.98.3 ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದ 73 ವಿದ್ಯಾರ್ಥಿಗಳಲ್ಲಿ 40 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 33 ವಿದ್ಯಾರ್ಥಿಗಳು ಪ್ರಥಮ, ವಾಣಿಜ್ಯ ವಿಭಾಗದಲ್ಲಿ 26 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 21 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕನ್ನಡದಲ್ಲಿ 15 ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದಿದ್ದಾರೆ. ಕಾಲೇಜಿನ ವ್ಯವಸ್ಥಾಪಕ ಫಾದರ್ ಬೆನ್ನಿ ಥಾಮಸ್, ಖಜಾಂಚಿ ಫಾದರ್ ರೆನಿನ್ ಸೆಬಾಸ್ಟಿಯನ್, ಪ್ರಾಂಶುಪಾಲ ಲಿಶಾ ಫರ್ಜಾನ್ ಮತ್ತು ಉಪನ್ಯಾಸಕ ವೃಂದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಪ್ರತಿಭೆ ಅನಾವರಣಕ್ಕೆ ಬೇಸಿಗೆ ಶಿಬಿರ ಉಪಯುಕ್ತ



ತಿ.ನರಸೀಪುರದಲ್ಲಿ ಬೇಸಿಗೆ ಡ್ಯಾನ್ಸ್ ಶಿಬಿರ ಉದ್ಘಾಟಿಸಲಾಯಿತು.

ತಿ.ನರಸೀಪುರ, ಏ.9– ಮಕ್ಕಳು ಶೈಕ್ಷಣಿಕ ಚಟುವಟಿಕೆ ಹೊರತುಪಡಿಸಿ ತಮ್ಮ ಪ್ರತಿಭೆ ಅನಾವರಣಗೊಳಿಸಲು ಬೇಸಿಗೆ ಶಿಬಿರ ಉಪಯುಕ್ತವಾಗಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್ ತಿಳಿಸಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣ ಬಳಿಯ ರಘುನಂದನ್ ಅವರ ಮೆಗಾ ಸ್ಟಾರ್ ಡಾನ್ಸ್ ತರಗತಿಯಲ್ಲಿ ಗುರುವಾರ ಬೇಸಿಗೆ ಡ್ಯಾನ್ಸ್ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ರಜಾ ದಿನಗಳಲ್ಲಿ ಮಕ್ಕಳು ಸಮಯ ಸದುಪಯೋಗಪಡಿಸಿಕೊಳ್ಳಲು ಇದೊಂದು ಉತ್ತಮ ಅವಕಾಶ. ಪ್ರತಿಭೆ ಗುರುತಿಸಲು ಹಾಗೂ ಪ್ರೋತ್ಸಾಹಿಸಲು ಇಂತಹ ವೇದಿಕೆಗಳನ್ನು ವಿದ್ಯಾರ್ಥಿಗಳು ಬಳಸಿಕೊಳ್ಳಬೇಕು. ಡಾನ್ಸ್ ಮಾಸ್ಟರ್ ರಘುನಂದನ್ ಅನೇಕ ವರ್ಷಗಳಿಂದ ಬೇಸಿಗೆ ಶಿಬಿರ ಆಯೋಜಿಸಿ ಮಕ್ಕಳನ್ನು ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದರು.

ಮೆಗಾಸ್ಟಾರ್ ಡ್ಯಾನ್ಸ್ ಮಾಸ್ಟರ್ ಎನ್.ರಘುನಂದನ್ ಮಾತನಾಡಿ, ನೃತ್ಯ ಕೇವಲ ಮನರಂಜನೆ ಮಾತ್ರವಲ್ಲ. ಅದು ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಒಂದು ಸುಂದರ ಕಲೆ. ಶಿಬಿರದ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ, ಶಿಸ್ತು ಮತ್ತು ಸೃಜನಶೀಲತೆ ಬೆಳೆಸುವ ಉದ್ದೇಶ ಹೊಂದಿದ್ದೇವೆ ಎಂದರು.

ಹಿರಿಯ ಪತ್ರಕರ್ತ ಎಂ.ಮಹದೇವ್, ಅರುಂಧತಿ ನೌಕರರ ಸಂಘದ ಕೆಂಚಪ್ಪ ಮಾತನಾಡಿದರು. ಸಭೆಯಲ್ಲಿ ವೀರಶೈವ ಮಹಾಸಭಾ ನಿರ್ದೇಶಕ ಕಾವೇರಿಪುರ ಮಲ್ಲು, ತೊಂಟೇಶ್, ಲತಾ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಚಿರತೆ ಪ್ರತ್ಯಕ್ಷ: ಗ್ರಾಮಸ್ಥರಲ್ಲಿ ಆತಂಕ

ಮಲ್ಕುಂಡಿ, ಏ.9– ಇಲ್ಲಿನ ದೇವರಾಯಶೆಟ್ಟಿಪುರದಿಂದ ಹುರ ಗ್ರಾಮಕ್ಕೆ ತೆರಳುವ ಮುಖ್ಯರಸ್ತೆಯಲ್ಲಿ ಬುಧವಾರ ರಾತ್ರಿ ಚಿರತೆ ಪ್ರತ್ಯಕ್ಷಗೊಂಡಿದೆ. ಗ್ರಾಮದ ಯುವಕನೋರ್ವ ಈ ರಸ್ತೆಯಲ್ಲಿ ತೆರಳುತ್ತಿದ್ದಾಗ ಚಿರತೆ ಪ್ರತ್ಯಕ್ಷಗೊಂಡಿದ್ದು, ಚಿರತೆ ಫೋಟೋವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ ಎನ್ನಲಾಗಿದೆ.

ರೈತ ಮುಖಂಡ ಕೆಂಪಣ್ಣ ಮಾತನಾಡಿ, ಈ ಭಾಗದಲ್ಲಿ ಚಿರತೆ ಪ್ರತ್ಯಕ್ಷಗೊಂಡಿರುವುದರಿಂದ ಮಲ್ಕುಂಡಿ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ತಮ್ಮ ಜಮೀನುಗಳಿಗೆ ತೆರಳಲು ಭಯಗೊಂಡಿದ್ದಾರೆ. ಅಲ್ಲದೇ ಜಾನುವಾರುಗಳನ್ನು ಮೇಯಿಸಲು ಹೆದರುವಂತಾಗಿದೆ. ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ಕೈಗೊಂಡು ಬೋನಿಟ್ಟು ಚಿರತೆ ಸೆರೆ ಹಿಡಿಯಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಶಾಲೆಗೆ ಕುಡಿಯುವ ನೀರಿನ ಘಟಕ ಕೊಡುಗೆ

ಸರಗೂರು, ಏ.9– ತಾಲೂಕಿನ ಹಳೆಯ ಹೆಗ್ಗೋಡಿಲು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಉದ್ಯಮಿ, ಶ್ರೀಗಂಧ ಲಯನ್ಸ್ ಕ್ಲಬ್ ಅಧ್ಯಕ್ಷ ಎನ್.ನಿಂಗರಾಜು ಶುದ್ಧ ಕುಡಿಯುವ ನೀರಿನ ಘಟಕ ಕೊಡುಗೆ ನೀಡಿದರು.

ನಂತರ ಮಾತನಾಡಿದ ಅವರು, ಸರ್ಕಾರಿ ಶಾಲೆಗೆ ಹೆಚ್ಚಾಗಿ ಗ್ರಾಮೀಣ ಭಾಗದ ಬಡ ಕುಟುಂಬದ ಮಕ್ಕಳು ಆಗಮಿಸುತ್ತಾರೆ. ಹೀಗಾಗಿ ಅವರ ಆರೋಗ್ಯದ ಹಿತದೃಷ್ಟಿಯಿಂದ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಲೆಗೆ ನೀಡಲಾಗಿದೆ. ವಿದ್ಯಾರ್ಥಿಗಳಲ್ಲಿ ಶಿಸ್ತು, ಸ್ವಚ್ಛತೆ ಮುಖ್ಯ. ಹೀಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಶಿಸ್ತನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದ ಅವರು, ಅನೇಕ ರೋಗಗಳಿಗೆ ಕಲುಷಿತ ನೀರು ಸೇವನೆ ಕಾರಣ. ಹೀಗಾಗಿ ಶುದ್ಧ ಕುಡಿಯುವ ನೀರನ್ನು ಕುಡಿಯುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ಮುಂಬರುವ ದಿನಗಳಲ್ಲೂ ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಮುಂದಾಗುತ್ತೇನೆ ಎಂದರು.



ಕುಡಿಯುವ ನೀರಿನ ಘಟಕವನ್ನು ಉದ್ಯಮಿ ನಿಂಗರಾಜು ಉದ್ಘಾಟಿಸಿದರು.

ಶಿಕ್ಷಕಿ ಜಗದಾಂಬ ಮಾತನಾಡಿದರು. ವಲಯ ಅಧ್ಯಕ್ಷೆ ಜ್ಯೋತಿ, ಕಾರ್ಯದರ್ಶಿ ಮಂಜುನಾಥ್, ಸದಸ್ಯರಾದ ಭಾಗ್ಯಲಕ್ಷ್ಮಿ, ಬೆಟ್ಟ ನಾಯಕ, ಚಂದ್ರು, ಮುಖ್ಯ ಶಿಕ್ಷಕ ಮುಕುಂದ, ಗ್ರಾಮಸ್ಥರು ಇತರರಿದ್ದರು.

ಡಿಟಿಎಂಎನ್ ಕಾಲೇಜಲ್ಲಿ ಶೇ.100ರಷ್ಟು ತೇರ್ಗಡೆ





ಬೆಟ್ಟದಪುರ, ಏ.9– ಇಲ್ಲಿನ ಡಿಟಿಎಂಎನ್ ಪದವಿ ಪೂರ್ವ ಕಾಲೇಜು 2025–26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ.

ಪರೀಕ್ಷೆ ತೆಗೆದುಕೊಂಡಿದ್ದ ಎಲ್ಲಾ 153 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಈ ಪೈಕಿ 75 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, 77 ವಿದ್ಯಾರ್ಥಿಗಳು ಪ್ರಥಮ, ಓರ್ವ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಲಕ್ಷ್ಮಿ ಎಂ.ಹೆಚ್ 581(96.8%) ಅಂಕ ಪಡೆದು ಕಾಲೇಜಿಗೆ ಪ್ರಥಮ, ಲಿಕೃತಿ ಎಸ್.ವಿ ಮತ್ತು ಶ್ರೀನಿವಾಸ 568(94.66)ಅಂಕ ಪಡೆದು ದ್ವಿತೀಯ ಸ್ಥಾನ, ಮೋಕ್ಷಿತ ಮತ್ತು ಪರೀಕ್ಷಿತ್ 566(94.03%) ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಚೈತ್ರಾ ಕೆ.ಸಿ.583(97.16%) ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮ, ಕಾವ್ಯ ಕೆ.ಎಂ 582(97%) ದ್ವಿತೀಯ ಸ್ಥಾನ, ಎಂ.ರಚನಾ ಗೌಡ 581(96.08%) ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆಯುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಎಲ್ಲಾ ವಿದ್ಯಾರ್ಥಿಗಳನ್ನು ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕರು, ಬೋಧಕ/ಬೋಧಕೇತರ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ಅತ್ಯುತ್ತಮ ಶ್ರೇಣಿ



ಬೆಟ್ಟದಪುರ, ಏ.9– ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಬೆಟ್ಟದಪುರದ ಡಿಟಿಎಂಎನ್ ಕಾಲೇಜು ವಿದ್ಯಾರ್ಥಿ ಬೆಟ್ಟದಪುರದ ಕೃಷಿ ಪತ್ತಿನ ಸಹಕಾರ ಸಂಘದ ಸಿಇಓ ವಿಜಯ್ ಪವಿತ್ರ ದಂಪತಿ ಪುತ್ರ ಬಿ.ವಿ.ನಂದೀಶ್ 600ಕ್ಕೆ 564 ಅಂಕ ಪಡೆದು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಸರಗೂರು ಜೆಎಸ್‌ಎಸ್ ಬಾಲಕಿಯರ ಕಾಲೇಜಿಗೆ ಶೇ.96.80ರಷ್ಟು ಫಲಿತಾಂಶ





ಸರಗೂರು, ಏ.9– ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪಟ್ಟಣದ ಜೆಎಸ್‌ಎಸ್ ಬಾಲಕಿಯರ ಪದವಿಪೂರ್ವ ಕಾಲೇಜಿಗೆ ಶೇ.96.80ರಷ್ಟು ಫಲಿತಾಂಶ ದೊರೆತಿದೆ.

ಕಾಲೇಜಿನ ವಿಜ್ಞಾನ, ಕಲಾ ಹಾಗೂ ವಾಣಿಜ್ಯ ವಿಭಾಗಗಳಿಂದ ಒಟ್ಟು 126 ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಿದ್ದರು. ಈ ಪೈಕಿ 122 ಮಂದಿ ತೇರ್ಗಡೆಯಾಗಿದ್ದು, 22 ಅತ್ಯುನ್ನತ, 82 ಪ್ರಥಮ, 17 ಮಂದಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಕಲಾ ವಿಭಾಗದಲ್ಲಿ 48 ವಿದ್ಯಾರ್ಥಿನಿಯರ ಪೈಕಿ 45 ಮಂದಿ ತೇರ್ಗಡೆಯಾಗಿದ್ದು, ಶೇ.93.75 ರಷ್ಟು ಫಲಿತಾಂಶ ಬಂದಿದೆ. ಹೊಸ ಹೆಗ್ಗೂಡಿಲು ಪಲ್ಲವಿ 600ಕ್ಕೆ 590 ಅಂಕ ಪಡೆದಿದ್ದಾಳೆ. ವಾಣಿಜ್ಯ ವಿಭಾಗದಲ್ಲಿ 39 ವಿದ್ಯಾರ್ಥಿನಿಯರು ತೇರ್ಗಡೆಯಾಗಿದ್ದು, ಶೇ.100 ರಷ್ಟು ಫಲಿತಾಂಶ ಬಂದಿದೆ. ಕಾಳಮ್ಮ 600ಕ್ಕೆ 575 ಅಂಕ ಪಡೆದಿದ್ದಾಳೆ. ಕಲಾ ವಿಭಾಗದಲ್ಲಿ 39 ವಿದ್ಯಾರ್ಥಿನಿಯರ ಪೈಕಿ 38 ಮಂದಿ ತೇರ್ಗಡೆಯಾಗಿದ್ದು, ಶೇ.95.50 ರಷ್ಟು ಫಲಿತಾಂಶ ಬಂದಿದೆ. ಸಿದ್ದಾಪುರದ ದಿವ್ಯಶ್ರೀ 600ಕ್ಕೆ 564 ಅಂಕ ಪಡೆದಿದ್ದಾಳೆ.

ರೈತರಿಂದ ಸುಂಕ ವಸೂಲಿ ಮಾಡುವಂತಿಲ್ಲ: ಪಿಡಿಓ

ಬೆಟ್ಟದಪುರ, ಏ.9– ಗ್ರಾಮದ ಎಪಿಎಂಸಿಯಲ್ಲಿ ವ್ಯಾಪಾರ ಮಾಡುವ ರೈತರಿಂದ ಯಾವುದೇ ಸುಂಕ ವಸೂಲಿ ಮಾಡುವಂತಿಲ್ಲ ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹೆಚ್.ಡಿ.ಮಂಜುನಾಥ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಪಂ ಆವರಣದಲ್ಲಿ ಸಂತೆ ಮತ್ತು ದಿನವಹಿ ನೆಲ ಸುಂಕದ ಹರಾಜು, ಆಡು, ಕುರಿ ಹಾಗೂ ಕೋಳಿ ಮಾಂಸದ ಮಾರಾಟದ ಅಂಗಡಿ ಬಹಿರಂಗ ಹರಾಜಿನಲ್ಲಿ ಮಾತನಾಡಿದ ಅವರು, ಗ್ರಾಪಂ ನಿಗದಿಪಡಿಸಿದ ದರದಲ್ಲೇ ಬಿಡ್‌ದಾರರು ಸರ್ವೆ ನಂ.1 ಮತ್ತು 2ರ ಮೈದಾನದಲ್ಲಿ ಸಂತೆ ಸುಂಕ ವಸಲಿ ಮಾಡಬೇಕು. ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ತಿರುವಿನ ರಸ್ತೆಯಲ್ಲಿ ಕೆಲವು ವ್ಯಾಪಾರಿಗಳು ವಾಹನ ನಿಲ್ಲಿಸಿಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ವಾಹನಗಳು, ಸಾರ್ವಜನಿಕರು ಸಂಚರಿಸಲು ತೊಂದರೆಯಾಗುತ್ತಿದ್ದು, ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಅಂತಹ ವ್ಯಾಪಾರಿಗಳು ಸಂತೆ ಮೈದಾನದಲ್ಲಿ ಬದಲಿ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು.

ಈ ಗ್ರಾಪಂಗೆ ಕರ್ತವ್ಯಕ್ಕೆ ಹಾಜರಾಗಿ 2.3 ವರ್ಷ ಆಗಿದೆ. ನನ್ನ ಅವಧಿಯಲ್ಲಿ ಪ್ರಾಮಾಣಿಕವಾಗಿ ಸಂತೆ ಹರಾಜಿನಿಂದ ಬಂದ ಹಣದಿಂದ ಸಾಂತ್ವೀರಮ್ಮ ದೇವಾಲಯದ ಎದುರು ಡಕ್ ನಿರ್ಮಿಸಲಾಗಿದೆ. ದೇವಾಲಯದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಪ್ಲಾಂಟ್ ನಿರ್ಮಿಸಲಾಗಿದೆ. ಸೋಲಾರ್ ಲೈಟ್ ಅಳವಡಿಸಲಾಗಿದೆ. ಶೌಚಾಲಯದ ಕಾಮಗಾರಿ ಪ್ರಗತಿಯಲ್ಲಿದೆ. ಸಂತೆ ಆವರಣದಲ್ಲಿ ಕೆಲವು ಕಿಡಿಗೇಡಿಗಳು ರಾತ್ರಿ ಸಮಯದಲ್ಲಿ ಮದ್ಯಪಾನ ಮಾಡಿ ಬಾಟಲ್‌ಗಳನ್ನು ಹಾಕಿ ಅಶುಚಿತ್ವಗೊಳಿಸುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದು, ಸ್ವಚ್ಛತೆ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗುವುದು. ಕೋಳಿ ಮತ್ತು ಮಾಂಸ ಮಾರಾಟ ಬಿಡ್‌ದಾರರು ಮಳಿಗೆ ಹಾಗೂ ಸುತ್ತಮುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಸಾರ್ವಜನಿಕರಿಗೆ ಶುದ್ಧ ಗುಣಮಟ್ಟದ ಮಾಂಸ ಮಾರಾಟ ಮಾಡಬೇಕು ಎಂದರು.



ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹೆಚ್.ಡಿ.ಮಂಜುನಾಥ್ ಮಾತನಾಡಿದರು.

ಇದೇ ವೇಳೆ ಹರಾಜಿನಲ್ಲಿ ಸುಂಕ ವಸೂಲಿ ಹಕ್ಕನ್ನು 3.11ಕ್ಕೆ ಪಾಪಣ್ಣ ಎಂಬುವರು ಪಡೆದರೇ, ಕೋಳಿ ಮತ್ತು ಮಾಂಸದ ಅಂಗಡಿ ಬಹಿರಂಗ ಮಾರಾಟ ಹರಾಜು ಹಕ್ಕನ್ನು 17.72 ಲಕ್ಷಕ್ಕೆ ಬಿಡ್‌ದಾರರು ಪಡೆದುಕೊಂಡರು.

ಈ ವೇಳೆ ಗ್ರಾಪಂ ಆಡಳಿತಾಧಿಕಾರಿ ರವಿ ಪ್ರಸನ್ನ, ಕಾರ್ಯದರ್ಶಿ ಎ.ಪಿ.ಪಾಂಡು, ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಶ್ರೀನಿಧಿ ಕೆ.ಎಲ್, ಡಾಟಾ ಆಪರೇಟರ್ ದೀಪು, ಬಿಡ್‌ದಾರು ಹಾಗೂ ಸಾರ್ವಜನಿಕರು ಹಾಜರಿದ್ದರು.

ಕೆ.ಆರ್.ನಗರಕ್ಕೆ ಆಲ್ಫಾ ಪಿಯು ಕಾಲೇಜು ಪ್ರಥಮ



ಗೌತಮಿ ಬಿ.ಎಸ್



ಲೋಹಿತ್. ಆರ್

ಕೆ.ಆರ್.ನಗರ, ಏ.9– ಪಟ್ಟಣದ ಪ್ರತಿಷ್ಠಿತ ಆಲ್ಫಾ ಪಿಯು ಕಾಲೇಜು 2025–26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ, ವಾಣಿಜ್ಯ ವಿಭಾಗಗಳಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಮುಡಿಗೇರಿಸಿಕೊಂಡಿದೆ.

ವಿಜ್ಞಾನ ವಿಭಾಗದಲ್ಲಿ ಲೋಹಿತ್. ಆರ್ 585 ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದರೇ, ವಾಣಿಜ್ಯ ವಿಭಾಗದಲ್ಲಿ ಗೌತಮಿ ಬಿ.ಎಸ್ 590 ಅಂಕಗಳನ್ನು ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ. ಈ ಇಬ್ಬರು ವಿದ್ಯಾರ್ಥಿಗಳನ್ನು ಸಂಸ್ಥೆ ಕಾರ್ಯದರ್ಶಿ ವೈ.ಎಸ್. ಸುಬ್ರಮಣ್ಯ ಅಭಿನಂದಿಸಿದರು.

ವಿಜ್ಞಾನ ವಿಭಾಗದಲ್ಲಿ 70 ವಿದ್ಯಾರ್ಥಿಗಳು ಅತ್ಯುನ್ನತ, 84 ವಿದ್ಯಾರ್ಥಿಗಳು ಉನ್ನತ ಶ್ರೇಣಿ, ವಾಣಿಜ್ಯ ವಿಭಾಗದಲ್ಲಿ 09 ವಿದ್ಯಾರ್ಥಿಗಳು ಅತ್ಯುನ್ನತ, 23 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ.

ಗಣಿತದಲ್ಲಿ 07, ಕನ್ನಡದಲ್ಲಿ 06, ಗಣಕ ವಿಜ್ಞಾನದಲ್ಲಿ ಓರ್ವ, ಅರ್ಥಶಾಸ್ತ್ರದಲ್ಲಿ 3, ವ್ಯವಹಾರ ಅಧ್ಯಯನದಲ್ಲಿ 1, ಲೆಕ್ಕಶಾಸ್ತ್ರದಲ್ಲಿ 02 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕಗಳನ್ನು ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಹೇಮಶ್ರೀ–574, ಮಹಮದಿ ರೇನಾ ಮಿರ್ಜಾ–574, ಶಾದಾಬ್ 576, ರಿತೀಷ 570 ಅಂಕಗಳು ಹಾಗೆಯೇ ವಾಣಿಜ್ಯ ವಿಭಾಗದಲ್ಲಿ ಪ್ರಜ್ವಲ್‌ಗೌಡ–582, ದರ್ಶನ್.ಕೆ–580, ಪೂಜಾ ಸರ್ವಿ–568 ಅಂಕಗಳನ್ನು ಪಡೆದು ಆಲ್ಫಾ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಉತ್ತಮ ಅಂಕ ಪಡೆದು ವಿದ್ಯಾರ್ಥಿಗಳನ್ನು ಸಂಸ್ಥೆ ಕಾರ್ಯದರ್ಶಿ ವೈ.ಎಸ್.ಸುಬ್ರಹ್ಮಣ್ಯ, ಸಂಸ್ಥೆ ಅಧ್ಯಕ್ಷ ರವಿಕುಮಾರ್ ಪ್ರಾಂಶುಪಾಲ ನವೀನ ಹಾಗೂ ಎಲ್ಲಾ ವಿಭಾಗದ ಉಪನ್ಯಾಸಕರು, ಬೋಧಕೇತರ ವರ್ಗದವರು ಅಭಿನಂದಿಸಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಕಂಪಲಾಪುರ, ಏ.9– ಪಿರಿಯಾಪಟ್ಟಣ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಎಸ್.ಶ್ರಾವಣಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 525 ಅಂಕಗಳನ್ನು ಪಡೆಯುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ಕಂಪಲಾಪುರದ 'ಮೈಸೂರು ಮಿತ್ರ' ಪತ್ರಿಕೆ ವರದಿಗಾರ ಸದಾಶಿವ ಅವರ ಪುತ್ರಿ.

ಯುನಿಟಿ ಪಿಯು ಕಾಲೇಜಿನ ವಿದ್ಯಾರ್ಥಿಗಳ ಸಾಧನೆ







ನಂಜನಗೂಡು, ಏ.9– ಗುರುವಾರ ಪ್ರಕಟವಾದ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ನಂಜನಗೂಡಿನ ಯುನಿಟಿ ಪಿಯು ಕಾಲೇಜಿನ ವಿದ್ಯಾರ್ಥಿಗಳು ಅದ್ವಿತೀಯ ಸಾಧನೆ ಮಾಡುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ವಿಜ್ಞಾನ ವಿಭಾಗದ ಬಿ.ಪವನ್ ಕುಮಾರ್ 600ಕ್ಕೆ 588 ಅಂಕ ಪಡೆಯುವ ಮೂಲಕ ತಾಲೂಕಿಗೆ ಪ್ರಥಮ, ಎಂ.ಎಸ್.ಆರ್ಯಶ್ರೀ 585 ಅಂಕದೊಂದಿಗೆ ದ್ವಿತೀಯ, ಎನ್.ಎಸ್.ಶಾಲಿನಿ 583 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ಅಲ್ಲದೇ ವಾಣಿಜ್ಯ ವಿಭಾಗದಲ್ಲಿ ಕೆ.ವಿ.ಸಿದ್ದಾರ್ಥ 589 ಕಾಲೇಜಿಗೆ ಪ್ರಥಮ, ಆರ್.ಶ್ರಾವ್ಯ ಪೂಜಾರಿ 582 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ.

ಕಾಲೇಜಿನ ಒಟ್ಟು 250 ವಿದ್ಯಾರ್ಥಿಗಳ ಪೈಕಿ 78 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, 142 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಆಡಳಿತ ಮಂಡಳಿ ಅಧ್ಯಕ್ಷ ಹಾಜಿರಾ ಸಯ್ಯದ್, ಕಾರ್ಯದರ್ಶಿ ಸೈಯ್ಯದ್, ಪ್ರಾಚಾರ್ಯರಾದ ಅನಿತಾ ಕೆ.ಜಿ., ಕೌನ್ಸಿಲ್ ಕಾರ್ಯದರ್ಶಿ ಇ.ಕೆ. ರಾಮಮೋಹನ ಅಭಿನಂದಿಸಿದ್ದಾರೆ.

ಕುಶಲ ವಿನಯ್ ಕುಮಾರ್‌ಗೆ ಅತ್ಯುನ್ನತ ದರ್ಜೆ

ನಂಜನಗೂಡು, ಏ.9– ನಂಜನಗೂಡಿನ ಆರ್.ಪಿ.ರಸ್ತೆ ನಿವಾಸಿ ವಿದ್ಯಾರ್ಥಿನಿ ಕುಶಲ ವಿನಯ್ ಕುಮಾರ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 573 ಅಂಕ ಗಳಿಸುವ ಮೂಲಕ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಮೈಸೂರು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ವಿ.ವಿನಯ್ ಕುಮಾರ್ ಅವರ ಪುತ್ರಿ. ಮೈಸೂರಿನ ವಿಜಯ ವಿಠಲ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಈಕೆ ಭೌತಶಾಸ್ತ್ರ 99, ಗಣಿತ 97, ರಸಾಯನಶಾಸ್ತ್ರ 90, ಕಂಪ್ಯೂಟರ್ ಸೈನ್ಸ್ 94, ಇಂಗ್ಲಿಷ್ 95, ಕನ್ನಡದಲ್ಲಿ 98 ಅಂಕ ಗಳಿಸುವ ಮೂಲಕ ಶೇ.96 ರಷ್ಟು ಫಲಿತಾಂಶ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿನಿ ಸಾಧನೆಗೆ ಕಾಲೇಜಿನ ಪ್ರಾಂಶುಪಾಲರು ಮತ್ತು ಪ್ರಾಧ್ಯಾಪಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.



ಯೋಗೇಶ್‌ಕುಮಾರ್ ತಾಲೂಕಿಗೆ ಪ್ರಥಮ





ಹುಣಸೂರು, ಏ.9– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಶಾಸ್ತ್ರಿ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ಶಾಸ್ತ್ರ ವಿಭಾಗದ ವಿದ್ಯಾರ್ಥಿ ಯೋಗೇಶ್ ಕುಮಾರ್ 591 ಅಂಕ ಗಳಿಸುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ ಎಂದು ಶಾಸ್ತ್ರಿ ಗ್ಲೋಬಲ್ ಸ್ಕೂಲ್ ಕಾರ್ಯದರ್ಶಿ ರಾಧಾಕೃಷ್ಣ ತಿಳಿಸಿದ್ದಾರೆ.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕೃಪಾ ಎನ್.ಪಾಟೀಲ್ 586 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 21 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 39 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

100 ಅಂಕ: ಯೋಗೇಶ್ ಕುಮಾರ್ ಕನ್ನಡ, ಭೂಗೋಳ, ಲೆಕ್ಕಶಾಸ್ತ್ರ, ವ್ಯವಹಾರ ಅಧ್ಯಯನ ವಿಷಯದಲ್ಲಿ ನೂರಕ್ಕೆ ನೂರು ಅಂಕ ಪಡೆದಿದ್ದು, ಅರ್ಥಶಾಸ್ತ್ರ ವಿಷಯದಲ್ಲಿ ಕೃಪಾ ಎನ್.ಪಾಟೀಲ್, ಸುಹಾನ ಬಾನು, ಸಿಂಚನ ಪಿ.ದಿವ್ಯ, ಯಶಸ್ ವಿ., ವ್ಯವಹಾರ ಅಧ್ಯಯನ ವಿಷಯದಲ್ಲಿ ಸಾನಿಕ ಕೆ.ಎಂ., ಸುಹಾನ ಬಾನು, ಲೆಕ್ಕಶಾಸ್ತ್ರ ವಿಷಯದಲ್ಲಿ ಗಗನ ನೂರಕ್ಕೆ ನೂರು ಅಂಕ ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಅಮೂಲ್ಯ ಕೆ. 580, ಪ್ರೀತಿ 577, ಅರಾಧ್ಯ 572 ಪಡೆದಿದ್ದಾರೆ. ವಿಜ್ಞಾನ ವಿಭಾಗದ ಒಟ್ಟು 135 ವಿದ್ಯಾರ್ಥಿಗಳಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ 30, ಪ್ರಥಮ ಶ್ರೇಣಿ 77, ದ್ವಿತೀಯ ಶ್ರೇಣಿಯಲ್ಲಿ 13 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಗಣಿತ ವಿಷಯದಲ್ಲಿ ವಿದ್ಯಾರ್ಥಿಗಳಾದ ಅಮೂಲ್ಯ, ಅಶ್ವಿನ್ ಆರಾಧ್ಯ, ರೋಹಿತ್ ಶೇ.100 ಅಂಕ ಪಡೆದಿದ್ದು, ಕನ್ನಡ ವಿಷಯದಲ್ಲಿ ಪ್ರೀತು, ಮಾನಸ, ಅಮೂಲ್ಯ, ಅಂಕಿತ ನೂರು ಅಂಕ ಪಡೆದು ಉತ್ತೀರ್ಣ ಹೊಂದಿದ್ದಾರೆ.

ಆದಿಚುಂಚನಗಿರಿ ಕಾಲೇಜಿಗೆ ಶೇ.94ರಷ್ಟು ಫಲಿತಾಂಶ



ಬನ್ನೂರು, ಏ.9– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪಟ್ಟಣದ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿಗೆ ಶೇ.94ರಷ್ಟು ಫಲಿತಾಂಶ ಬಂದಿದೆ. ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ರಂಜನಿ 600ಕ್ಕೆ 589 ಅಂಕ ಪಡೆದಿದ್ದು, ಕನ್ನಡ 100, ಇಂಗ್ಲಿಷ್ 92, ಅರ್ಥಶಾಸ್ತ್ರ 100, ವ್ಯಾಪಾರ ಅಧ್ಯಯನ 99, ಅಕೌಂಟೆನ್ಸಿ 99, ಕಂಪ್ಯೂಟರ್ ಸೈನ್ಸ್‌ನಲ್ಲಿ 99 ಅಂಕ ಪಡೆದಿದ್ದಾರೆ. ಈಕೆ ರಂಗಸಮುದ್ರ ಗ್ರಾಮದ ಶ್ರೀನಿವಾಸ್ ಹಾಗೂ ಸುನಂದ ದಂಪತಿ ಪುತ್ರಿ. ಪರೀಕ್ಷೆ ತೆಗೆದುಕೊಂಡಿದ್ದ 70 ವಿದ್ಯಾರ್ಥಿಗಳ ಪೈಕಿ 10 ಮಂದಿ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿ ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ. ವಿದ್ಯಾರ್ಥಿಗಳನ್ನು ಕಾಲೇಜಿನ ಕಾರ್ಯದರ್ಶಿ ಸೋಮೇಶ್ವರನಾಥ ಸ್ವಾಮೀಜಿ, ಪ್ರಾಂಶುಪಾಲರು, ಉಪನ್ಯಾಸಕರು ಅಭಿನಂದಿಸಿದ್ದಾರೆ.

ಎಂಡಿಎಗೆ 133 ನಿವೇಶನ ಹರಾಜಿನಿಂದ 156.35 ಕೋಟಿ ಆದಾಯ



ಮೈಸೂರು, ಏ.9(ಎಂಟಿವೈ)– ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ) ಇತ್ತೀಚೆಗೆ ನಡೆಸಿದ ನಿವೇಶನ ಹರಾಜು ಪ್ರಕ್ರಿಯೆಯಲ್ಲಿ ಒಟ್ಟು 133 ನಿವೇಶನಗಳ ಮಾರಾಟದಿಂದ 156.35 ಕೋಟಿ ಆದಾಯ ಬಂದಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ, ವಿವಿಧ ಬಡಾವಣೆಯ ಖಾಲಿ ನಿವೇಶನಗಳ ಹರಾಜು ಪ್ರಕ್ರಿಯೆಯನ್ನು ಎಂಡಿಎ ಮಾ.26ರಿಂದ ಆರಂಭಿಸಿತ್ತು. ಕೆಲವು ಷರತ್ತಿನೊಂದಿಗೆ ನಾಲ್ಕು ಹಂತದಲ್ಲಿ ಹರಾಜು ಪ್ರಕ್ರಿಯೆ ನಡೆಸಲಾಗಿತ್ತು. ಒಂದೊಂದು ಹಂತದಲ್ಲಿ 50 ನಿವೇಶನಗಳನ್ನು ಹರಾಜು ಮಾಡಲಾಯಿತು. ಇ–ಹರಾಜು ಪ್ರಕ್ರಿಯೆಯಲ್ಲಿ ನಿರೀಕ್ಷೆಗೂ ಮೀರಿದ ಪ್ರಮಾಣದಲ್ಲಿ ನಿವೇಶನಾಕಾಂಕ್ಷಿಗಳು ಪಾಲ್ಗೊಂಡು, ನಿವೇಶನ ಖರೀದಿಸಿದ್ದಾರೆ.

30X40 ನಿವೇಶನಕ್ಕೆ 1.71 ಕೋಟಿ ರೂ.: ಮೈಸೂರಿನ ದಟ್ಟಗಳ್ಳಿ ಬಡಾವಣೆಯಲ್ಲಿ 30X40 ಅಳತೆಯ (ಸಂಖ್ಯೆ 1671) ನಿವೇಶನಕ್ಕೆ ವ್ಯಕ್ತಿಯೊಬ್ಬರು 1.71(1 ಕೋಟಿ, 71 ಲಕ್ಷದ 43 ಸಾವಿರ) ರೂ. ಬಿಡ್ ಕೂಗಿ ನಿವೇಶನವನ್ನು ಖರೀದಿಸಿದರೆ, ಮೈಸೂರಿನ ವಸಂತನಗರದ ನಿವೇಶನ ಸಂಖ್ಯೆ 725ಕ್ಕೆ ಬಿಡ್‌ದಾರರೊಬ್ಬರು 1,00,04,000 ರೂ.ಗೆ(1 ಕೋಟಿ 4 ಸಾವಿರ ರೂ) ಬಿಡ್ ಕೂಗಿದ್ದಾರೆ.

ಕೋಟಿ ರೂ. ನೀಡಿದವರ ಗೌಪ್ಯತೆ: ಹರಾಜು ಪ್ರಕ್ರಿಯೆಯಲ್ಲಿ ನಿವೇಶನ ಖರೀದಿಸಲು ಕೋಟಿ ಕೋಟಿ ರೂ. ಬಿಡ್ ಕೂಗಿದವರ ಗೌಪ್ಯತೆ ಕಾಯ್ದುಕೊಳ್ಳಲು ಎಂಡಿಎ ನಿರ್ಧರಿಸಿದೆ. ಹರಾಜು ಪ್ರಕ್ರಿಯೆ ಪೂರ್ಣಗೊಂಡಿದ್ದರೂ, ಇನ್ನು ಕೆಲ ದಾಖಲೆಗಳನ್ನು ಮಾಡಿಕೊಡುವ ಕಾರ್ಯ ಬಾಕಿ ಇದೆ. ಆ ಕಾರಣದಿಂದಲೂ ಹರಾಜಿನಲ್ಲಿ ನಿವೇಶನ ಖರೀದಿಸಿದವರ ಮಾಹಿತಿ ಬಹಿರಂಗಪಡಿಸದಿರಲು ಎಂಡಿಎ ತೀರ್ಮಾನಿಸಿದೆ.

ಸುಧಾರಿಸಿದೆ ರಿಯಲ್ ಎಸ್ಟೇಟ್ ಉದ್ಯಮ: ಈ ಹಿಂದೆ ಮುಡಾ ನಡೆಸಿದ ಹರಾಜು ಪ್ರಕ್ರಿಯೆಯಲ್ಲಿ ಮೈಸೂರಿನ ವಿಜಯನಗರ 4ನೇ ಹಂತದ ಬಡಾವಣೆಯಲ್ಲಿನ ನಿವೇಶನಕ್ಕೆ ಭಾರೀ ಬೇಡಿಕೆ ವ್ಯಕ್ತವಾಗಿತ್ತು. ಇದೀಗ ಎಂಡಿಎ ನಡೆಸಿದ ಹರಾಜಿನಲ್ಲಿ ಕೋಟಿ... ಕೋಟಿಗೆ ನಿವೇಶನ ಖರೀದಿಯಿಂದ ಮೈಸೂರಲ್ಲಿ ಮತ್ತೆ ರಿಯಲ್ ಎಸ್ಟೇಟ್ ಉದ್ಯಮ ಸುಧಾರಣೆ ಸೂಚಕವಾಗಿದೆ.

33 ನಿವೇಶನಕ್ಕೆ ಬಿಡ್‌ದಾರರೇ ಇಲ್ಲ: ಹರಾಜು ಪ್ರಕ್ರಿಯೆಯಲ್ಲಿ 200 ನಿವೇಶನಗಳನ್ನು ಹರಾಜು ಮಾಡಲು ಉದ್ದೇಶಿಸಲಾಗಿತ್ತು. ಆದರೆ, 33 ನಿವೇಶನಗಳಿಗೆ ಯಾರೊಬ್ಬ ಬಿಡ್‌ದಾರರು ಭಾಗವಹಿಸಿರಲಿಲ್ಲ. ಅಲ್ಲದೆ 21 ನಿವೇಶನಗಳಿಗೆ ಕೇವಲ ಒಬ್ಬೊಬ್ಬರು ಬಿಡ್‌ದಾರರು ಬಿಡ್ ಕೂಗಿದ್ದರು. ನಿಯಮದಲ್ಲಿ ಒಬ್ಬರು ಬಿಡ್‌ದಾರರಿದ್ದರೆ, ಅದನ್ನು ಹರಾಜಿನಲ್ಲಿ ಪರಿಗಣಿಸದಂತೆ ನಿಯಮವಿರುವ ಕಾರಣ, 21 ನಿವೇಶನಗಳನ್ನು ಹರಾಜಿನಿಂದ ಹೊರಗಿಡಲಾಗಿದೆ. ಕೆಲ ತಾಂತ್ರಿಕ ಕಾರಣದಿಂದ ಕೆಲ ನಿವೇಶನವನ್ನು ಹರಾಜು ಪ್ರಕ್ರಿಯೆಯಿಂದ ಹೊರಗಿಟ್ಟು ಅಂತಿಮವಾಗಿ 133 ನಿವೇಶನಗಳ ಬಿಡ್ ಪ್ರಕ್ರಿಯೆ ನಿಯಮಾನುಸಾರ ನಡೆದಿರುವುದರಿಂದ ಬಿಡ್‌ದಾರರಿಗೆ ನಿವೇಶನ ನೀಡಲು ಎಂಡಿಎ ಮುಂದಾಗಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ಅವರ ಸಮ್ಮುಖದಲ್ಲಿ ನಡೆದ ಹರಾಜು ಪ್ರಕ್ರಿಯೆಯಲ್ಲಿ ಎಂಡಿಎ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಎಸ್.ಜಿ.ಬೆಟ್ಟಸ್ವಾಮಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.



> ಮೈಸೂರಿನ ವಿವಿಧ ಬಡಾವಣೆ ವಿವಿಧ ಅಳತೆಯ ನಿವೇಶನಗಳ ಹರಾಜು ಪ್ರಕ್ರಿಯೆ ಆರಂಭಿಸಲಾಗಿತ್ತು. ತಲಾ 50 ನಿವೇಶನದಂತೆ ನಾಲ್ಕು ಹಂತದಲ್ಲಿ ನಿವೇಶನಗಳ ಹರಾಜು ನಡೆಸಲಾಗಿತ್ತು. 200 ನಿವೇಶನದಲ್ಲಿ 133 ನಿವೇಶನಗಳು ನಿಯಮಾನುಸಾರ ಹರಾಜಾಗಿದ್ದು, ಅವುಗಳಿಂದ ಎಂಡಿಎ ಗೆ 156.35 ಕೋಟಿ ರೂ. ಆದಾಯ ಸಂಗ್ರಹವಾದಂತಾಗಿದೆ. ಅದರಲ್ಲಿ ದಟ್ಟಗಳ್ಳಿಯಲ್ಲಿ ಒಂದು ನಿವೇಶನ 1.71 ಕೋಟಿ ರೂ. ವಸಂತನಗರದಲ್ಲಿನ ಒಂದು ನಿವೇಶನ 1,00,04 ಕೋಟಿ ಅಧಿಕ ಬೆಲೆಗೆ ಹರಾಜಾಗಿದೆ.
>
> – ಕೆ.ಆರ್.ರಕ್ಷಿತ್, ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ

ಮತ್ತೆ ಕುಬೇರನ ಮೂಲೆಗೆ ಡಿಮ್ಯಾಂಡ್!

ಮೈಸೂರಿನ ದಟ್ಟಗಳ್ಳಿ ಭಾಗ ನಿವೇಶನ ಖರೀದಿದಾರರಿಗೆ ಅಚ್ಚುಮೆಚ್ಚಾಗಿದೆ. ಮೈಸೂರು ನಗರದ ಕುಬೇರ ಮೂಲೆ ಎಂದೇ ದಟ್ಟಗಳ್ಳಿ ಪರಿಗಣಿತವಾಗಿದೆ. ಈ ಭಾಗದಲ್ಲಿ ಕನಸಿನ ಮನೆ ಕಟ್ಟಿಕೊಂಡರೆ ಸಂಪತ್ತು ವೃದ್ಧಿಸಲಿದೆ ಎಂಬ ಮಹದಾಸೆ ಅನೇಕರಲ್ಲಿದೆ. ಆ ಕಾರಣದಿಂದ ಎಷ್ಟಾದರೂ ಸರಿ ದಟ್ಟಗಳ್ಳಿ ಭಾಗದಲ್ಲಿ ನಿವೇಶನ ಖರೀದಿಸಬೇಕು ಎಂದು ಬಯಸುವವರ ಸಂಖ್ಯೆ ಹೆಚ್ಚಾಗಿದ್ದರಿಂದ ಎಂಡಿಎ ನಡೆಸಿದ ಹರಾಜಿನಲ್ಲಿ 30X40 ಅಳತೆಯ ನಿವೇಶನ 1.71 ಕೋಟಿಗೆ ಖರೀದಿಯಾಗಿದೆ. ಚಾಮುಂಡಿಬೆಟ್ಟದ ಸುಂದರ ನೈಸರ್ಗಿಕ ಹಿನ್ನೆಲೆ ಹೊಂದಿರುವ ವಸಂತನಗರದಲ್ಲೂ ನಿವೇಶನಕ್ಕೆ ಬೇಡಿಕೆ ಹೆಚ್ಚಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡಕಾಯಟ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಗಾರ್ಡಿಯನ್ಸ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಟೆರರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂಧರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಲವ್ ಇನ್ಶೂರೆನ್ಸ್ ಕಂಪನಿ (ತ)	4 ಪ್ರದರ್ಶನಗಳು
ಸಂಗಂ	
ಟೆರರ್ (ಕ)	4 ಪ್ರದರ್ಶನಗಳು
ಲಿಡೋ	
ಗ್ಯಾಂಗ್ ಆಫ್ ಯುಕೆ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕ್ಯಾಲೆಂಡರ್ (ಕ)	4 ಪ್ರದರ್ಶನಗಳು

ಮರಿಮಲ್ಲಪ್ಪನವರ ಪಿಯು ಕಾಲೇಜಿನ ಹೀರಾ ಎಂ.ಕಂಬಳಿ ಜಿಲ್ಲೆಗೆ ಕಲಾ ವಿಭಾಗದಲ್ಲಿ ಟಾಪರ್

ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುವೆ; ಹೀರಾ ಎಂ.ಕಂಬಳಿ




ಮೈಸೂರು,ಏ.9(ಪಿಎಂ)– ಮೈಸೂರಿನ ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ ಪಿಯು ಕಾಲೇಜಿನ ವಿದ್ಯಾರ್ಥಿನಿ ಹೀರಾ ಎಂ.ಕಂಬಳಿ ಕಲಾ ವಿಭಾಗದಲ್ಲಿ ಜಿಲ್ಲೆಗೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ.

ಕನ್ನಡದಲ್ಲಿ 98, ಇಂಗ್ಲಿಷ್‌ನಲ್ಲಿ 96, ಇತಿಹಾಸದಲ್ಲಿ 100, ಅರ್ಥಶಾಸ್ತ್ರದಲ್ಲಿ 100, ಭೂಗೋಳಶಾಸ್ತ್ರದಲ್ಲಿ 99, ರಾಜ್ಯಶಾಸ್ತ್ರದಲ್ಲಿ 97 ಅಂಕ ಗಳಿಸಿ ಒಟ್ಟಾರೆ 590 ಅಂಕಗಳೊಂದಿಗೆ ಶೇ.98.33ರಷ್ಟು ಸಾಧನೆ ಮೆರೆದಿದ್ದಾರೆ. ಇವರ ಸಾಧನೆಗೆ ಅವರ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಅಧ್ಯಾಪಕ ವೃಂದ ಅಭಿನಂದಿಸಿದೆ.

ಮೂಲತಃ ಹಾವೇರಿ ಜಿಲ್ಲೆ ಬ್ಯಾಡಗಿ ಪಟ್ಟಣ ನಿವಾಸಿಯಾದ ಹೀರಾ ಎಂ.ಕಂಬಳಿ, ಇಲ್ಲಿನ ಕೃಷಿಕ ಮಂತೇಶ್ ಕಂಬಳಿ ಹಾಗೂ ಗೃಹಿಣಿ ಮಂಗಳಾ ಕಂಬಳಿ ದಂಪತಿ ಪುತ್ರಿ. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಹೀರಾ ಎಂ.ಕಂಬಳಿ, ರಾಜ್ಯ ಮಟ್ಟದಲ್ಲಿ ಟಾಪರ್ ಆಗುವ ನಿರೀಕ್ಷೆ ಇತ್ತು. ಆದರೆ ಅದು ಕೈಗೂಡಲಿಲ್ಲ. ಅದಾಗ್ಯೂ ನಿರಾಸೆಗೊಳ್ಳುವುದಿಲ್ಲ. ಇದಕ್ಕೂ ಖುಷಿಯಾಗಿದೆ. ಭವಿಷ್ಯದಲ್ಲಿ ಯುಪಿಎಸ್‌ಸಿ ಪರೀಕ್ಷೆ ತೆಗೆದುಕೊಳ್ಳಲು ಸಿದ್ಧತೆ ಮಾಡಿಕೊಂಡಿದ್ದೇನೆ. ಈಗ ಬಿಎ ಎಲ್‌ಎಲ್‌ಬಿಗೆ ಸೇರಲಿದ್ದೇನೆ ಎಂದು ತಿಳಿಸಿದರು.

ಶೇಷಾದ್ರಿಪುರಂ ಪಿಯು ಕಾಲೇಜಿಗೆ ಶೇ.97.09 ಫಲಿತಾಂಶ



ಚೇತನ.ಕೆ, ಉಲ್ಲಾಸ್, ಮಂಜು.ವಿ, ನಿಸರ್ಗ.ಕೆ.ಎಸ್, ಬಾಂಧವ್ಯ, ಜ್ಯೋತಿಕ, ನಿತಿನ್.ಎನ್, ಚಿರಾಗ್‌ಎಂ.ವಿ

ಮೈಸೂರು, ಏ.9– ಮೈಸೂರಿನ ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ನಿಸರ್ಗ.ಕೆ.ಎಸ್ 585 ಹಾಗೂ ನಿತಿನ್.ಎನ್ 581 ಅಂಕ ಗಳಿಸಿ, ಕಾಲೇಜಿನ ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಚೇತನ.ಕೆ 593, ಉಲ್ಲಾಸ್.ಕೆ.ಆರ್. 591, ಬಾಂಧವ್ಯ ಪಿ ಬೆಳ್ಳೂರ್ 585, ಜ್ಯೋತಿಕ ಆರ್. ಪ್ರಸಾದ್ 584, ಚಿರಾಗ್‌ಎಂ.ವಿ. 582 ಹಾಗೂ ಮಂಜು.ವಿ 591 ಅಂಕದೊಂದಿಗೆ ಉತ್ತೀರ್ಣರಾಗಿದ್ದಾರೆ. ಕಾಲೇಜಿಗೆ ಈ ಬಾರಿ 97.09ರಷ್ಟು ಒಟ್ಟು ಫಲಿತಾಂಶ ಬಂದಿದೆ.

ಉತ್ತಮ ಅಂಕ ಪಡೆದಿರುವ ವಿದ್ಯಾರ್ಥಿಗಳನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವುಡೆ ಪಿ.ಕೃಷ್ಣ ಹಾಗೂ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಬಿ.ಎ.ಅನಂತರಾಮ್, ಪ್ರಾಂಶುಪಾಲರಾದ ಶ್ರೀಮತಿ ಅರ್ಚನಾಸ್ವಾಮಿ ಎನ್, ಬೋಧಕ, ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ದ್ವಿತೀಯ ಪಿಯುಸಿ: ಎಂ. ಸಿಂಚನಗೆ 547 ಅಂಕ



ಮೈಸೂರು,ಏ.9– ಮೈಸೂರಿನ ಸಾತಗಳ್ಳಿಯಲ್ಲಿನ ಲರ್ನರ್ ಗ್ಲೋಬಲ್ ಪಿಯು ಕಾಲೇಜಿನ ವಿದ್ಯಾರ್ಥಿ ಸಿಂಚನ ಎಂ. ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ ಶೇ. 91.16 ಅಂಕ ಪಡೆಯುವ ಮೂಲಕ ಸಾಧನೆ ಮಾಡಿದ್ದಾಳೆ.

ಸಿಂಚನ 600 ಅಂಕಗಳಿಗೆ 547 ಅಂಕ ಗಳಿಸಿದ್ದು, ಕನ್ನಡ 85, ಇಂಗ್ಲಿಷ್ 92, ಭೌತಶಾಸ್ತ್ರ 96, ರಸಾಯನಶಾಸ್ತ್ರ 94, ಗಣಿತ 92, ಜೀವಶಾಸ್ತ್ರದಲ್ಲಿ 88 ಅಂಕ ಪಡೆದಿದ್ದಾರೆ. ಹೆಚ್ಚು ಅಂಕ ಪಡೆದ ಕಾಲೇಜಿನ 4ನೇ ವಿದ್ಯಾರ್ಥಿಯಾಗಿದ್ದಾರೆ. ಹಿರಿಯ ಪತ್ರಕರ್ತ ಎಂ.ಟಿ. ಮಹಾದೇವ್ ಹಾಗೂ ಎಸ್.ಪಂಕಜ ದಂಪತಿ ಪುತ್ರಿಯಾಗಿದ್ದು, ಈಕೆಯ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ ಮುಖ್ಯಸ್ಥ ಮುರಳಿಮೋಹನ್, ವ್ಯವಸ್ಥಾಪಕ ಕೇಶವ್ ಹಾಗೂ ಬೋಧಕ ವರ್ಗ ಅಭಿನಂದಿಸಿದೆ.

ಹರಿ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ಶೇ.95 ಫಲಿತಾಂಶ



ಪ್ರಸನ್ನ, ತರುಣ್, ತರುಣ್.ಎಸ್, ಮಾದೇಶ್, ಸಾಕ್ಷಿ

ಮೈಸೂರು, ಏ.9– ಮೈಸೂರಿನ ಬೋಗಾದಿಯಲ್ಲಿರುವ ಹರಿ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು 2025–26ರ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 7 ಉನ್ನತ ಶ್ರೇಣಿ, ವಾಣಿಜ್ಯ ವಿಭಾಗದಲ್ಲಿ 4 ಉನ್ನತ ಶ್ರೇಣಿ ಹಾಗೂ ಒಟ್ಟಾರೆ ಶೇ.95 ರಷ್ಟು ಫಲಿತಾಂಶವನ್ನು ಗಳಿಸಿದೆ. ವಿಜ್ಞಾನ ವಿಭಾಗದಲ್ಲಿ ಪ್ರಸನ್ನ ರಘೋತ್ತಮ 577, ಎಂ. ತರುಣ್ 568, ಬಿ.ಎಂ. ಸಾಕ್ಷಿ 87.66, ಮಾದೇಶ್ 562, ಶ್ರೇಯಸ್ ಗೌಡ 538, ವಾಣಿಜ್ಯ ವಿಭಾಗದಲ್ಲಿ ಎಸ್. ತರುಣ್ 564, ಅರ್ಜುನ್ 527, ಆಶ್ರಂಯ್ 525, ಮೇಘಶ್ರೀ 522 ಹಾಗೂ ಹೆಚ್.ವಿ. ಹರಿಕೀರ್ತನ್ 517 ಅಂಕ ಗಳಿಸಿದ್ದಾರೆ.

ಇಸ್ರೇಲ್ ದಾಳಿಗೆ ಲೆಬನಾನ್‌ನಲ್ಲಿ ಒಂದೇ ದಿನ ಕನಿಷ್ಠ 182 ಮಂದಿ ಸಾವು

ಹಾರ್ಮುಜ್ ಜಲಸಂಧಿಯನ್ನ ಮತ್ತೆ ಮುಚ್ಚಿದ ಇರಾನ್

ಟೆಹ್ರಾನ್(ಇರಾನ್), ಏ.9– ಲೆಬನಾನ್‌ನಲ್ಲಿ ಇಸ್ರೇಲ್ ದಾಳಿ ಮುಂದುವರೆದಿದೆ. ಒಂದೇ ದಿನ ಕನಿಷ್ಠ 182 ಜನರು ಇಸ್ರೇಲ್ ದಾಳಿಯಲ್ಲಿ ಹತರಾಗಿದ್ದಾರೆ. ಅಮೆರಿಕ ಹಾಗೂ ಇರಾನ್ ಕದನ ವಿರಾಮ ಘೋಷಿಸಿದ ಬಳಿಕವೂ, ಇಸ್ರೇಲ್ ಲೆಬನಾನ್ ಮೇಲಿನ ದಾಳಿಯನ್ನು ನಿಲ್ಲಿಸಿಲ್ಲ. ಇದಕ್ಕೆ ಪ್ರತಿಯಾಗಿ ಇರಾನ್ ಮತ್ತೆ ಹಾರ್ಮುಜ್ ಜಲಸಂಧಿಯನ್ನು ಮುಚ್ಚಿದೆ.

ಆದರೆ, ಅಮೆರಿಕ ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವಂತೆ ಒತ್ತಾಯಿಸಿದೆ ಮತ್ತು ಶಾಂತಿ ಮಾತುಕತೆಗಳನ್ನು ಹಳಿಯಲ್ಲಿಡಲು ಪ್ರಯತ್ನಿಸಿದೆ. ಕದನ ವಿರಾಮ ಒಪ್ಪಿಕೊಂಡ ಬಳಿಕ ಅಮೆರಿಕ ಮತ್ತು ಇರಾನ್ ಇದು ತಮ್ಮ ಗೆಲುವು ಎಂದು ಹೇಳಿಕೊಂಡಿವೆ.

ಕದನ ವಿರಾಮ ಒಪ್ಪಂದದ ಬಳಿಕ ಜಾಗತಿಕ ನಾಯಕರು ನಿರಾಳತೆ ವ್ಯಕ್ತಪಡಿಸಿದ್ದರು. ಆದರೆ, ಇದೇ ಸಮಯ ದಲ್ಲಿ ಇರಾನ್ ಮತ್ತು ಗಲ್ಫ್ ಅರಬ್ ದೇಶಗಳ ಮೇಲೆ ಹೆಚ್ಚಿನ ಡ್ರೋನ್‌ಗಳು ಮತ್ತು ಕ್ಷಿಪಣಿಗಳು ಬೀಳುತ್ತಿದ್ದವು. ಅದೇ ಸಮಯದಲ್ಲಿ ಇಸ್ರೇಲ್ ಲೆಬನಾನ್‌ನಲ್ಲಿನ ಹಿಜ್ಬುಲ್ಲಾ ಉಗ್ರಗಾಮಿ ಗುಂಪಿನ ಮೇಲೆ ತನ್ನ ದಾಳಿಗಳನ್ನು ತೀವ್ರಗೊಳಿಸಿತು. ಬೈರುತ್‌ನ ವಾಣಿಜ್ಯ ಮತ್ತು ವಸತಿ ಪ್ರದೇಶಗಳ ಮೇಲೆ ಮುನ್ನೆಚ್ಚರಿಕೆಯಿಲ್ಲದೇ ದಾಳಿ ನಡೆಸಿತು. ಲೆಬನಾನ್ ಆರೋಗ್ಯ ಸಚಿವಾಲಯದ ಪ್ರಕಾರ, ಇಸ್ರೇಲ್ ದಾಳಿಗಳಲ್ಲಿ ಬುಧವಾರ ಒಂದೇ ದಿನದಲ್ಲಿ 182 ಜನರು ಮೃತಪಟ್ಟಿದ್ದಾರೆ. ಇದು ಇಸ್ರೇಲ್–ಹಿಜ್ಬುಲ್ಲಾ ಯುದ್ಧದ ಇತ್ತೀಚಿನ ಅತ್ಯಂತ ಮಾರಕ ದಿನವಾಗಿದೆ. ಈ ಹೊಸ ಹಿಂಸಾಚಾರವು ಅಮೆರಿಕ ಉಪರಾಷ್ಟ್ರಪತಿ ಜೆಡಿ ವ್ಯಾನ್ಸ್ ಅವರು ಶಿಥಿಲ ಎಂದು ಕರೆದ ಒಪ್ಪಂದವನ್ನು ಅಪಾಯಕ್ಕೆ ದೂಡುವ ಸಾಧ್ಯತೆಯನ್ನು ಹುಟ್ಟುಹಾಕಿದೆ.

ಮಾತುಕತೆಗಳು ಅಸಮಂಜಸ ಎಂದ ಇರಾನ್ ಸ್ಪೀಕರ್: ಇರಾನ್ ಪಾರ್ಲಿಮೆಂಟ್ ಸ್ಪೀಕರ್ ಮೊಹಮ್ಮದ್ ಬಾಗೆರ್ ಗಾಲಿಬಾಫ್, ಅಮೆರಿಕ ಇರಾನ್‌ನ ಷರತ್ತುಗಳನ್ನು ಮುರಿಯುತ್ತಾರೆ ಎಂದು ಆರೋಪಿಸಿದ್ದಾರೆ. ಯುದ್ಧವನ್ನು ಶಾಶ್ವತವಾಗಿ ನಿಲ್ಲಿಸಲು ಅಮೆರಿಕದೊಂದಿಗೆ ಯೋಜಿಸಲಾಗಿರುವ ಮಾತುಕತೆಗಳು ಅಸಮಂಜಸ ಎಂದು ಹೇಳಿದ್ದಾರೆ. ಏಕೆಂದರೆ ವಾಷಿಂಗ್ಟನ್ ಟೆಹ್ರಾನ್‌ನ 10 ಷರತ್ತುಗಳಲ್ಲಿ ಮೂರು ಷರತ್ತುಗಳನ್ನು ಮುರಿದಿದೆ ಎಂದು ಆರೋಪಿಸಿದ್ದಾರೆ.

ಬಾರಾಮತಿ ಉಪಚುನಾವಣೆಯಲ್ಲಿ ಅಚ್ಚರಿಯ ಬೆಳವಣಿಗೆ; ಸುನೇತ್ರಾ ಪವಾರ್ ಅವಿರೋಧ ಆಯ್ಕೆ



ಬಾರಾಮತಿ, ಏ.9–ಮಹಾರಾಷ್ಟ್ರದ ಮುಖ್ಯಮಂತ್ರಿ ಮತ್ತು ಇತರ ಹಿರಿಯ ನಾಯಕರು ಏಪ್ರಿಲ್ 23ರಂದು ನಡೆಯಲಿರುವ ಉಪಚುನಾವಣೆಯಲ್ಲಿ ಸುನೇತ್ರಾ ಪವಾರ್ ಅವರು ಅವಿರೋಧವಾಗಿ ಆಯ್ಕೆಯಾಗುವಂತೆ ಮಾಡಬೇಕೆಂದು ಮಾಡಿದ ಮನವಿಯನ್ನು ಒಪ್ಪಿಕೊಂಡಿರುವ ಮಹಾರಾಷ್ಟ್ರದ ಕಾಂಗ್ರೆಸ್ ಅಧ್ಯಕ್ಷ ಹರ್ಷವರ್ಧನ್ ಸಪ್ಕಲ್, ಬಾರಾಮತಿ ವಿಧಾನಸಭಾ ಉಪಚುನಾವಣೆಯಿಂದ ಪಕ್ಷವು ತನ್ನ ಅಭ್ಯರ್ಥಿಯನ್ನು ಹಿಂತೆಗೆದುಕೊಳ್ಳುವುದಾಗಿ ಘೋಷಿಸಿದ್ದಾರೆ. ಹೀಗಾಗಿ, ಸುನೇತ್ರಾ ಪವಾರ್ ಅವರ ಎದುರಾಳಿಯಾಗಿ ಯಾವುದೇ ಸ್ಪರ್ಧಿ ಇಲ್ಲದ ಕಾರಣ ಈ ಚುನಾವಣೆಯಲ್ಲಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಏಪ್ರಿಲ್ 23ರಂದು ನಡೆಯಲಿರುವ ಬಾರಾಮತಿ ಉಪಚುನಾವಣೆಯಿಂದ ಹಿಂದೆ ಸರಿಯುವಂತೆ ಶರದ್ ಪವಾರ್ ಮತ್ತು ಸುಪ್ರಿಯಾ ಸುಳೆ ಸೇರಿದಂತೆ ಹಿರಿಯ ಎನ್‌ಸಿಪಿ ನಾಯಕರು ಕಾಂಗ್ರೆಸ್‌ಗೆ ಮನವಿ ಮಾಡಿದ್ದರು. ಇದಾದ ನಂತರ ಕಾಂಗ್ರೆಸ್ ಈ ಕ್ರಮ ಕೈಗೊಂಡಿದೆ

ಜನವರಿಯಲ್ಲಿ ಬಾರಾಮತಿಯಲ್ಲಿ ನಡೆದ ವಿಮಾನ ಅಪಘಾತದಲ್ಲಿ ಅಜಿತ್ ಪವಾರ್ ನಿಧನರಾದರು. ಆಗ ಅವರು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಮತ್ತು ಬಾರಾಮತಿಯ ಶಾಸಕರಾಗಿದ್ದರು. ಅದಾದ 1 ತಿಂಗಳ ನಂತರ ಅವರ ಪತ್ನಿ ಸುನೇತ್ರಾ ಅವರನ್ನು ಉಪಮುಖ್ಯಮಂತ್ರಿಯಾಗಿ ನೇಮಿಸಲಾಯಿತು.ಆದರೆ, ಅವರು ಶಾಸಕಿಯಾಗಿ ಆಯ್ಕೆಯಾಗಬೇಕಾಗಿದ್ದರಿಂದ ಈ ಬಾರಿ ಉಪಚುನಾವಣೆಯಲ್ಲಿ ಅವರನ್ನು ಕಣಕ್ಕಿಳಿಸಲಾಗಿತ್ತು. ಅಜಿತ್ ಪವಾರ್ ಅವರ ಗೌರವಾರ್ಥವಾಗಿ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಹಿಂಪಡೆಯುವ ಮೂಲಕ ಸುನೇತ್ರಾ ಪವಾರ್ ಅವಿರೋಧವಾಗಿ ಆಯ್ಕೆಯಾಗುವಂತೆ ಮಾಡಿದೆ.

ಕೋಲ್ಕತ್ತಾ ನೈಟ್ ರೈಡರ್ಸ್ ಮಣಿಸಿದ ಲಕ್ನೋ ಸೂಪರ್ ಜೈಂಟ್ಸ್





ಕೋಲ್ಕತ್ತಾ, ಏ.9(ವಿವಿಹೆಚ್)– ಯುವ ಆಟಗಾರರಾದ ಮುಕುಲ್ ಚೌಧರಿ ಹಾಗೂ ಆಯೂಷ್ ಬದೋನಿ ಅವರ ಆಕರ್ಷಕ ಅರ್ಧ ಶತಕದ ನೆರವಿನಿಂದ ಅತಿಥೇಯ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು 3 ವಿಕೆಟ್‌ಗಳಿಂದ ಮಣಿಸಿದ ಲಕ್ನೋ ಸೂಪರ್ ಜೈಂಟ್ಸ್ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ದಾಖಲಿಸಿತು.

ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ ನೈಟ್ ರೈಡರ್ಸ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 181 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಲಕ್ನೋ ಸೂಪರ್ ಜೈಂಟ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 182 ರನ್ ಕಲೆಹಾಕಿ ಗೆಲುವಿನ ನಗೆ ಬೀರಿತು.

ಕೆಕೆಆರ್ ಇನ್ನಿಂಗ್ಸ್: ಮೊದಲು ಬ್ಯಾಟ್ ಮಾಡಿದ ಕೆಕೆಆರ್‌ಗೆ ನಾಯಕ ಅಜಿಂಕ್ಯಾ ರಹಾನೆ 24 ಎಸೆತಗಳಲ್ಲಿ 41 ಹಾಗೂ ಅಂಗ್‌ಕ್ರಿಶ್ ರಘುವಂಶಿ 33 ಎಸೆತಗಳಲ್ಲಿ 45 ಕಲೆ ಹಾಕಿ 84ರನ್‌ಗಳ ಜೊತೆಯಾಟ ನೀಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಇತ್ತ ಫಿನ್ ಆಲೆನ್ (9), ರಿಂಕು ಸಿಂಗ್ (4) ರನ್ ಗಳಿಸಿ ಬೇಗನೆ ಪೆವಿಲಿಯನ್ ಸೇರಿದರು.

ಈ ವೇಳೆ ಜೊತೆಯಾದ ಕ್ಯಾಮರೋನ್ ಗ್ರೀನ್ ರೋಮನ್ ಪೊವೆಲ್ 70ರನ್‌ಗಳ ಜೊತೆಯಾಟದ ಮೂಲಕ ತಂಡದ ಮೊತ್ತ 180ರ ಗಡಿ ದಾಟಲು ಸಹಕರಿಸಿದರು. ಗ್ರೀನ್ 24 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ ಅಜೇಯ 32 ರನ್ ಗಳಿಸಿದರೆ, ರೋಮನ್ ಪೊವೆಲ್ 24 ಎಸೆತ ಎದುರಿಸಿ 4 ಬೌಂಡರಿ, 2 ಸಿಕ್ಸರ್ ಒಳಗೊಂಡಂತೆ ಅಜೇಯ 39 ರನ್ ಕಲೆಹಾಕಿದರು.

ಲಕ್ನೋ ಪರ ಪ್ರಿನ್ಸ್ ಯಾದವ್, ಮಣಿಮಾರನ್ ಸಿದ್ಧಾರ್ಥ್, ದಿಗ್ವೇಶ್ ರಾಠಿ ಹಾಗೂ ಆವೇಶ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದರು.


ಎಲ್‌ಎಸ್‌ಜಿ ಇನ್ನಿಂಗ್ಸ್: ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತುವ ವೇಳೆ ಬಲಾಢ್ಯ ಬ್ಯಾಟಿಂಗ್ ಲೈನ್‌ಅಪ್ ಹೊಂದಿದ್ದ ಲಕ್ನೋ ಎಡವಿತು. ಮಿಚೆಲ್ ಮಾರ್ಷ್ 15, ಐಡೆನ್ ಮಾರ್ಕ್ರಂ 22, ನಾಯಕ ರಿಷಬ್ ಪಂತ್ 10, ನಿಕೋಲಸ್ ಪೂರನ್ 13 ರನ್ ಗಳಿಸಿ ಔಟಾಗಿದ್ದು, ತಂಡಕ್ಕೆ ಆತಂಕ ಉಂಟು ಮಾಡಿತು.

ಅನುಭವಿಗಳ ವೈಫಲ್ಯದ ನಡುವೆ ಇಂಪ್ಯಾಕ್ಟ್ ಪ್ಲೇಯರ್ ಆಯೂಷ್ ಬದೋನಿ ಅರ್ಧ ಶತಕದಾಟವಾಡಿದರು. 34 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಸಹಿತ 54ರನ್ ಕಲೆಹಾಕಿ, ಗೆಲುವಿನ ಆಸೆ ಚಿಗುರಿಸಿ ನಿರ್ಗಮಿಸಿದರು.

ಇವರ ಬಳಿಕ ಗೆಲುವಿನ ಜವಾಬ್ದಾರಿ ಹೊತ್ತ ಮುಕುಲ್ ಚೌಧರಿ ಬೌಂಡರಿ, ಸಿಕ್ಸರ್‌ಗಳ ಸುರಿಮಳೆಗೈಯುವ ಮೂಲಕ ತಂಡಕ್ಕೆ ಗೆಲುವು ತಂದುಕೊಟ್ಟರು. ಅಜೇಯರಾಗಿ ಉಳಿದ ಅವರು 27 ಎಸೆತಗಳಲ್ಲಿ 2 ಬೌಂಡರಿ ಹಾಗೂ 7 ಭರ್ಜರಿ ಸಿಕ್ಸರ್‌ಗಳ ಮೂಲಕ 54ರನ್ ಕಲೆಹಾಕಿ ಐಪಿಎಲ್‌ನಲ್ಲಿ ಚೊಚ್ಚಲ ಅರ್ಧಶತಕ ದಾಖಲಿಸಿದರು. ಉಳಿದಂತೆ ಅಬ್ದುಲ್ ಸಮದ್ 2, ಮೊಹಮ್ಮದ್ ಶಮಿ 1 ಹಾಗೂ ಅವೇಶ್ ಖಾನ್ ಅಜೇಯ 1 ರನ್ ಗಳಿಸಿದರು.

ಕೋಲ್ಕತ್ತಾ ಪರ ವೈಭವ್ ಅರೋರಾ ಹಾಗೂ ಅಂಕುಲ್ ರಾಯ್ ತಲಾ 2, ಸುನೀಲ್ ನರೈನ್, ಕಾರ್ತಿಕ್ ತ್ಯಾಗಿ ಹಾಗೂ ಕ್ಯಾಮರೋನ್ ಗ್ರೀನ್ ತಲಾ ಒಂದೊಂದು ವಿಕೆಟ್ ಪಡೆದರು.

ಶ್ರೀ ಜಯಚಾಮರಾಜೇಂದ್ರ ಪಿಯು ಕಾಲೇಜು ವಿದ್ಯಾರ್ಥಿಗಳಿಂದ ಉತ್ತಮ ಸಾಧನೆ



ಎಸ್.ನಿರೀಕ್ಷಾ, ಎಸ್.ರಜತ್, ಆಯುಷ್, ಆರ್.ದೀಕ್ಷಿತ, ಕೀರ್ತನಾ, ತನ್ಮಯ್, ಲಿಖಿತಾ, ತನ್ಮಯ್, ಜೀವಿಕ, ಪಿ.ವಿನುತ, ದಿನೇಶ್, ಸ್ಕಂದನ್, ಆಯುಷಿ, ಹೆಚ್.ಪ್ರಜ್ಞಾ


ಮೈಸೂರು, ಏ.9(ಬಿಎಲ್‌ಯು)– ಮೈಸೂರಿನ ಪ್ರತಿಷ್ಠಿತ ಶ್ರೀ ಜಯಚಾಮರಾಜೇಂದ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಎಸ್.ನಿರೀಕ್ಷಾ 591(98.5%), ಎಸ್.ರಜತ್ 591 (98.5%), ಆಯುಷ್ ಹೆಚ್ ಜೈನ್ 590(98.3%) ಮತ್ತು ಆರ್.ದೀಕ್ಷಿತ 589 (98.1%) ಅಂಕ, ವಿಜ್ಞಾನ ವಿಭಾಗದಲ್ಲಿ ಬಿ.ಕೆ. ಕೀರ್ತನಾ 589(98.1%), ಸಿ.ಎಂ.ತನ್ಮಯ್ 589(98.1%), ಎಸ್.ಬಿ.ಲಿಖಿತಾ 588(98%) ಅಂಕ ಗಳಿಸಿದ್ದಾರೆ.

ತನ್ಮಯ್ ಎಸ್ ಶೆಟ್ಟಿ 585, ಜಿ.ಜೀವಿಕ 584, ಪಿ.ವಿನುತ 584, ದಿನೇಶ್ 582, ಎಸ್.ಸ್ಕಂದನ್ 582, ಆಯುಷಿ ಅಮರ್ 581, ಹೆಚ್.ಪ್ರಜ್ಞಾ 581 ಅಂಕದೊಂದಿಗೆ ತೇರ್ಗಡೆ ಹೊಂದಿದ್ದಾರೆ.

ಒಟ್ಟು 121 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 158 ಪ್ರಥಮ ಶ್ರೇಣಿ ಮತ್ತು 29 ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು, ಇವರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪಪ್ರಾಂಶುಪಾಲರು ಹಾಗೂ ಉಪನ್ಯಾಸಕರು ಅಭಿನಂದಿಸಿದ್ದಾರೆ.

ಬಿಜಿಎಸ್ ಪಿಯು ಕಾಲೇಜಿಗೆ ಈ ಬಾರಿಯೂ ಶೇ.100 ಫಲಿತಾಂಶ



ಎ.ಹರ್ಷಿಕಾ, ರಮ್ಯಶ್ರೀ, ವರ್ಷಿಣಿ, ಜನ್ಯತಾ, ಸಂಜನಾ, ಸಾಧನಾ, ವಿಸ್ಮಯ, ಸಿದ್ದಾರ್ಥ, ತುಷಿಕಾ, ನಿಹಾತಿಕಾ, ಶ್ರೀನಂದನ್, ನಿಸರ್ಗ, ರಾಘವ್, ಹರ್ಷಿತಾ, ಚಿನ್ಮಯಿ, ಅಸ್ಮಿಂಯಾ, ಸೋನಿಯಾ, ಗೌರಿ, ವಿದ್ಯಾ, ಪ್ರಿಯದರ್ಶಿನಿ, ಅನ್ವಿತಾ, ತನ್ವಿ

ಮೈಸೂರು, ಏ.9– ಮೈಸೂರಿನ ಕುವೆಂಪುನಗರದ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ಬಿಜಿಎಸ್ ಪಿಯು ಕಾಲೇಜಿಗೆ ದ್ವಿತೀಯ ಪಿಯುಸಿಯಲ್ಲಿ ಶೇ.100ರಷ್ಟು ಫಲಿತಾಂಶ ಲಭಿಸಿದೆ. ವಾಣಿಜ್ಯ ವಿಭಾಗದಲ್ಲಿ ಎ.ಹರ್ಷಿಕಾ 596 ಅಂಕಗಳೊಂದಿಗೆ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾಳೆ. ವಿಜ್ಞಾನ ವಿಭಾಗದಲ್ಲಿ ಟಿ.ಜೆ.ವರ್ಷಿಣಿ ಮತ್ತು ಜನ್ಯತಾ ಜಿ.ಮಹೇಶ್ ತಲಾ 592 ಅಂಕಗಳನ್ನು ಗಳಿಸಿದ್ದಾರೆ. ಅತ್ಯುನ್ನತ ಶ್ರೇಣಿಯಲ್ಲಿ 584 ಹಾಗೂ ಪ್ರಥಮ ದರ್ಜೆಯಲ್ಲಿ 447 ಸೇರಿದಂತೆ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 1090 ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದಾರೆ.

ಕಾಲೇಜಿಗೆ ಕೀರ್ತಿ ತಂದ ಎಲ್ಲಾ ವಿದ್ಯಾರ್ಥಿಗಳನ್ನು ಸಂಸ್ಥೆಯ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮಿಜೀ, ಆಡಳಿತಾಧಿಕಾರಿ ಡಾ.ಆರ್.ಎಸ್.ನರಸೇಗೌಡ, ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ಅಭಿನಂದಿಸಿದ್ದಾರೆ.


STG Educational & Cultural Charitable Trust ®
COLLEGE CODE : PP0179
ಎಸ್‌ಟಿಜಿ ವಸತಿ ಪದವಿ ಪೂರ್ವ ಕಾಲೇಜು
ಉತ್ಕೃಷ್ಟತೆಯ ಅನ್ವೇಷಣೆ
STG RESIDENTIAL P U COLLEGE
Quest for Excellence
II PUC EXAMINATION RESULT 2025-26
RESULT 100%
402 DISTINCTION OUT OF 518
7th STATE Rank
1st DISTRICT Topper
SAHANA T S 593 98.83%
APEKSHA K M 589 98.16%
RAJESHWARI M N 589 98.16%
CHIRAG GOWDA R 588 98%
100/100
KANNADA - 53
MATHS - 139
BIOLOGY - 06
COMPUTER SCIENCE - 22
PHYSICS - 08
CHEMISRTY - 01
HINDI - 01
A PREMIER RESIDENTIAL P U COLLEGE IN KARNATAKA
ADMISSIONS OPEN 2026-27
For I and II PUC students with an integrated coaching for
JEE Mains + Adv | NEET (UG) | KCET
PU - SCIENCE : PCMB | PCMC
Exclusive Coaching at
STG ACADEMY
Inspire to Explore and Prepared to Succeed
Chinakurali, Pandavapura Taluk, Mandya District - 571455
8951787788 / 8971153187

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

'ಮಿತ್ರ'ನ ಮಿಣುಕು | ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಏಪ್ರಿಲ್ 10 ಶುಕ್ರವಾರ 2026

ಪುಟಗಳು: IV

ಮುಕ್ತ ವಿವಿ ವಿಚಾರದಲ್ಲಿ ರಾಜಭವನ-ರಾಜ್ಯ ಸರ್ಕಾರದ ಜಟಾಪಟಿ

ವಿವಿಯ ಬ್ಯಾಂಕ್ ಖಾತೆ ಸ್ಥಗಿತ ಪ್ರಯತ್ನ ಕೈಬಿಡುವಂತೆ ರಾಜ್ಯಪಾಲರು ತಾಕೀತು



• ಥಾವರ್ ಚಂದ್ ಗೆಹ್ಲೋಟ್‌ರಿಂದ ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್‌ಗೆ ಪತ್ರ • ಅಕ್ರಮದ ಮಾಹಿತಿ ಇದ್ದರೆ ಕಾನೂನಾತ್ಮಕ ಕ್ರಮ ಕೈಗೊಳ್ಳಬಹುದೆಂದು ಸಲಹೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ರಾಜ್ಯಪಾಲರ ಕಾರ್ಯವ್ಯಾಪ್ತಿಯೊಳಗೆ ಬರುತ್ತವೆ. ಈ ಹಿನ್ನೆಲೆಯಲ್ಲಿ ಮುಕ್ತ ವಿವಿಯ ಬ್ಯಾಂಕ್ ಖಾತೆಗಳ ಸ್ಥಗಿತಕ್ಕೆ ಉನ್ನತ ಶಿಕ್ಷಣ ಇಲಾಖೆಯಿಂದ ಪತ್ರ ಬರೆದಿದ್ದಕ್ಕೆ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆದರೆ, ವಿಶ್ವವಿದ್ಯಾನಿಲಯದ ಯಾವ ಬ್ಯಾಂಕ್ ಖಾತೆಯೂ ಸ್ಥಗಿತವಾಗಿಲ್ಲ. ಏಪ್ರಿಲ್ 2 ರಂದು ನೌಕರರಿಗೆ ವೇತನ ಕೂಡ ನೀಡಲಾಗಿದೆ. ವಿವಿಯ ಹಣಕಾಸು ಹಾಗೂ ಆಡಳಿತಾತ್ಮಕ ಕಾರ್ಯ ನಿರ್ವಹಣೆ ಎಂದಿನಂತೆ ನಡೆಯುತ್ತಿದೆ.

-ಪ್ರೊ.ಶರಣಪ್ಪ ವಿ.ಹಲಸೆ, ಕುಲಪತಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮೈಸೂರು, ಏ.9(ಬಿಎಲ್‌ಯು)– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ ಎನ್ನಲಾಗಿರುವ ಅಕ್ರಮದ ವಿಚಾರವಾಗಿ ರಾಜಭವನ ಹಾಗೂ ರಾಜ್ಯ ಸರ್ಕಾರದ ನಡುವೆ ಮತ್ತೆ ಜಟಾಪಟಿ ಶುರುವಾಗಿದೆ.


ಗೆಹ್ಲೋಟ್

ಮುಕ್ತ ವಿವಿಯ ಹಣಕಾಸು ವ್ಯವಹಾರದಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ವಿವಿಯ ಬ್ಯಾಂಕ್ ಖಾತೆಗಳನ್ನು ಸ್ಥಗಿತ(ಫ್ರೀಜ್)ಗೊಳಿಸುವ ರಾಜ್ಯ ಸರ್ಕಾರದ ಕ್ರಮಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಹಗರಣದ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ರಾಜ್ಯಪಾಲರು ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಬಿ.ಎ.ಪಾಟೀಲ್ ಅವರ ಏಕ ಸದಸ್ಯ ಆಯೋಗ ರಚಿಸಿದ್ದು, ಪಾಟೀಲ್ ಅವರು ಈಗಾಗಲೇ ವಿವಿಗೆ ಹಲವು ಬಾರಿ ಭೇಟಿ ನೀಡಿ, ವಿಚಾರಣೆ ನಡೆಸಿದ್ದಾರೆ. ಈ ಮಧ್ಯೆ ವಿವಿ ವ್ಯವಹಾರವಿರುವ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸುವಂತೆ ಉನ್ನತ ಶಿಕ್ಷಣ ಇಲಾಖೆ ಬ್ಯಾಂಕ್‌ಗಳಿಗೆ ಪತ್ರ ಬರೆದು, ಸೂಚನೆ ನೀಡಿತ್ತು. ಆದರೆ ಈ ಪ್ರಕ್ರಿಯೆ ಸಂಬಂಧ ಬ್ಯಾಂಕ್‌ಗಳು ಕೆಲವು ಸ್ಪಷ್ಟನೆ ಕೇಳಿದ್ದು, ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಇಲಾಖೆ ಕ್ರಮ ವಹಿಸಿದೆ. ಆದರೆ ಈ ಕ್ರಮದ ಬಗ್ಗೆ ರಾಜ್ಯಪಾಲರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸೇರಿದಂತೆ ಕೆಲವು ವಿಶ್ವವಿದ್ಯಾನಿಲಯಗಳಿಗೆ ಪ್ರತ್ಯೇಕ ಕಾಯ್ದೆಗಳಿವೆ. ಈ ಹಿನ್ನೆಲೆಯಲ್ಲಿ ಕಾಯ್ದೆಗೆ ತಿದ್ದುಪಡಿ ತಂದು ಕೆಎಸ್‌ಓಯು ಸೇರಿದಂತೆ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಒಂದೇ ಮಾದರಿಯ ನಿಯಮ ಅನ್ವಯಗೊಳಿಸುವ ಪ್ರಯತ್ನ ನಡೆದಿದೆ.

-ಡಾ.ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ, ಕರ್ನಾಟಕ ಸರ್ಕಾರ

ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರಿಗೆ ಪತ್ರ ಬರೆದಿದ್ದಾರೆ.

ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆ ಸ್ಥಗಿತಗೊಳಿಸುವಂತೆ ಮಾರ್ಚ್ 24 ರಂದು ಬ್ಯಾಂಕ್‌ಗಳಿಗೆ ಕಳುಹಿಸಿರುವ ಪತ್ರವನ್ನು ರಾಜ್ಯ ಸರ್ಕಾರ ಕೂಡಲೇ ಹಿಂಪಡೆಯಬೇಕು. ವಿವಿಯ ಕಾನೂನುಬದ್ಧ ಕಾರ್ಯ ನಿರ್ವಹಣೆಗೆ ಅಡ್ಡಿಯಾಗುವಂತಹ ಯಾವುದೇ ನಿರ್ಣಯವನ್ನು ಕೈಗೊಳ್ಳಬಾರದು ಎಂದು ರಾಜ್ಯಪಾಲರು ರಾಜ್ಯ ಸರ್ಕಾರಕ್ಕೆ ಸೂಚಿಸಿದ್ದಾರೆ.

ವಿಶ್ವವಿದ್ಯಾನಿಲಯದಲ್ಲಿ ಅಕ್ರಮ ನಡೆದಿರುವ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಆ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಕಾನೂನುಬದ್ಧವಾಗಿಯೇ ಕ್ರಮ ಕೈಗೊಳ್ಳಬೇಕು. ಕಾನೂನುಬದ್ಧ ವ್ಯವಸ್ಥೆ ಹಾಗೂ ಸಂವಿಧಾನದ ಮಿತಿಯೊಳಗೆ ಕ್ರಮಗಳಾಗಬೇಕೆ ಹೊರತು, ಕಾನೂನು ವ್ಯಾಪ್ತಿಯನ್ನು ಮೀರಿದ ಕ್ರಮ ಕೈಗೊಳ್ಳಬಾರದು. ಬ್ಯಾಂಕ್‌ಗಳಿಗೆ ಪತ್ರ ಬರೆದು ಕಾರ್ಯ ನಿರ್ವಹಣೆಗೆ ಅಡ್ಡಿಪಡಿಸುವ ಮೂಲಕ ಕುಲಪತಿಗಳ ಮೇಲೆ ಪರೋಕ್ಷ ಒತ್ತಡ ಹೇರುವ ಪ್ರಯತ್ನ ಮಾಡಬಾರದು ಎಂದು ತಾಕೀತು ಮಾಡಿದ್ದಾರೆ.

ಸರ್ಕಾರದ ಇಂತಹ ಕ್ರಮಗಳಿಂದ ವಿಶ್ವವಿದ್ಯಾನಿಲಯ ಹಾಗೂ ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ. ಸರ್ಕಾರದ ಇಂತಹ ಧೋರಣೆ ಮುಂದುವರೆದರೆ ಉದ್ದೇಶಪೂರ್ವಕ ಹಸ್ತಕ್ಷೇಪ ಎಂದು ಪರಿಗಣಿಸಬೇಕಾಗುತ್ತದೆ ಎಂದು ಎಚ್ಚರಿಸಿ, ರಾಜ್ಯ ಸರ್ಕಾರ ಕೈಗೊಂಡಿರುವ ಈ ಕ್ರಮದ ಬಗ್ಗೆ ರಾಜ್ಯಭವನಕ್ಕೆ ವರದಿ ಸಲ್ಲಿಸುವಂತೆ ತಿಳಿಸಿದ್ದಾರೆ.

ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಕಳೆದ ಮಾರ್ಚ್ 25 ರಿಂದ 27ರವರೆಗೆ ಆರ್‌ಎಸ್‌ಎಸ್ ನೇತೃತ್ವದ 'ಏಕಾತ್ಮ ಮಾನವ ದರ್ಶನ' ಅಂತರರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ ನಡೆಸಲು ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅನುಮತಿ ನೀಡಿದ್ದರು. ಆದರೆ, ಈ ಕಾರ್ಯಕ್ರಮಕ್ಕೆ ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ಅವರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ಕಾರ್ಯಕ್ರಮ ರದ್ದುಪಡಿಸಲು ಆದೇಶಿಸಲಾಗಿತ್ತು. ಆದರೆ ಸಮ್ಮೇಳನವನ್ನು ರದ್ದುಪಡಿಸದೆ ಸರ್ಕಾರದ ನೋಟಿಸ್‌ಗೆ ಉತ್ತರ ನೀಡಿದ್ದ ಕುಲಪತಿಗಳು, ಸಮ್ಮೇಳನ ನಡೆಸಲು ಘಟಿಕೋತ್ಸವ ಭವನವನ್ನು ಬಾಡಿಗೆಗೆ ನೀಡಲಾಗಿತ್ತು ಎಂದು ಸ್ಪಷ್ಟನೆ ನೀಡಿದ್ದರು. ಈ ಬೆಳವಣಿಗೆಯ ನಂತರ ರಾಜ್ಯ ಸರ್ಕಾರ ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆ ಸ್ಥಗಿತಕ್ಕೆ ಬ್ಯಾಂಕ್‌ಗಳಿಗೆ ಪತ್ರ ಬರೆದು ಸೂಚನೆ ನೀಡಿತ್ತು.

ಮಹಿಳೆಯರಿಗೆ ಶೇ.33 ಮೀಸಲಾತಿ ಸಿಗಲು ಡಾ.ಅಂಬೇಡ್ಕರ್ ಕಾರಣಕರ್ತರು

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಅಭಿಮತ


ಮೈಸೂರಿನ ಮಹಾರಾಣಿ ಕಲಾ ಕಾಲೇಜಿನಲ್ಲಿ ಆಯೋಜಿಸಿದ್ದ 'ಡಾ.ಅಂಬೇಡ್ಕರ್ ಮತ್ತು ಮಹಿಳಾ ಪ್ರಗತಿ' ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವರಾದ ಪ್ರೊ.ಎಂ.ಕೆ.ಸವಿತಾ ಉದ್ಘಾಟಿಸಿದರು.

ಮೈಸೂರು, ಏ.9(ಎಂಟಿವೈ)– ಡಾ.ಬಿ.ಆರ್.ಅಂಬೇಡ್ಕರ್ ಅವರು ಶ್ರೇಷ್ಠ ಸಂವಿಧಾನ ನೀಡಿರುವ ಪರಿಣಾಮ, ಮುಂಬರುವ ಲೋಕಸಭಾ ಚುನಾವಣೆಯಿಂದ ಶೇ.33ರಷ್ಟು ಮಹಿಳಾ ಮೀಸಲಾತಿ ಜಾರಿಯಾಗುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ.ಎಂ.ಕೆ.ಸವಿತಾ ಹೇಳಿದರು.

ನಗರದ ಮಹಾರಾಣಿ ಕಲಾ ಕಾಲೇಜಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದ ಸಹಯೋಗದೊಂದಿಗೆ ಗುರುವಾರ ಆಯೋಜಿಸಿದ್ದ 'ಡಾ.ಅಂಬೇಡ್ಕರ್ ಮತ್ತು ಮಹಿಳಾ ಪ್ರಗತಿ' ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರದಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ಹಾಗೂ ರಾಜ್ಯದಲ್ಲಿ ಋತು ಚಕ್ರದ ರಜೆ ಕಾಯ್ದೆ ಜಾರಿಗೆ ಬರಲು ಡಾ. ಅಂಬೇಡ್ಕರ್ ಅವರೇ ಕಾರಣಕರ್ತರು ಎಂದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ಹಿಂದೆಯೇ ಮಹಿಳೆಯರ ಪರ ಗಟ್ಟಿ ಧ್ವನಿಯೊಂದಿಗೆ ಹೋರಾಟ ಮಾಡಿದರು. ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಎಂಎ ವಿದ್ಯಾರ್ಥಿಯಾಗಿದ್ದಾಗ ಜಾತಿ ಪದ್ಧತಿ, ಅಸಮಾನತೆ, ಮಹಿಳಾ ಸಬಲೀಕರಣ ಕುರಿತ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿ, ಗಮನ ಸೆಳೆದಿದ್ದರು. ಮೊದಲ ಕಾನೂನು ಮಂತ್ರಿಯಾಗಿದ್ದಾಗ ಹಿಂದು ಸಿವಿಲ್ ಕೋಡ್ ಜಾರಿ ಮೂಲಕ ಸತಿಸಹಗಮನ ಪದ್ಧತಿ, ದೇವದಾಸಿ ಪದ್ಧತಿ, ಬಹುಪತ್ನಿತ್ವ ನಿಷೇಧಿಸಿದರು ಎಂದು ತಿಳಿಸಿದರು.

ಡಾ.ಅಂಬೇಡ್ಕರ್ ಅವರು ಮಹಿಳೆಯರಿಗೆ ಹೆರಿಗೆ ರಜೆ, ಕಡಿಮೆ ದರದಲ್ಲಿ ಪಡಿತರ ಇನ್ನಿತರ ಸವಲತ್ತು ಕಲ್ಪಿಸಲು ಪ್ರಯತ್ನಿಸಿದ್ದರು. ಅಂಬೇಡ್ಕರ್ ಅವರ ಆಶಯದಂತೆ ರಾಜ್ಯದಲ್ಲೀಗ ಪಂಚ ಗ್ಯಾರಂಟಿ ಕಾರ್ಯಕ್ರಮಗಳ ಜೊತೆಗೆ ಮಹಿಳೆಯರಿಗೆ ಋತುಚಕ್ರ ರಜೆ ನೀಡಲಾಗಿದೆ. ಆದರೆ ಇದನ್ನು ಒಪ್ಪದ ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ ಎಂದರು.

ಮಾನವ ಸಾಗಣೆ ಅದರಲ್ಲೂ ಮಹಿಳೆಯರನ್ನು ಅಪಹರಿಸಿ ಕೆಟ್ಟ ಚಟುವಟಿಕೆಗಳಿಗೆ ದೂಡುವ ಕ್ರೂರ ಪ್ರಕರಣಗಳು ಹೆಚ್ಚಾಗುತ್ತಿವೆ. ಜೆಫ್ರಿ ಎಪ್‌ಸ್ಟೀನ್ ಪ್ರಕರಣದಲ್ಲಿ ವಿಶ್ವದ ನಾಯಕರು, ಶ್ರೀಮಂತರು, ಪ್ರಸಿದ್ಧ ವ್ಯಕ್ತಿಗಳು ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಎಸಗಿದ್ದಾರೆ ಎನ್ನಲಾಗಿದೆ. ಈ ಪ್ರಕರಣವನ್ನು ಮುಚ್ಚಿ ಹಾಕಲೆಂದೇ ಯುದ್ಧ ಆರಂಭಿಸಿದ್ದಾರೆ ಎಂದು ವಿವಿಧ ದೇಶಗಳ ಮಾಧ್ಯಮಗಳು ವರದಿ ಮಾಡಿವೆ ಎಂದು ಇದೇ ವೇಳೆ ಆತಂಕ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಬೆಂಗಳೂರಿನ ಡಾ.ಬಿ.ಆರ್. ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಸಾಬೀರ ಅಹ್ಮದ್ ಮುಲ್ಲಾ, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಿ.ಎಸ್.ಪ್ರತಿಮಾ, ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ.ಎಸ್. ಅನಿತಾ ಮತ್ತಿತರರು ಉಪಸ್ಥಿತರಿದ್ದರು.

ಏ. 16 ರಿಂದ ಸ್ಪಾರ್ಕ್ ದ ಫ್ಲೇಮ್: ಒಂದು STEAM ಯಾತ್ರೆ, ನವೀನ ಕಾರ್ಯಾಗಾರ

ಮೈಸೂರು, ಏ. 9– ಮೈಸೂರಿನ ಬೋಗಾದಿಯಲ್ಲಿರುವ ಹರಿವಿದ್ಯಾಲಯ ಶಾಲೆಯ ಇನೋವೇಶನ್ ಲ್ಯಾಬ್‌ನಲ್ಲಿ 6ನೇ, 7ನೇ ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಿಗಾಗಿ 3 ದಿನಗಳ ವಿಶೇಷ ಇನ್ನೋವೇಶನ್ ಕಾರ್ಯಾಗಾರವನ್ನು ಏ. 16 ರಿಂದ 18 ರವರೆಗೆ ಆಯೋಜಿಸಲಾಗಿದೆ. ಕಾರ್ಯಾಗಾರವು ಹರಿವಿದ್ಯಾಲಯದ ಇನ್ನೋವೇಶನ್ ಲ್ಯಾಬ್‌ನಲ್ಲಿ ಬೆಳಗ್ಗೆ 10 ರಿಂದ ಮಧ್ಯಾಹ್ನ 1.30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9141054731 ಸಂಪರ್ಕಿಸಬಹುದು.

ಈ ವಿಶೇಷ ಉಪಕ್ರಮವು ವಿದ್ಯಾರ್ಥಿಗಳಿಗೆ ಸೃಜನಾತ್ಮಕತೆ, ತಂತ್ರಜ್ಞಾನ ಮತ್ತು ಕೈಚಳಕದ ಅಧ್ಯಯನದ ಲೋಕವನ್ನು ಪರಿಚಯಿಸುವುದರೊಂದಿಗೆ, ಅನುಭವಾತ್ಮಕ ಕಲಿಕೆಗೆ ಅವಕಾಶ ಒದಗಿಸುತ್ತದೆ. ವಿವಿಧ ಪರಸ್ಪರ ಕ್ರಿಯಾತ್ಮಕ ಚಟುವಟಿಕೆಗಳು ಮತ್ತು ನೇರ ಪ್ರದರ್ಶನಗಳ ಮೂಲಕ ಚೈತನ್ಯಭರಿತ ಕಲಿಕಾ ವಾತಾವರಣ ನಿರ್ಮಿಸಲಾಗುತ್ತದೆ.

ಐಷರ್ ವಾಹನಕ್ಕೆ ಕೇಬಲ್ ಸಿಲುಕಿ ಧರೆಗುರುಳಿದ ಐದು ವಿದ್ಯುತ್ ಕಂಬ



ಮೈಸೂರು, ಏ.9(ಎಂಕೆ)– ಐಷರ್ ಟ್ರಕ್‌ಗೆ ಕೇಬಲ್‌ಗಳು ಸಿಲುಕಿ ಜಗ್ಗಿದ ಪರಿಣಾಮ ಐದು ವಿದ್ಯುತ್ ಕಂಬಗಳು ಮುರಿದು ಬಿದ್ದ ಘಟನೆ ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ಗುರುವಾರ ಬೆಳಗ್ಗೆ ನಡೆದಿದೆ.

ಇಲ್ಲಿನ ಸ್ನೇಕ್ ಶ್ಯಾಮ್ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಐಷರ್ ಟ್ರಕ್‌ಗೆ ವಿದ್ಯುತ್ ಕಂಬದಲ್ಲಿ ಜೋತು ಬಿದ್ದಿದ್ದ ಕೇಬಲ್ ವೈಯರ್‌ಗಳು ಸಿಲುಕಿದೆ. ಇದನ್ನು ಗಮನಿಸದ ಟ್ರಕ್ ಚಾಲಕ, ಮುಂದಕ್ಕೆ ಚಾಲನೆ ಮಾಡಿದ್ದರಿಂದ ಸಿಲುಕಿಕೊಂಡಿದ್ದ ಕೇಬಲ್‌ಗಳು ಜಗ್ಗಿವೆ. ಹೆಚ್ಚು ಕೇಬಲ್‌ಗಳಿದ್ದ ಕಾರಣ ಅವುಗಳನ್ನು ಅಳವಡಿಸಿದ್ದ ವಿದ್ಯುತ್ ಕಂಬಗಳು ಧರೆಗುರುಳಿವೆ ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಚೆಸ್ಕಾಂ ವಿವಿ ಮೊಹಲ್ಲಾ ವಿಭಾಗದ ಇಂಜಿನಿಯರ್ ಮಂಜು ಹಾಗೂ ಸಿಬ್ಬಂದಿ ತುಂಡಾಗಿ ರಸ್ತೆಯ ಮೇಲೆ ಬಿದ್ದಿದ್ದ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಿಕೊಟ್ಟರಲ್ಲದೆ ಐಷರ್ ಟ್ರಕ್ ಮಾಲೀಕರಿಗೆ ನಿಯಮಾನುಸಾರ ಹೊಸದಾಗಿ ವಿದ್ಯುತ್ ಕಂಬಗಳನ್ನು ಅಳವಡಿಸುವ ನಿಟ್ಟಿನಲ್ಲಿ ನಷ್ಟ ಭರಿಸುವಂತೆ ಸೂಚಿಸಿದರು.

ಐಷರ್ ಟ್ರಕ್ ಚಾಲಕ ಸ್ಥಳೀಯ ನಿವಾಸಿಯಾಗಿದ್ದು, ಬುಧವಾರ ರಾತ್ರಿ ರಸ್ತೆ ಬದಿಯಲ್ಲಿನ ವಿದ್ಯುತ್ ಕಂಬಗಳ ಕೆಳಗೆ ಟ್ರಕ್ ನಿಲ್ಲಿಸಿದ್ದಾರೆ. ಈ ವೇಳೆ ವಿದ್ಯುತ್ ಕಂಬದಲ್ಲಿ ಜೋತು ಬಿದ್ದಿದ್ದ ಕೇಬಲ್‌ಗಳು ಟ್ರಕ್‌ನ ಬಾಡಿಗೆ ಸಿಲುಕಿಗೊಂಡಿವೆ. ಇದನ್ನು ಗಮನಿಸದ ಚಾಲಕ ಗುರುವಾರ ಬೆಳಗ್ಗೆ 9 ಗಂಟೆಗೆ ಎಂದಿನಂತೆ ಟ್ರಕ್ ಅನ್ನು ಸ್ಟಾರ್ಟ್ ಮಾಡಿ, ಮುಂದಕ್ಕೆ ಚಲಾಯಿಸಿದ್ದರಿಂದ ಈ ಅವಘಡ ಸಂಭವಿಸಿದೆ ಎಂದು ಇಂಜಿನಿಯರ್ ಮಂಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಓಮಿಕ್ಸ್ ನೆಟ್‌ವರ್ಕ್‌ಗಳ ವ್ಯವಸ್ಥಿತ ಬಳಕೆಯಿಂದ ಜಾಗತಿಕ ವಿಜ್ಞಾನದಲ್ಲಿ ಮಹತ್ವದ ಬದಲಾವಣೆ

ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ಪ್ರತಿಪಾದನೆ



ಮೈಸೂರು, ಏ.9(ಎಂಕೆ)– ಏಕೀಕೃತ ಓಮಿಕ್ಸ್ ನೆಟ್‌ವರ್ಕ್‌ಗಳ ವ್ಯವಸ್ಥಿತ ಬಳಕೆಯಿಂದ ಜಾಗತಿಕ ವಿಜ್ಞಾನ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಯಾಗಲಿದೆ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿಗಳೂ ಆದ ಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ತಿಳಿಸಿದ್ದಾರೆ.

ಯುನೆಸ್ಕೋದ ದಿ ವರ್ಲ್ಡ್ ಅಕಾಡೆಮಿ ಆಫ್ ಸೈನ್ಸ್ ಸಂಸ್ಥೆಯ ಫೆಲೋ ಆಗಿ ಇಥಿಯೋಪಿಯಾದ ಅಡಿಸ್ ಅಬಾಬಾ ವಿಶ್ವವಿದ್ಯಾಲಯದಲ್ಲಿ ನಾವೀನ್ಯತೆ ಮತ್ತು ತಂತ್ರಜ್ಞಾನ ಸಚಿವಾಲಯ, ಜೈವಿಕ ಮತ್ತು ಉದಯೋನ್ಮುಖ ತಂತ್ರಜ್ಞಾನ ಹಾಗೂ ಸಿಡಿಟಿ–ಆಫ್ರಿಕಾ ಸಂಯುಕ್ತಾಶ್ರದಲ್ಲಿ ಆಯೋಜಿಸಿದ್ದ 'ಏಷ್ಯಾ–ಆಫ್ರಿಕಾ ಸಂಶೋಧನಾ ಗುರಿಗಳ ಸಾಧನೆಯಲ್ಲಿ ಏಕೀಕೃತ ಓಮಿಕ್ಸ್ ನೆಟ್‌ವರ್ಕ್‌ನ ಪಾತ್ರ' ಕುರಿತ ಮುಕ್ತ ಸಂವಾದದಲ್ಲಿ ಮಾತನಾಡಿದ ಅವರು, ಏಕೀಕೃತ ಓಮಿಕ್ಸ್ ನೆಟ್‌ವರ್ಕ್‌ಗಳು ಕೇವಲ ತಂತ್ರಜ್ಞಾನಕ್ಕೆ ಸೀಮಿತವಲ್ಲ. ಇವು ಸಂಪರ್ಕ ಸೇತುವೆಯಾಗಲಿವೆ ಎಂದಿದ್ದಾರೆ.

ಏಕೀಕೃತ ಓಮಿಕ್ಸ್ ನೆಟ್‌ವರ್ಕ್‌ಗಳು ಸಂಪರ್ಕ ಸೇತುವೆ ನಿರ್ಮಿಸುವುದರ ಜೊತೆಗೆ ಸಮಾನತೆ ಸಾಧಿಸಿ, ಏಷ್ಯಾ ಮತ್ತು ಆಫ್ರಿಕಾ ಪ್ರದೇಶಗಳು ಎದುರಿಸುತ್ತಿರುವ ಸವಾಲುಗಳಿಗೆ ಹೊಂದುವ ಪರಿಹಾರಗಳನ್ನು ಅನಾವರಣಗೊಳಿಸುತ್ತವೆ. ಇದನ್ನು ಸರಿಯಾಗಿ ಅನುಷ್ಠಾನಗೊಳಿಸಿದರೆ ಜಾಗತಿಕ ವಿಜ್ಞಾನ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳನ್ನು ತರಬಲ್ಲವು ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಂವಾದದಲ್ಲಿ ಪ್ರೊ.ಸಿದ್ದಬಸವೇಗೌಡ (ಜಪಾನ್), ನಾವೀನ್ಯತೆ ಮತ್ತು ತಂತ್ರಜ್ಞಾನ ಸಚಿವಾಲಯದ ಪ್ರತಿನಿಧಿಗಳು, ಪ್ರೊ.ಹ್ಯಾಬೋಟ್ಸ್ ರೆಸ್ಸೋಮ್ (ಅಮೆರಿಕ), ಎಎಯು ಅಧ್ಯಕ್ಷ ಡಾ. ಸ್ಯಾಮುಯೆಲ್ ಕಿಫ್ಲೆ, ಬೀಟ್ ಇನ್(BETin)ನ ಡಾ.ವೊಲಾಲೆಗ್ನ್, ಪ್ರೊ.ಹೆಚ್.ಹಿನೋ (ಜಪಾನ್) ಭಾಗವಹಿಸಿದ್ದರು. ಇಥಿಯೋಪಿಯಾದ ಅಡಿಸ್ ಅಬಾಬಾ ವಿಶ್ವವಿದ್ಯಾಲಯ ಸಂಚಾಲಕ ಪ್ರೊ.ಸೊಲೊಮನ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಹಾಡಹಾಗಲೇ ಗಾಂಜಾ ಮಾರಾಟ; ಬಿಹಾರ್ ಮೂಲದ ವ್ಯಕ್ತಿ ಬಂಧನ

1.985 ಕೆ.ಜಿ. ಗಾಂಜಾ, ಮೊಬೈಲ್ ವಶಕ್ಕೆ

ಮೈಸೂರು, ಏ.9(ಎಂಕೆ)– ಮೈಸೂರಲ್ಲಿ ಹಾಡಹಗಲೇ ಗಾಂಜಾ ಮಾರಾಟ ಮಾಡುತ್ತಿದ್ದ ಬಿಹಾರ ಮೂಲದ ಖದೀಮನನ್ನು ಬಂಧಿಸಿರುವ ನರಸಿಂಹರಾಜ ಠಾಣೆ ಪೊಲೀಸರು, ಆತನಿಂದ 1 ಕೆ.ಜಿ 985 ಗ್ರಾಂ ಗಾಂಜಾ ಮತ್ತು ಮೊಬೈಲ್ ಅನ್ನು ವಶಕ್ಕೆ ಪಡೆದಿದ್ದಾರೆ.

ಬೆಂಗಳೂರಿನ ಅತ್ತಿಬೆಲೆ ನಿವಾಸಿ ಚಂದನ್ ಕುಮಾರ್(26) ಬಂಧಿತ ಆರೋಪಿ. ಈತ ಮೂಲತಃ ಬಿಹಾರದ ಭಾಗಲಪುರ ಜಿಲ್ಲೆಯ ಸುಲ್ತಾನ್‌ಗಾಂಜ್ ಪೋಸ್ಟ್‌ನ ತಿಲಕಪುರ ಗ್ರಾಮದವನಾಗಿದ್ದು, ಏ.8 ರಂದು ಮಧ್ಯಾಹ್ನ 1 ಗಂಟೆಗೆ ಸುಮಾರಿಗೆ ಹಳೆ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಪದ್ಮಶ್ರೀ ಕನ್ವೆನ್ಷನ್ ಹಾಲ್ ಬಳಿ ಗಾಂಜಾ ಮಾರಾಟ ಮಾಡಲು ಗಿರಾಕಿಗಾಗಿ ಕಾಯುತ್ತಿದ್ದ ವೇಳೆ ಸಿಕ್ಕಿಬಿದ್ದಿದ್ದಾನೆ.

ಅನುಮಾನಾಸ್ಪದವಾಗಿ ತಿರುಗಾಡುತ್ತಾ ಗಾಂಜಾ ಮಾರಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿದ ವೇಳೆ, ಪೊಲೀಸ್ ಜೀಪ್ ಕಂಡು ಓಡುತ್ತಿದ್ದ ಆರೋಪಿ ಚಂದನ್ ಕುಮಾರ್‌ನನ್ನು ಬೆನ್ನಟ್ಟಿ ಹಿಡಿದು ವಿಚಾರಣೆಗೆ ಒಳಪಡಿಸಿದಾಗ ಬ್ಯಾಗ್‌ನಲ್ಲಿ ಗಾಂಜಾ ಇರುವುದು ಗೊತ್ತಾಗಿದೆ. ಅಲ್ಲದೆ ತನಗೆ ಬೆಂಗಳೂರಿನ ಸುನೀಲ್ ಎಂಬಾತ ಗಾಂಜಾ ನೀಡಿ, ಗಿರಾಕಿಯೊಬ್ಬರಿಗೆ ಮಾರಾಟ ಮಾಡಲು ತಿಳಿಸಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಈ ಸಂಬಂಧ ಚಂದನ್ ಕುಮಾರ್ ಮತ್ತು ಸುನೀಲ್ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ನರಸಿಂಹರಾಜ ಠಾಣೆ ಪೊಲೀಸರು ಹೆಚ್ಚಿನ ತನಿಖೆ ಮುಂದುವರೆಸಿದ್ದಾರೆ.

ಗ್ರಾಮಗಳಲ್ಲಿ ಗ್ರಂಥಾಲಯ ನಿರ್ಮಾಣ ಅಂಬೇಡ್ಕರ್ ಆಶಯ

ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ಸಂಸ್ಕಾರವೂ ಅಗತ್ಯ: ಶಾಸಕ ಜಿ.ಟಿ.ದೇವೇಗೌಡರ ಅಭಿಮತ

ಮೈಸೂರು, ಏ.9– ಪ್ರತಿ ಗ್ರಾಮದಲ್ಲೂ ಗ್ರಂಥಾಲಯ ಸ್ಥಾಪನೆಯಾಗಬೇಕು ಎಂಬುದು ಅಂಬೇಡ್ಕರ್ ಅವರ ಕನಸಾಗಿದ್ದು, ಅದರಂತೆ ಇಂದು ಗ್ರಾಮದಲ್ಲಿ ಗ್ರಂಥಾಲಯ ಉದ್ಘಾಟನೆಯಾಗಿರುವುದು ಸಂತಸದ ವಿಷಯ ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಗ್ರಂಥಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜನರು ಉತ್ತಮ ಕೆಲಸ ಮಾಡುತ್ತೇನೆ ಎಂಬ ವಿಶ್ವಾಸದಿಂದ ತಮ್ಮನ್ನು ಆಯ್ಕೆ ಮಾಡಿದ್ದಾರೆ. ಅವರ ಆಶೀರ್ವಾದದಿಂದ ಬಂದಿರುವ ನಾನು ಜನರು ತಲೆತಗ್ಗಿಸುವಂತಹ ಕೆಲಸ ಮಾಡುವುದಿಲ್ಲ ಎಂದು ಹೇಳಿದರು.

ಡಾ. ಬಿ.ಆರ್.ಅಂಬೇಡ್ಕರ್, ಸಮಾಜದಲ್ಲಿ ಅಸ್ಪೃಶ್ಯತೆಯನ್ನು ಮೆಟ್ಟಿನಿಂತು ವಿಶ್ವದ ಅತ್ಯುತ್ತಮ ಸಂವಿಧಾನವನ್ನು ನೀಡಿದ ಮಹಾನ್ ನಾಯಕರು. ಸಂವಿಧಾನದಲ್ಲಿ ಮಹಿಳೆಯರಿಗೆ ಸ್ಥಾನಮಾನ, ಸಮಾನತೆ, ಹಕ್ಕುಗಳು ಹಾಗೂ ಒಬ್ಬ ವ್ಯಕ್ತಿಗೆ ಒಂದು ಮತ ತತ್ವಗಳನ್ನು ನೀಡಲಾಗಿದೆ. ಬಸವಣ್ಣನವರು ಅನುಭವ ಮಂಟಪದ ಮೂಲಕ ಸಮಾನತೆಯ ಸಂದೇಶ ಸಾರಿದ ಮಹಾನ್ ಚಿಂತಕರಾಗಿದ್ದಾರೆ ಎಂದು ಹೇಳಿದರು.

ಕೆಲವರು ಬಾಯಲ್ಲಿ ಸಮಾನತೆ ಹೇಳಿಕೊಂಡರೂ ಒಳಗೆ ಜಾತಿ ಭಾವನೆ ಇಟ್ಟುಕೊಳ್ಳುವುದು ತಪ್ಪು. ಅಂಬೇಡ್ಕರ್ ಸಂವಿಧಾನದ ಅಂಶಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಹಣಕ್ಕಾಗಿ ಮತ ಮಾರಿಕೊಂಡರೆ ಕ್ಷೇತ್ರದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ ಎಂದು ಎಚ್ಚರಿಸಿದರು.

ಎಲ್ಲ ಸಮಾಜದವರು ಸೇರಿ ಉತ್ತಮ ಕಾರ್ಯಕ್ರಮ ನಡೆಸುತ್ತಿರುವುದು ಶ್ಲಾಘನೀಯ. ಇನ್ನೂ ಆರು ತಿಂಗಳಲ್ಲಿ ಕಾವೇರಿ ನೀರು ಕ್ಷೇತ್ರದ ಎಲ್ಲಾ ಭಾಗಗಳಿಗೆ ತಲುಪುವಂತೆ ಕೆಲಸ ನಡೆಯುತ್ತಿದೆ ಎಂದು ತಿಳಿಸಿದರು.

ಗ್ರಂಥಾಲಯವನ್ನು ಮಕ್ಕಳು ಸದುಪಯೋಗಪಡಿಸಿಕೊಂಡು ಉತ್ತಮ ವಿದ್ಯಾಭ್ಯಾಸ ಮಾಡಬೇಕು. ಜೊತೆಗೆ ಮನೆಯಲ್ಲಿ ಉತ್ತಮ ಸಂಸ್ಕಾರ, ಹಿರಿಯರಿಗೆ ಗೌರವ ಮತ್ತು ತಂದೆ–ತಾಯಿಯ ಮೌಲ್ಯಗಳನ್ನು ಕಲಿಸಬೇಕು. ಗಣ್ಯರ ಇತಿಹಾಸ ತಿಳಿದುಕೊಳ್ಳಲು ಗ್ರಂಥಾಲಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.



ಮೈಸೂರು ತಾಲೂಕು ಜಯಪುರ ಹೋಬಳಿಯ ಧನಗಹಳ್ಳಿ ಗ್ರಾಮದಲ್ಲಿ 25 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿದ ಗ್ರಂಥಾಲಯ ಕಟ್ಟಡವನ್ನು ಶಾಸಕ ಜಿ.ಟಿ.ದೇವೇಗೌಡರವರು ಗುರುವಾರ ಉದ್ಘಾಟಿಸಿದರು. ಹಾಗೂ ಧನಗಹಳ್ಳಿ ಗ್ರಾಮದಲ್ಲಿ 1 ಕೋಟಿ ವೆಚ್ಚದ ನೂತನ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿಪೂಜೆ ಮಾಡಿದರು. ಈ ವೇಳೆ ಬೌದ್ಧ ಧರ್ಮದ ಗುರುಗಳಾದ ಮಾತ ಗೌತಮಿ ಬಂತೇಜಿ, ಕೊಳ್ಳೇಗಾಲದ ಸುಗತಾಪಾಲ ಬಂತೇಜಿ, ಗ್ರಾಮದ ಮುಖಂಡರಾದ ಧನಗಹಳ್ಳಿ ಸ್ವಾಮಿ, ಎಂ.ಬಸವರಾಜು, ಮಹದೇವಪ್ಪ, ಬಸವಣ್ಣ, ಮರಿಸ್ವಾಮಿ, ಡಿ.ದೇವರಾಜು, ಬಿ.ಸ್ವಾಮಿ, ಸಿದ್ದಲಿಂಗಸ್ವಾಮಿ, ಲಿಂಗರಾಜು, ಚಿಕ್ಕಣ್ಣ, ಸಿದ್ಧರಾಜು, ಶಂಕರನಾಯಕ ಹಾಗೂ ಧನಗಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಸ್ಥರು ಉಪಸ್ಥಿತರಿದ್ದರು.

ಮಾದರಿ ಸಮುದಾಯ ಭವನಕ್ಕೆ ಶಂಕು ಸ್ಥಾಪನೆ: ಧನಗಳ್ಳಿ ಗ್ರಾಮದಲ್ಲಿ ರೂ 70 ಲಕ್ಷ ವೆಚ್ಚದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕರಾದ ಜಿ.ಟಿ. ದೇವೇಗೌಡರು ಇದೆ ಸಂದರ್ಭದಲ್ಲಿ ಶಂಕುಸ್ಥಾಪನೆ ನೆರವೇರಿಸಿದರು.


ಧನಗಳ್ಳಿ ಗ್ರಾಮದಲ್ಲಿ ಸಮುದಾಯ ಭವನದ ಕನಸ್ಸು ಹಲವಾರು ದಿನಗಳಿಂದ ಬಾಕಿ ಇತ್ತು. ಇಂದು ಆ ಕನಸ್ಸನ್ನು ಸಾಕಾರಗೊಳಿಸುವ ಸಮಯ ಬಂದಿದೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

ಸಮಾರಂಭದಲ್ಲಿ ಬೌದ್ಧ ಬಿಕ್ಕುಗಳಾದ ಮಾತಾ ಗೌತಮಿ ಬಂತೇಜಿ ಮತ್ತು ಕೊಳ್ಳೇಗಾಲದ ಬಂತೇ ಸುಗತಾಪಾಲ್ ರವರು ಹಾಗೂ ಗ್ರಾಮದ ಎಲ್ಲಾ ಸಮುದಾಯದ ಮುಖಂಡರು ಹಾಜರಿದ್ದರು.

ಮಲ್ಲಿಕಾರ್ಜುನ ಖರ್ಗೆ ವಿರುದ್ಧ ದ್ವೇಷ ಭಾಷಣ ಕಾಯ್ದೆಯಡಿ ಮೊಕದ್ದಮೆ ದಾಖಲಿಸಿ

ಮೈಸೂರು, ಏ. 9– ಕಾಂಗ್ರೆಸ್ ಸರ್ಕಾರದ ದುರಾಡಳಿತ, ಜನವಿರೋಧಿ ಹಾಗೂ ಹಿಂದೂ ವಿರೋಧಿ ನೀತಿಗಳ ವಿರುದ್ಧ ಹೋರಾಟ ಮಾಡುವ.. ಜಾಲತಾಣದಲ್ಲಿ ಸಕ್ರಿಯವಾಗಿರುವ ಸಾಮಾಜಿಕ ಕಾರ್ಯಕರ್ತರು, ಹಿಂದೂ ಕಾರ್ಯಕರ್ತರ ಮೇಲೆ ದ್ವೇಷ ಭಾಷಣ ಕಾಯ್ದೆಯಡಿ ಮೊಕದ್ದಮೆ ದಾಖಲು ಮಾಡಿ, ಸಂವಿಧಾನ ನೀಡಿರುವ ವಾಕ್ ಸ್ವಾತಂತ್ರ್ಯ ಹರಣ ಮಾಡುವುದರೊಂದಿಗೆ ಅನ್ಯಾಯದ ವಿರುದ್ಧದ ಧ್ವನಿ ಅಡಗಿಸುವ ಕುತಂತ್ರ ರೂಪಿಸುತ್ತಿರುವ ಸಿದ್ದರಾಮಯ್ಯ ಸರ್ಕಾರ, ತಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಆರ್‌ಎಸ್‌ಎಸ್ ಮತ್ತು ಬಿಜೆಪಿ ಯನ್ನು ವಿಷಸರ್ಪಕ್ಕೆ ಹೋಲಿಕೆ ಮಾಡಿ, ಕೊಲ್ಲುವಂತೆ ಭಾಷಣ ಮಾಡಿರುವುದು, ಸಮಾಜದಲ್ಲಿ ಶಾಂತಿ ಕದಡುವ, ಹಿಂಸೆಗೆ ಪ್ರಚೋದನೆ ನೀಡುವ ಹೇಳಿಕೆಯಾಗಿದ್ದು, ಇವರ ವಿರುದ್ಧ ದ್ವೇಷಭಾಷಣ ಕಾಯ್ದೆ ಯಡಿ ಮೊಕದ್ದಮೆ ದಾಖಲಿಸಲಿ ಎಂದು ಮಿಷನ್ ಮೋದಿ ಡೆಮಾಕ್ರಸಿ ಡೆವಲಪ್‌ಮೆಂಟ್ ಟ್ರಸ್ಟ್ ಮೈಸೂರು ಜಿಲ್ಲಾಧ್ಯಕ್ಷ ಮೈ ನಾ ಲೋಕೇಶ್ ಆಗ್ರಹಿಸಿದ್ದಾರೆ.

ನಾಳೆ 'ಮಹಾ ಶರಣ ಮಾದಪ್ಪ' ನಾಟಕದ ಮರು ಪ್ರದರ್ಶನ



ಮೈಸೂರು, ಏ.9(ಜಿಎ)–ಮೈಸೂರಿನ ನಾಲ್ವಡಿ ಸೋಷಿಯಲ್, ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್ ವತಿಯಿಂದ ಮಲೆ ಮಹದೇಶ್ವರರು ಹಾಗೂ ಮಂಟೇಸ್ವಾಮಿಯವರ ಕಥೆ ಹಾಗೂ ಪವಾಡವನ್ನು ಮಾನವೀಯತೆಯ ನೆಲೆಯಲ್ಲಿ ಪ್ರಸ್ತುತಪಡಿಸುವ 'ಮಹಾ ಶರಣ ಮಾದಪ್ಪ' ನಾಟಕದ ಮರು ಪ್ರದರ್ಶನವನ್ನು ಏ.11ರಂದು ಸಂಜೆ 7ಗಂಟೆಗೆ ರಂಗಾಯಣದ ಕಿರುರಂಗಮಂದಿರದಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ದಿನೇಶ್ ಚಮ್ಮಾಳಿಗೆ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.24ರಂದು ನಾಟಕ ಪ್ರದರ್ಶನವಾದಾಗ ಟಿಕೆಟ್‌ಗಳು ಸಿಗದ ಕಾರಣ ಬಹಳಷ್ಟು ಮಂದಿ ನಿರಾಶರಾಗಿ ವಾಪಸ್ಸಾದರು. ಹಲವರು ಕುಳಿತುಕೊಳ್ಳಲು ಖುರ್ಚಿಗಳು ಇಲ್ಲದಿದ್ದರೂ ಸಹಾ ನಿಂತೇ ವೀಕ್ಷಿಸಿದರು. ಮತ್ತಷ್ಟು ಪ್ರೇಕ್ಷಕರ ಒತ್ತಾಯದ ಮೇರೆಗೆ ನಾಟಕ ಈಗ ಮತ್ತೆ ಮರು ಪ್ರದರ್ಶನ ಕಾಣುತ್ತಿದೆ ಎಂದರು.

ಇದು ಮಲೆ ಮಹದೇಶ್ವರರು, ಮಂಟೇಸ್ವಾಮಿಯವರ ಸಂಪೂರ್ಣ ಜೀವನ ಚರಿತ್ರೆ ಒಳಗೊಂಡಿದೆ. ಈ ರೀತಿಯ ಪ್ರಯೋಗ ಕನ್ನಡ ರಂಗಭೂಮಿಯಲ್ಲಿ ಇದೇ ಮೊದಲಾಗಿದೆ. ಈ ಇಬ್ಬರ ಪವಾಡಗಳನ್ನು ಕೇಳಿ ಮೈಮರೆತು ಹೋಗುವ, ಭಕ್ತಿ ಭಾವದಲ್ಲಿ ಕಳೆದು ಹೋಗುವ ಭಕ್ತ ಗಣಕ್ಕೆ ಆ ಪವಾಡಗಳಲ್ಲಿಯೂ ಒಂದೊಂದು ಸಾಮಾಜಿಕ ಪಾಠಗಳಿದ್ದವು. ಅವುಗಳನ್ನು ನಾವು ಇಂದಿಗೂ ಅನುಸರಿಸುವ ಅಗತ್ಯವಿದೆ. ಅವುಗಳು ಇಂದಿನ ಎಷ್ಟೋ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತವೆ ಎಂಬ ಎಳೆಯ ಮೇಲೆ ನಾಟಕ ಸಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ನಾಟಕಕಾರ ಸಿದ್ದುಪ್ರಸನ್ನ, ಎಲ್.ವಿಶ್ವನಾಥ್, ಸುದೀಪ್ ಹಸನ್ಮುಖಿ ಇದ್ದರು.

ಗುತ್ತಿಗೆದಾರರಿಗೆ ಮತ್ತೊಂದು ಸಂಕಷ್ಟ!

ಸರ್ಕಾರ ಹಣ ಕೊಟ್ಟರೂ ಮಧ್ಯವರ್ತಿಗಳ ಕಾಟ!!

- ಶೇ.12ರಿಂದ 15ರಷ್ಟು ಕಮಿಷನ್‌ಗೆ ದುಂಬಾಲು
- ನಗರಾಭಿವೃದ್ಧಿ ಸಚಿವರಿಗೆ ಗುತ್ತಿಗೆದಾರರ ಸಂಘ ದೂರು

ಬೆಂಗಳೂರು, ಏ.9(ಕೆಎಂಶಿ)–ಕಾಮಗಾರಿಗಳ ಹಣ ಬಿಡುಗಡೆಗೆ ಶೇ.12ರಿಂದ ಶೇ.15ರಷ್ಟು ಕಮಿಷನ್ ನೀಡುವಂತೆ ಒತ್ತಾಯಿಸಲಾಗುತ್ತಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ಸರ್ಕಾರಕ್ಕೆ ದೂರು ಸಲ್ಲಿಸಿದೆ.

ಈ ಸಂಬಂಧ ಸಂಘದ ಅಧ್ಯಕ್ಷ ಮಂಜುನಾಥ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ಪತ್ರ ಬರೆದು, ಕಮೀಷನ್ ನೀಡಿದರೆ ಮಾತ್ರವೇ ಹಣ ಬಿಡುಗಡೆ ಮಾಡಿಸುವುದಾಗಿ ಮಧ್ಯವರ್ತಿಗಳು, ಕಾಮಗಾರಿ ನಡೆಸಿದ ಗುತ್ತಿಗೆದಾರರ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ದೂರಿದ್ದಾರೆ.

ಮೈಸೂರು, ತುಮಕೂರು, ಶಿವಮೊಗ್ಗ, ದಾವಣಗೆರೆ, ಹುಬ್ಬಳ್ಳಿ–ಧಾರವಾಡ ಸೇರಿದಂತೆ ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಕಳೆದ 3 ವರ್ಷದ ಹಿಂದೆ ಮಹಾತ್ಮ ಗಾಂಧಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಿಗೆ ಹಂತ ಹಂತವಾಗಿ ಸರ್ಕಾರ ಹಣ ಬಿಡುಗಡೆ ಮಾಡುತ್ತಿದೆ.

ಈ ನಗರಗಳಲ್ಲಿ ಒಟ್ಟಾರೆ 1325 ಕೋಟಿ ರೂ. ಮೌಲ್ಯದ ಕಾಮಗಾರಿ ಮಾಡಲಾಗಿದೆ. ಸರ್ಕಾರ ಹಣ ಬಿಡುಗಡೆ ಮಾಡಲಿದೆ ಎಂಬ ಮಾಹಿತಿ ತಿಳಿಯುತ್ತಿದ್ದಂತೆ ಮಧ್ಯವರ್ತಿಗಳು ಕಮಿಷನ್ ನೀಡಿದರೆ ಮೊತ್ತ ಬಿಡುಗಡೆ ಮಾಡಿಸುವುದಾಗಿ ನಮ್ಮ ಗುತ್ತಿಗೆದಾರರ ಬೆನ್ನು ಬಿದ್ದಿದ್ದಾರೆ.

ಮಧ್ಯವರ್ತಿಗಳ ಕಾಟದಿಂದ ಬೇಸರಗೊಂಡ ಗುತ್ತಿಗೆದಾರರು ನಮಗೆ ಪತ್ರವನ್ನೂ ಬರೆದಿದ್ದಾರೆ. ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದಾರೆ. ನೀವು (ಸಚಿವರು) ಗುತ್ತಿಗೆದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಒಂದಷ್ಟು ಹಣ ಬಿಡುಗಡೆ ಮಾಡಿಸಿದ್ದೀರಿ. ಆದರೆ, ಈ ಮೊತ್ತ ಪಡೆಯಲು ಕಮಿಷನ್ ನೀಡುವಂತೆ ನಿಮ್ಮ ಇಲಾಖಾ ಅಧಿಕಾರಿಗಳ ಹೆಸರು ಹೇಳಿಕೊಂಡು ಮಧ್ಯವರ್ತಿಗಳು ದುಂಬಾಲು ಬಿದ್ದಿದ್ದಾರೆ. ಇವರ ಮೇಲೆ ಕ್ರಮ ಕೈಗೊಳ್ಳಿ ಎಂದು ಸಚಿವರನ್ನು ಗುತ್ತಿದಾರರ ಸಂಘ ಒತ್ತಾಯಿಸಿದೆ.

ಮೇ 1ರಿಂದ ಕರ್ತವ್ಯ ತಂತ್ರಾಂಶದಲ್ಲಿ ಹಾಜರಾತಿ ಕಡ್ಡಾಯ




ಮೈಸೂರು, ಏ.9 (ಎಸ್‌ಪಿಎನ್)–ರಾಜ್ಯ ಸರ್ಕಾರದ ಎಲ್ಲಾ ಇಲಾಖೆ ಮುಖ್ಯಸ್ಥರು, ಅಧಿಕಾರಿಗಳು ಹಾಗೂ ಸಿಬ್ಬಂದಿ ಕರ್ನಾಟಕ ಆಧುನಿಕ ಹಾಜರಾತಿ ನಿರ್ವಹಣಾ ವ್ಯವಸ್ಥೆ (ಕೆಎಎಂಎಸ್)ಯ 'ಕರ್ತವ್ಯ' ತಂತ್ರಾಂಶದಲ್ಲಿ ಮೇ.1ರಿಂದಲೇ ಹಾಜರಾತಿ ದಾಖಲಿಸಬೇಕು ಎಂದು ಸಿಬ್ಬಂದಿ ಹಾಗೂ ಆಡಳಿತ ಸುಧಾರಣೆ ಇಲಾಖೆ ಸೂಚಿಸಿದೆ.

"ಸ್ಮಾರ್ಟ್‌ಫೋನ್ ಲಭ್ಯವಿಲ್ಲದ ನೌಕರರಿಗಾಗಿ ಕರ್ತವ್ಯ ಡಿವೈಸ್ ಅಳವಡಿಸಲಾಗುತ್ತದೆ, ಪ್ರಾಯೋಗಿಕವಾಗಿ ವಿಧಾನಸೌಧ, ವಿಕಾಸ ಸೌಧ, ಬಹುಮಹಡಿ ಕಟ್ಟಡ(ಎಂಎಸ್ ಬಿಲ್ಡಿಂಗ್‌ನಲ್ಲಿ)ಗಳಲ್ಲಿ ಕರ್ತವ್ಯ ಡಿವೈಸ್ ಅಳವಡಿಸಲಾಗಿದ್ದು, ಈ ಡಿವೈಸ್ ಮೂಲಕ ಸಿಬ್ಬಂದಿ ಹಾಜರಾತಿ ದಾಖಲಿಸಬೇಕು. ಉಳಿದ ಕಚೇರಿಗಳಲ್ಲಿ ಈ ಡಿವೈಸ್ ಅಗತ್ಯ ವಿದ್ದಲ್ಲಿ ಸಿಆಸು(ಇ–ಆಡಳಿತ) ಸಂಪರ್ಕಿಸಬೇಕು.
–ಮನೋಜ್ ಜೈನ್, ಕಾರ್ಯದರ್ಶಿ


ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು, ನಿಗಮ, ಮಂಡಳಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು ಮೇ 1ರಿಂದಲೇ ಜಾರಿಗೆ ಬರುವಂತೆ ತಮ್ಮ ಮೊಬೈಲ್ ಮೂಲಕ 'ಕರ್ತವ್ಯ' ಆಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಂಡು ಹಾಜರಾತಿ ದಾಖಲಿಸಬೇಕು. ಇದಕ್ಕಾಗಿ ಇ–ಆಡಳಿತ ಇಲಾಖೆಯು ಮೇ 1ರೊಳಗೆ ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಭೌಗೋಳಿಕ ನಿರ್ದೇಶಾಂಕಗಳನ್ನು (ಜಿಯೋ–ಟ್ಯಾಗ್) ಸಿದ್ಧಪಡಿಸಬೇಕು. ಕರ್ತವ್ಯ ಆಪ್‌ನಲ್ಲಿ ನೌಕರರ ಮೊಬೈಲ್ ನೋಂದಣಿ ಪ್ರಕ್ರಿಯೆ ಖಾತರಿಪಡಿಸಿಕೊಂಡು ಇ–ಆಡಳಿತ ಇಲಾಖೆಯು ಸಿದ್ಧಪಡಿಸುವ ಮಾರ್ಗಸೂಚಿಗಳನ್ನು ಪ್ರತಿಯೊಬ್ಬ ನೌಕರರು ಕಡ್ಡಾಯವಾಗಿ ಪಾಲಿಸಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ಕಾರ್ಯದರ್ಶಿ ಮನೋಜ್ ಜೈನ್ ತಿಳಿಸಿದ್ದಾರೆ.

ಶ್ರೀ ಶಿವಕುಮಾರಸ್ವಾಮೀಜಿ ಜಯಂತ್ಯೋತ್ಸವ...



ಮೈಸೂರಿನ ಊಟಿ ರಸ್ತೆಯ ಗೌರಿಶಂಕರನಗರದ ಬಸವ ಬಳಗದ ವತಿಯಿಂದ ಸಿದ್ದಗಂಗಾ ಮಠದ ದಿವಂಗತ ಶ್ರೀ ಶಿವಕುಮಾರಸ್ವಾಮೀಜಿ ಅವರ 119ನೇ ಜಯಂತ್ಯೋತ್ಸವವನ್ನು ಶ್ರೀಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಅನ್ನಸಂತರ್ಪಣೆ ಮಾಡುವ ಮೂಲಕ ಆಚರಣೆ ಮಾಡಲಾಯಿತು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್, ಕಾಮಗೆರೆ ಮಹದೇವಪ್ಪ, ಸ್ನೇಕ್ ಲೋಕೇಶ್, ನಾಗರಾಜು, ಬಾಬು, ನಾಗಣ್ಣ, ಬಸವರಾಜು, ಮಹದೇವಸ್ವಾಮಿ ಉಪಸ್ಥಿತರಿದ್ದರು.

ನಾಳೆ ಡಾ.ವಿಷ್ಣುವರ್ಧನ್ ಸಂಗೀತ ಗಾಯನೋತ್ಸವ



ಮೈಸೂರು, ಏ.9(ಜಿಎ)–ಡಾ.ವಿಷ್ಣುವರ್ಧನ್ ಸಂಗೀತ ಗಾಯನೋತ್ಸವವನ್ನು ಸೌಭಾಗ್ಯ ಅಸೋಸಿಯೇಟ್ಸ್ ವತಿಯಿಂದ ಏ.11ರಂದು ಬೆಳಗ್ಗೆ 9.30ರಿಂದ ಸಂಜೆ 6ರವರೆಗೆ ಮೈಸೂರಿನ ವಿಷ್ಣುವರ್ಧನ್ ಸ್ಮಾರಕದಲ್ಲಿ ಆಯೋಜಿಸಲಾಗಿದೆ ಎಂದು ಅಸೋಸಿಯೇಟ್ಸ್ ಸಂಸ್ಥಾಪಕಿ ಸೌಭಾಗ್ಯ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ 25 ಮಂದಿ ಮಹಿಳಾ ಸಾಧಕಿಯರನ್ನು ಅಭಿನಂದಿಸಲಾಗುತ್ತದೆ. 15ಕ್ಕೂ ಹೆಚ್ಚು ಗಾಯಕರು ಹಾಡುಗಳನ್ನು ಪ್ರಸ್ತುತಪಡಿಸಲಿದ್ದಾರೆ. ಕಾರ್ಯಕ್ರಮವನ್ನು ಕಾಂಗ್ರೆಸ್ ಮುಖಂಡ ಎಂ.ಕೋಟೆ ಶಿವಣ್ಣ ಉದ್ಘಾಟಿಸಲಿದ್ದಾರೆ. ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ವಿ.ಭೈರಿ, ಎಸ್.ಮಂಜುನಾಥ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನಟರಾಜ್, ನಾಗೇಂದ್ರ, ಅನಂತ್, ಲಕ್ಷ್ಮಣ್ ಮತ್ತಿತರರು ಉಪಸ್ಥಿತರಿದ್ದರು.

ಖಾಯಂಮಾತಿ ಸೇರಿ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮೈಸೂರಲ್ಲಿ

ಸರ್ಕಾರಿ ಪರವಾನಗಿ ಪಡೆದ ಭೂ ಮಾಪಕರ ಪ್ರತಿಭಟನೆ



ಖಾಯಂಮಾತಿ ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಪಡೆದ ಭೂ ಮಾಪಕರ ಸಂಘದವರು ಮೈಸೂರಿನಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಏ.9(ಬಿಎಲ್‌ಯು)–ಖಾಯಂಮಾತಿ, ಸೇವಾ ಭದ್ರತೆ ಸೇರಿದಂತೆ ತಮ್ಮ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಪಡೆದ ಭೂ ಮಾಪಕರ ಸಂಘದವರು ಮೈಸೂರಿನಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರು ಅರಮನೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಆರಂಭಿಸಿದ ಪ್ರತಿಭಟನಾಕಾರರು ಚಾಮರಾಜ ಒಡೆಯರ್ ಸರ್ಕಲ್, ಆಲ್ಬರ್ಟ್ ವಿಕ್ಟರ್ ರಸ್ತೆ, ಹಾರ್ಡಿಂಜ್ ವೃತ್ತ, ನಜರ್‌ಬಾದ್ ಪೊಲೀಸ್ ಠಾಣೆ ವೃತ್ತ ಹಾಗೂ ಬನ್ನೂರು ರಸ್ತೆ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿ ತಲುಪಿದರು.

ನೂರಾರು ಸಂಖ್ಯೆಯಲ್ಲಿದ್ದ ಭೂ ಮಾಪಕರು ತಮ್ಮನ್ನು ನಿರ್ಲಕ್ಷಿಸುತ್ತಿರುವ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಸರ್ಕಾರದಿಂದ ನೇಮಕಾತಿಯಾದ ಭೂ ಮಾಪಕರಿಗಿಂತ ಪರವಾನಗಿ ಪಡೆದ ಭೂ ಮಾಪಕರಾದ ನಾವು ಹೆಚ್ಚು ಶ್ರಮವಹಿಸಿ ಕೆಲಸ ಮಾಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಕೂಡಲೇ ಖಾಯಂಮಾತಿ ಮಾಡಬೇಕು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ಸೇವಾ ಭದ್ರತೆ ಮತ್ತು ವೃತ್ತಿ ಗೌರವ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ನಮ್ಮ ಬೇಡಿಕೆ ಈಡೇರಿಸುವ ತನಕ ಸರ್ಕಾರ ಹೊಸದಾಗಿ ಭೂ ಮಾಪಕರನ್ನು ನೇಮಕಾತಿ ಮಾಡಬಾರದು, ನಮ್ಮೆಲ್ಲಾ ಬೇಡಿಕೆ ಈಡೇರಿಸಿ ಆಧುನಿಕ ಜೀತ ಪದ್ಧತಿಯಿಂದ ಮುಕ್ತಿ ನೀಡಬೇಕು ಎಂದು ಒತ್ತಾಯಿಸಿದರು. ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ತಿರುಮಲೇಗೌಡ, ಉಪಾಧ್ಯಕ್ಷ ಪ್ರಸನ್ನಕುಮಾರ್, ಗೌರವಾಧ್ಯಕ್ಷ ಕೆ.ಪಿ.ಭಾರ್ಗವ, ಪ್ರಧಾನ ಕಾರ್ಯದರ್ಶಿ ಸಿದ್ದರಾಜು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಸರ್ಕಾರಿ ಶಾಲೆ ಮಕ್ಕಳಿಗೆ ರೈಲ್ವೆ ಇಲಾಖೆಯಿಂದ ವಿದ್ಯಾರ್ಥಿ ಸ್ನೇಹಿ ಪ್ರವಾಸ ಯೋಜನೆ ರೂಪಿಸಿ

ಕೇಂದ್ರ ಸಚಿವರಾದ ಹೆಚ್‌ಡಿಕೆ, ಸೋಮಣ್ಣರಿಗೆ ಎಂಎಲ್‌ಸಿ ವಿವೇಕಾನಂದ ಮನವಿ



ವಿದ್ಯಾರ್ಥಿ ಸ್ನೇಹಿ ಪ್ರವಾಸ ಯೋಜನೆ ರೂಪಿಸುವಂತೆ ಕೇಂದ್ರ ಸಚಿವರಿಗೆ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಮನವಿ ಸಲ್ಲಿಸಿದರು.

ಮೈಸೂರು, ಏ.9(ಜಿಎ)–ಸರ್ಕಾರಿ ಶೈಕ್ಷಣಿಕ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭಾರತೀಯ ರೈಲ್ವೆ ಇಲಾಖೆ ವತಿಯಿಂದ ವಿದ್ಯಾರ್ಥಿ ಸ್ನೇಹಿ ಪ್ರವಾಸ ಯೋಜನೆ ರೂಪಿಸುವಂತೆ ಕೇಂದ್ರ ಸಚಿವರಿಗೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಮನವಿ ಸಲ್ಲಿಸಿದರು.

ಕೇಂದ್ರದ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತು ರಾಜ್ಯ ರೈಲ್ವೆ ಸಚಿವ ವಿ.ಸೋಮಣ್ಣ ಅವರೊಂದಿಗೆ ಮೈಸೂರು ಮತ್ತು ಮಂಡ್ಯ ಭಾಗದ ರೈಲ್ವೆ ಸಂಚಾರ, ರೈಲ್ವೆ ನಿಲ್ದಾಣಗಳ ಅಭಿವೃದ್ಧಿ ಮತ್ತು ರೈಲ್ವೆ ಇಲಾಖೆಗೆ ಸಂಬಂಧಿಸಿದಂತೆ ಇತರೆ ಅಭಿವೃದ್ಧಿ ವಿಚಾರವಾಗಿ ಚರ್ಚಿಸಿ, ಕೆಲವು ಸ್ಥಳಗಳ ಪರಿಶೀಲನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಸರ್ಕಾರಿ ಶೈಕ್ಷಣಿಕ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭಾರತೀಯ ರೈಲ್ವೆ ಇಲಾಖೆಯ ವತಿಯಿಂದ ವಿದ್ಯಾರ್ಥಿ ಸ್ನೇಹಿ ಒಂದು ಪ್ರವಾಸ ಯೋಜನೆ ರೂಪಿಸುವಂತೆ ಸಚಿವರಿಗೆ ಮನವಿ ನೀಡಿದರು.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಭಾರತೀಯ ಸಂಸ್ಕೃತಿ, ಕಲೆ ಮತ್ತು ಪರಂಪರೆಯನ್ನು ಪರಿಚಯಿಸಿ, ಭಾವೈಕ್ಯತೆ ಮನೋಭಾವನೆಯನ್ನು ಗಟ್ಟಿಗೊಳಿಸುವ ಹಾಗೂ ಜ್ಞಾನವನ್ನು ವೃದ್ದಿಸುವ ಕಲಿಕೆಗೆ ಪೂರಕವಾಗಿರುವಂತೆ ಭಾರತೀಯ ರೈಲ್ವೆ ಇಲಾಖೆ ಸಂಪರ್ಕವಿರುವ ಪ್ರವಾಸಿ ಸ್ಥಳವನ್ನು ಉಚಿತವಾಗಿ ಪ್ರಯಾಣಿಸಿ ವೀಕ್ಷಿಸುವ ವಿದ್ಯಾರ್ಥಿ ಸ್ನೇಹಿ ಪ್ರವಾಸ ಯೋಜನೆಯನ್ನು ರೂಪಿಸುವಂತೆ ಕೋರಿದರು.

'ವಂದೇ ಮಾತರಂ' ಶಿಷ್ಟಾಚಾರ ಅಸಿಂಧು ಕೋರಿದ್ದ ಅರ್ಜಿ ವಜಾ



ಬೆಂಗಳೂರು, ಏಪ್ರಿಲ್ 9(ಕೆಎಂಶಿ)–'ವಂದೇ ಮಾತರಂ' ಗೀತೆಯಲ್ಲಿನ ಎಲ್ಲಾ ಆರು ಚರಣಗಳನ್ನು ಕಡ್ಡಾಯವಾಗಿ ಹಾಡಬೇಕೆಂಬ ಕೇಂದ್ರ ಗೃಹ ಇಲಾಖೆ ಶಿಷ್ಟಾಚಾರ ಮಾರ್ಗಸೂಚಿ ಅಸಿಂಧು ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾ ಮಾಡಿದೆ.

ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರನ್ನು ಒಳಗೊಂಡ ವಿಭಾಗೀಯ ಪೀಠ, ವಕೀಲ ಸೋಮಶೇಖರ್ ರಾಜವಂಶಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಈ ತೀರ್ಪು ನೀಡಿತು.

ಕೇಂದ್ರ ಸರ್ಕಾರದ ಪರ ವಕೀಲರು, ವಂದೇ ಮಾತರಂ ಗೀತೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಇಲಾಖೆ ಆದೇಶದಲ್ಲಿ ಹಾಡು ಹಾಡಬಹುದು ಎಂಬ ಪದ ಬಳಕೆ ಮಾಡಿರುವುದು, ಗೀತೆ ಹಾಡುವುದು ಕಡ್ಡಾಯವಲ್ಲ ಎಂಬುದನ್ನು ಸೂಚಿಸುತ್ತದೆ. ಇತ್ತೀಚೆಗೆ ಸುಪ್ರೀಂಕೋರ್ಟ್ ಸಹ ಇಂಥದ್ದೇ ಅರ್ಜಿಯನ್ನು ವಜಾಗೊಳಿಸಿದೆ ಎಂದು ನ್ಯಾಯಪೀಠದ ಗಮನಕ್ಕೆ ತಂದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ವಂದೇ ಮಾತರಂ ಗೀತೆಯನ್ನು ಯಾವುದೇ ಶಾಸನಬದ್ಧ ಚೌಕಟ್ಟಿನಲ್ಲಿ ಸೇರ್ಪಡೆ ಮಾಡಿಲ್ಲ. ಕೇಂದ್ರ ಸರ್ಕಾರದ ಆದೇಶದಲ್ಲಿ ಸಾಧ್ಯತೆ ಎಂಬ ಪದ ಬಳಕೆ ಮಾಡಿದ್ದು, ಅದು ಕಡ್ಡಾಯವಲ್ಲ. ರಾಷ್ಟ್ರ ಗೀತೆಯಂತೆ ವಂದೇ ಮಾತರಂ ಗಾಯನ ಕಡ್ಡಾಯವಲ್ಲ ಎಂಬುದಾಗಿ ತಿಳಿಸಿ, ಸುಪ್ರೀಂಕೋರ್ಟ್ ಆದೇಶ ಉಲ್ಲೇಖಿಸಿ ಅರ್ಜಿ ವಜಾಗೊಳಿಸಿತು.

ಮುಕ್ತ ವಿವಿ ಕುಲಸಚಿವ ದಲಿತರೆಂದು ಅಲ್ಲಿಂದಿಲ್ಲಿ, ಇಲ್ಲಿಂದಲ್ಲಿಗೆ ಅಲೆಸುತ್ತಿದ್ದಾರೆ

ಮಾಜಿ ಮೇಯರ್ ಪುರುಷೋತ್ತಮ್ ಆರೋಪ

ಮೈಸೂರು, ಏ.9(ಜಿಎ)–ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಸಚಿವ ಪ್ರೊ.ನವೀನ್ ಕುಮಾರ್ ದಲಿತ ಎಂಬ ಒಂದೇ ಕಾರಣಕ್ಕೆ ಪದೇ ಪದೇ ಅಲ್ಲಿಂದಿಲ್ಲಿ, ಇಲ್ಲಿಂದಲ್ಲಿ ಅಲೆದಾಡಿಸುತ್ತಿದ್ದಾರೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಮುಕ್ತ ವಿವಿಯಲ್ಲಿ ನಡೆದ ಒಂದು ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅವರ ಪಾತ್ರವಿಲ್ಲದಿದ್ದರೂ ಇವರನ್ನೇ ಹೊಣೆಗಾರರನ್ನಾಗಿಸಲು ಯತ್ನಿಸಿದುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನವೀನ್‌ಕುಮಾರ್ ಮುಕ್ತ ವಿವಿಗೆ ಬಂದು ಕೇವಲ 10 ತಿಂಗಳಷ್ಟೇ ಆಗಿತ್ತು. ಈ ವೇಳೆ ಮುಕ್ತ ವಿವಿಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವೊಂದರ ಹಿಂದೆ ಇವರ ಪಾತ್ರವಿಲ್ಲದಿದ್ದರೂ ಇವರನ್ನು ಬಲಿಪಶುವನ್ನಾಗಿಸುವ ಯತ್ನ ನಡೆದುದು ಸರಿಯಲ್ಲ. ದಲಿತ ಎಂಬ ಒಂದೇ ಕಾರಣಕ್ಕಾಗಿ ಇವರನ್ನು ಪದೇ ಪದೇ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಅಲೆದಾಡಿಸಲಾಗುತ್ತಿದೆ. ಇದೇ ಧೋರಣೆ ಮುಂದುವರಿದಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ವಿವಿ ಆಡಳಿತವನ್ನು ಸದಾ ಒಂದು ವರ್ಗವೇ ತನ್ನ ಕೈಯ್ಯಲ್ಲಿ ಇರಿಸಿಕೊಂಡಿದೆ. ನವೀನ್ ಕುಮಾರ್ ಅಂತಹವರ ಬಗ್ಗೆ ಏಕೆ ನಿರ್ಲಕ್ಷ್ಯ ಧೋರಣೆ ತಾಳಲಾಗುತ್ತಿದೆಯೋ ತಿಳಿಯದಾಗಿದೆ. ಅವರು ಮುಕ್ತ ವಿವಿಗೆ ಬಂದು ಕನಿಷ್ಠ 3–4 ವರ್ಷವಾದರೂ ಸೇವೆಯಲ್ಲಿರಬೇಕಾದುದು ನಿಯಮ, ಆದರೆ ಇಲ್ಲಿನ ಜಾತಿ ಆಡಳಿತ ಇದಕ್ಕೆ ಅಡ್ಡಿಯುಂಟು ಮಾಡುತ್ತಿದೆ ಎಂದು ಆರೋಪಿಸಿದರು.

ಮಾಜಿ ಸಂಸದ ಪ್ರತಾಪ್ ಸಿಂಹಗೆ ಖರ್ಗೆ ಬಗ್ಗೆ ಮಾತನಾಡುವ ನೈತಿಕತೆಯಿಲ್ಲ. ಪ್ರತಾಪ್‌ಸಿಂಹ ಸೋತು ಮನೆಯಲ್ಲಿದ್ದಾರೆ. ಆದರೂ ಪ್ರಚಾರಕ್ಕಾಗಿ ಆಗಾಗ್ಗೆ ಏನಾದರೂ ಮಾತನಾಡುತ್ತಿರುತ್ತಾರೆ. ಇದೇ ರೀತಿ ಇವರು ಕಾಂಗ್ರೆಸ್‌ನ ಹಿರಿಯ ನಾಯಕ, ಮುತ್ಸದ್ಧಿ ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಮಾತನಾಡಿದ್ದಾರೆ. ಈ ರೀತಿ ಮಾತನಾಡುವ ನೈತಿಕತೆ ತಮಗಿದೆಯೇ, ಖರ್ಗೆ ಅವರ ಬಗ್ಗೆ ತಮಗೆ ಅರಿವಿದೆಯೇ ಎಂದು ಮೊದಲು ಯೋಚಿಸಬೇಕಾಗಿತ್ತೆಂದು ಕಿಡಿಕಾರಿದರು. ಗೋಷ್ಠಿಯಲ್ಲಿ ಸೋಮಯ್ಯ, ವಿಷಕಂಠ, ಶಿವರಾಜು ಇದ್ದರು.


ಏ.12, ಜಿಲ್ಲಾ ಮಟ್ಟದ ಚೆಸ್ ಪಂದ್ಯಾವಳಿ



ಮೈಸೂರು, ಏ.9(ಜಿಎ)–ಮೈಸೂರು ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ಏ.12ರಂದು ಬೆಳಗ್ಗೆ 10ಗಂಟೆಗೆ ಬೃಂದಾವನ ಬಡಾವಣೆಯ ರೋಟರಿ ಬೃಂದಾವನ ಶಾಲೆ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಚೆಸ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಉಪಾಧ್ಯಕ್ಷ ಉಮೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲಿ ಸಾಧನೆ ಮಾಡಿದವರು ರಾಜ್ಯ ಮಟ್ಟದ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಅರ್ಹತೆ ಪಡೆಯುತ್ತಾರೆ. ಎಲ್ಲಾ ವರ್ಗ, ವಯೋಮಿತಿಯವರಿಗೆ ಅವಕಾಶವಿದ್ದು, ಪ್ರವೇಶ ಶುಲ್ಕವಿದೆ. ವಿಜೇತರಿಗೆ ಆಕರ್ಷಕ ನಗದು ಬಹುಮಾನ, ಶೀಲ್ಡ್, ಟ್ರೋಫಿ ಕೊಡಲಾಗುವುದು. ತಮ್ಮ ಸಂಸ್ಥೆ ಹೊಸ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಮೂಲಕ ಇಡೀ ರಾಜ್ಯದಲ್ಲೇ ಮೈಸೂರು ಚೆಸ್‌ನ ಪ್ರಮುಖ ಕೇಂದ್ರವಾಗುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ಶಾಲಾ ಕಾಲೇಜುಗಳಲ್ಲಿ ಚೆಸ್ ಜನಪ್ರಿಯಗೊಳಿಸಲು ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ವೇಣುಗೋಪಾಲ್, ಕಾರ್ತಿಕ್ ಉಡುಪ, ಅಭಿಲಾಶ್, ಭರತ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ. ಮೀನಾಕ್ಷಿ, 6.40 ಭಾವಗೀತೆ, 6.45 ಪ್ರಾಯೋಜಿತ ಕಾರ್ಯಕ್ರಮ –ಕೃಷಿ ಕ್ಷೇತ್ರದಲ್ಲಿ ಕೋರಮಂಡಲ್ ಅಂತಾರಾಷ್ಟ್ರೀಯ ನಿಗಮದ ಪಾತ್ರ. ಪ್ರಾಯೋಜಕರು–ಕೋರಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಅರೋಗ್ಯ–ವಿಶ್ವ ಪಾರ್ಕಿನ್ಸನ್ ಜಾಗೃತಿ ದಿನದ ಸಂದರ್ಭದಲ್ಲಿ ಪಾರ್ಕಿನ್ ಸನ್ ಲಕ್ಷಣಗಳು ಕಾರಣಗಳು ಹಾಗೂ ಚಿಕಿತ್ಸೆ ಕುರಿತು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ನ್ಯೂರಾಲಜಿಸ್ಟ್ ಡಾ. ಸುಚರಿತ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ ತೇಜಸ್ವಿನಿ ಗಿರೀಶ್, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಎಸ್. ಆನಂದ್–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ : 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಜಿ.ಎನ್. ಬಾಲಸುಬ್ರಹ್ಮಣ್ಯಂ – ಹಾಡುಗಾರಿಕೆ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕೃಷಿ ತರಬೇತಿ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ–ನಂಜನಗೂಡು ತಾಲ್ಲೂಕು, ಸುತ್ತೂರಿನ ಕೃಷಿ ವಿಜ್ಞಾನ ಕೇಂದ್ರದ ಪ್ರಧಾನ ವಿಜ್ಞಾನಿ ಡಾ. ಬಿ.ಎನ್. ಜ್ಞಾನೇಶ್ ಮತ್ತು ಟಿ. ನರಸೀಪುರ ತಾಲೂಕು ರಾಯರ ಹುಂಡಿಯ ಸಿ.ಎಸ್. ಅನುರಾಧ, ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಕನ್ನಡ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಎಸ್.ರಾಮನಾಥನ್ – ಹಾಡುಗಾರಿಕೆ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

ಇಂದಿನ ಪಂಚಾಂಗ

10.4.2026 ಶುಕ್ರವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಪಾಸಣಾ ಮತ್ತು ಸಲಹಾ ಶಿಬಿರ, ಕೊಲೆಸ್ಟ್ರಾಲ್ ಚಿಕಿತ್ಸಾ ಶಿಬಿರ, ಮಹಿಳೆಯರಲ್ಲಿ ಯೋನಿ ಸೋಂಕು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ** : ಜಾನಪದ ಜಾತ್ರೆ, ಮುಖ್ಯ ಅತಿಥಿಗಳು : ಕಾಲೇಜು ಪ್ರಿನ್ಸಿಪಾಲ್ ಪ್ರೊ. ವಿ. ಷಣ್ಮುಗಂ, ಜನಪದ ಗಾಯಕ ಡಾ ಅಮ್ಮ ರಾಮಚಂದ್ರ, ಸ್ಥಳ: ಕಾಲೇಜು ಒಳಾಂಗಣ, ಬೆಳಗ್ಗೆ 10.30ಕ್ಕೆ.
- **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು** : ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಜನ್ಮ ಶತಮಾನೋತ್ಸವ ವರ್ಷ, ಜಿ.ಎಸ್.ಎಸ್. ಕಾವ್ಯ ಸಂಭ್ರಮ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ವಿಮರ್ಶಕ ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಎಂ. ಶಾರದ, ಡಾ. ಜಿ. ಪ್ರಸಾದಮೂರ್ತಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.
- **ಸೇಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು** : ದಿ ಪವರ್ ಆಫ್ ಮಲ್ಟಿಡಿಸಿಪ್ಲಿನರಿ ನಾಲೆಡ್ಜ್ ಮತ್ತು ಇನ್ನೊವೇಷನ್ ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಎಂಡಿಇಎಸ್ ಕಾರ್ಯದರ್ಶಿ ಎಡ್ವರ್ಡ್ ವಿಲಿಯಂ ಸಾಲ್ಡಾನಾ, ಉಪಸ್ಥಿತರು : ಫಾ. ಎ. ನವೀನ್‌ಕುಮಾರ್, ಡಾ. ಡಿ.ಎಸ್. ಗುರು, ಸೆಬಿ ಮಾವಲಿ, ಪ್ರಿನ್ಸಿಪಾಲ್ ಡಾ. ಹೆಚ್.ಎನ್. ಚಂದ್ರಶೇಖರ ಸ್ಥಳ: ಕಾಲೇಜು ಆವರಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10ಕ್ಕೆ.
- **ವಿದ್ಯಾವರ್ಧಕ ಸಂಘ**: ವಿಶಿಷ್ಟ–2026 ಉದ್ಘಾಟನೆ, ಮುಖ್ಯ ಅತಿಥಿಗಳು : ಯು. ರಾಘವೇಂದ್ರ ರಾವ್, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲಾ ರಾಮಣ್ಣವರ್, ಸ್ಥಳ: ಸಾಹುಕಾರ್ ಚನ್ನಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಡಾ. ಬಿ.ಆರ್. ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ :** ಅಂಬೇಡ್ಕರ್ ಮತ್ತು ಮಹಿಳಾ ಪ್ರಗತಿ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಸಂಸ್ಕೃತಿ ಚಿಂತಕ ಡಾ. ದು. ಸರಸ್ವತಿ, ಮುಖ್ಯ ಅತಿಥಿಗಳು : ಡಾ. ಬಿ.ಆರ್. ಪ್ರತಿಭಾ, ಅಧ್ಯಕ್ಷತೆ : ಪ್ರೊ. ಎಸ್. ನರೇಂದ್ರಕುಮಾರ್, ಸ್ಥಳ: ಮಹಾರಾಣಿ ಮಹಿಳಾ ಕಲಾ ಕಾಲೇಜು, ಮಧ್ಯಾಹ್ನ 2 ರಿಂದ.
- **ಪಿಆರ್‌ಕೆ ಫೌಂಡೇಷನ್** : ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಮಹಿಳಾ ಸಾಧಕರಿಗೆ ಸನ್ಮಾನ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡರಾದ ಡಾ. ಹೇಮಾ ನಂದೀಶ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು, ಪಿಆರ್‌ಕೆ ಫೌಂಡೇಷನ್ ಅಧ್ಯಕ್ಷ ಅಯ್ಯಪ್ಪ, ಸ್ಥಳ: ಪಂಚವಟಿ ಹೋಟೆಲ್ ಸಭಾಂಗಣ, ಚಾಮುಂಡಿಪುರಂ, ಸಂಜೆ 5.30ಕ್ಕೆ.
- **ಗಾನಭಾರತೀ** : ವಿದುಷಿ ಮೈಸೂರು ಎಸ್. ರಾಜಲಕ್ಷ್ಮಿ ಅವರಿಂದ ವೀಣಾ ವಾದನ, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.
- **ವ್ಯವಸ್ಥಾಪಕರು** : ಭಗಿನಿ ಸಂಗೀತೋತ್ಸವ–2026, ವಿದುಷಿ ಡಾ. ಜಿ. ಬೇಬಿ ಶ್ರೀರಾಮ್ (ಚೆನ್ನೈ) ಅವರಿಂದ ಗಾಯನ, ವಿದುಷಿ ಸಿ.ವಿ. ಶ್ರುತಿ–ವಯೋಲಿನ್, ವಿದ್ವಾನ್ ಜಯಚಂದ್ರರಾವ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಪದ್ಮಜಾ ಶ್ರೀನಿವಾಸ ಸಭಾಂಗಣ, ಬಿಎಸ್‌ಎಸ್ ವಿದ್ಯೋದಯ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.
- **ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್** : ಶಯನೋತ್ಸವ, ಒಳಗುಡಿ ಉತ್ಸವ, ಸಂಜೆ 6.30 ರಿಂದ ಡಾ. ಶಾಲಿನಿ ಅವರಿಂದ ಹರಿಕಥೆ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ.

ಜೆಎಸ್‌ಎಸ್ ಬದ್ರಿ ಪಿಯು ಕಾಲೇಜಿಗೆ ಶೇ.100 ಫಲಿತಾಂಶ


ದಿಗಂತ್ ಆರ್.


ಅನನ್ಯಾ ಜೆ


ಭೂಮಿಕಾ ಆರ್.


ವೈಭವಿ ಎಂ.ಎಂ.

ಮೈಸೂರು,ಏ.9–ಮೈಸೂರಿನ ಜೆಎಸ್ಎಸ್ ಬದ್ರಿ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯ ಪಿಸಿಎಂಬಿ, ಪಿಸಿಎಂಸಿ ಮತ್ತು ಬಿಎಎಸ್ಸಿ ವಿಭಾಗದಲ್ಲಿ ಈ ಬಾರಿಯೂ ಶೇ.100 ಫಲಿತಾಂಶ ಪಡೆಯುವ ಮೂಲಕ ತನ್ನ ಶ್ರೇಷ್ಠತೆಯ ಸ್ಥಿರ ದಾಖಲೆಯನ್ನು ಕಾಯ್ದುಕೊಂಡಿದೆ.

ಪರೀಕ್ಷೆಗೆ ಹಾಜರಾಗಿದ್ದ 65 ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದು, ಅವರಲ್ಲಿ 21 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 44 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಪಿಸಿಎಂಬಿ ವಿಭಾಗದಲ್ಲಿ 16 ವಿದ್ಯಾರ್ಥಿಗಳು ಹಾಜರಾಗಿದ್ದು, 6 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 10 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಪಿಸಿಎಂಸಿ ವಿಭಾಗದಲ್ಲಿ ನಾಲ್ವರು ವಿದ್ಯಾರ್ಥಿಗಳು ಹಾಜರಾಗಿದ್ದು, ಎಲ್ಲಾ ನಾಲ್ವರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಬಿಎಎಸ್ಸಿ ವಿಭಾಗದಲ್ಲಿ 45 ವಿದ್ಯಾರ್ಥಿಗಳು ಹಾಜರಾಗಿದ್ದು, 15 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಮತ್ತು 30 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಕಾಲೇಜಿನ ಆರ್.ದಿಗಂತ್ (ಶೇ.96.83) ಅಂಕ ಗಳಿಸಿದ್ದಾರೆ. ಬ್ಯುಸಿನೆಸ್ ಸ್ಟಡೀಸ್–100, ಸ್ಟಾಟಿಸ್ಟಿಕ್ಸ್‌ನಲ್ಲಿ 100 ಪಡೆದರೆ, ಜೆ.ಅನನ್ಯ 516(ಶೇ.86), ಸಂಸ್ಕೃತದಲ್ಲಿ 100, ಆರ್.ಭೂಮಿಕಾ 591(ಶೇ.98.50), ಕನ್ನಡ–100, ಬ್ಯುಸಿನೆಸ್ ಸ್ಟಡೀಸ್–100, ಅಕೌಂಟೆನ್ಸಿ–100, ಎಂ.ಎಂ.ವೈಭವಿ 512(ಶೇ.85.33) ಬ್ಯುಸಿನೆಸ್ ಸ್ಟಡೀಸ್‌ನಲ್ಲಿ 100 ಅಂಕ ಗಳಿಸಿದ್ದಾರೆ.

ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಂಟಾಗಬಾರದು; ಸ್ವಚ್ಛತೆಗೆ ಆದ್ಯತೆ ನೀಡಿ

ಅಧಿಕಾರಿಗಳಿಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸೂಚನೆ


ಮೈಸೂರು ಪಾಲಿಕೆ ಕಚೇರಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಏ.9–ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ವಾರದಲ್ಲಿ ಎರಡು ದಿನಗಳಿಗೊಮ್ಮೆಯಾದರೂ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರು ಮಹಾನಗರಪಾಲಿಕೆಯಲ್ಲಿ ಗುರುವಾರ ಪಾಲಿಕೆ, ಹೂಟಗಳ್ಳಿ ನಗರ ಸಭೆ, ರಮ್ಮನಹಳ್ಳಿ, ಕಡಕೊಳ, ಬೋಗಾದಿ, ಶ್ರೀರಾಂಪುರ ಪಟ್ಟಣ ಪಂಚಾಯಿತಿ ಅಧಿಕಾರಿಗಳ ಸಭೆ ನಡೆಸಿದ ಅವರು, ಹೇಳ ಉಂಡುವಾಡಿ ಯೋಜನೆ ಕಾಮಗಾರಿ ಮುಗಿಯುವವರೆಗೆ ಕಬಿನಿ, ಕೆಆರ್‌ಎಸ್, ಮೇಳಾಪುರದಿಂದ ನೀರು ಒದಗಿಸಬೇಕು. ಅಗತ್ಯ ಇರುವ ಕಡೆಗೆ ಟ್ಯಾಂಕರ್ ಮೂಲಕ ಪೂರೈಸಬೇಕು. ನೀರು ಪೂರೈಕೆಯಲ್ಲಿ ಸಮಸ್ಯೆಗಳಿದ್ದರೆ ತಕ್ಷಣ ಪರಿಹರಿಸಿಕೊಳ್ಳಬೇಕು. ಸರ್ದಾರ್ ವಲ್ಲಭಭಾಯ್ ಪಟೇಲ್ ನಗರ, ವಸಂತನಗರ, ವೆಂಕಟೇಶ್ವರ ಬಡಾವಣೆ, ಮಾನಸನಗರ ಹಾಗೂ ಹೊಂದಿಕೊಂಡಂತಿರುವ ಬಡಾವಣೆಗಳಿಗೂ ಸಮರ್ಪಕವಾಗಿ ನೀರು ಕಲ್ಪಿಸಲು ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಶ್ರೀನಗರದ ಡಿ ಬ್ಲಾಕ್‌ನ ಬೋರ್‌ವೆಲ್ ಬತ್ತಿ ಹೋಗಿರುವುದಾಗಿ ಸಾರ್ವಜನಿಕರು ನಿರಂತರವಾಗಿ ದೂರುತ್ತಿದ್ದಾರೆ. ಶ್ರೀರಾಂಪುರ, ಬೋಗಾದಿ ಕಡೆಯೂ ನೀರಿನ ಸಮಸ್ಯೆ ಆಗಿದೆ. ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ನಿಗಾ ವಹಿಸುವುದು ನಮ್ಮೆಲ್ಲರ ಕರ್ತವ್ಯ. ವಿಜಯನಗರ 4ನೇ ಹಂತಕ್ಕೆ ಹಂಚಿಕೆಯಾಗಿರುವಂತೆ ದಿನವಹಿ 4 ಎಂಎಲ್‌ಡಿ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಬೇಕು ಎಂದರು.

ಇದಕ್ಕೆ ಧ್ವನಿಗೂಡಿಸಿದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ, ಇದಕ್ಕಾಗಿಯೇ ಪಾಲಿಕೆ ಅಧೀಕ್ಷಕ ಇಂಜಿನಿಯರ್ ನೇತೃತ್ವದ ಸಮಿತಿ ರಚಿಸಲಾಗಿದ್ದು, ಖುದ್ದು ಪರಿಶೀಲನೆ ನಡೆಸಲಿದೆ. ಮಳೆ ಅಭಾವದ ಮುನ್ಸೂಚನೆ ಇರುವುದರಿಂದ ಜೂನ್–ಜುಲೈನಲ್ಲಿ ಸಮಸ್ಯೆ ಉಂಟಾಗಬಹುದು. ಹಾಗಾಗಿ ಬೋರ್‌ವೆಲ್ ತೆಗೆಸುವುದು, ರೀಡ್ರಿಲ್ ಮಾಡಿಸುವುದರ ಜೊತೆಗೆ ಟ್ಯಾಂಕರ್ ಮೂಲಕ ನೀರು ಪೂರೈಸಲು ಅನುಮತಿ ನೀಡಲಾಗಿದೆ. ಕಬಿನಿ ಯೋಜನೆ ಆರಂಭಿಸುವ ಸಂದರ್ಭದಲ್ಲಿ ಒಪ್ಪಂದ ಮಾಡಿಕೊಳ್ಳುವಾಗ 40 ಎಂಎಲ್‌ಡಿ ನೀರು ನಗರಪಾಲಿಕೆಗೆ ಹಾಗೂ 20 ಎಂಎಲ್‌ಡಿ ಇತರ ಸ್ಥಳೀಯ ಸಂಸ್ಥೆಗಳಿಗೆ ಎಂದು ನೀರು ಹಂಚಿಕೆ ಮಾಡಿಕೊಳ್ಳಲಾಗಿದೆ. ಅದರಂತೆ ನಡೆದುಕೊಳ್ಳಬೇಕು ಎಂದು ಸೂಚಿಸಿದರು.

ಸ್ವಚ್ಛತೆಗೆ ಆದ್ಯತೆ ನೀಡಬೇಕು: ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಕೆಹೆಚ್‌ಬಿ ಬಡಾವಣೆ, ಬೆಲವಾಡಿ, ಕೂರ್ಗಳ್ಳಿ ವಿಜಯನಗರ 4ನೇ ಹಂತ, ಹಿನಕಲ್ ಪ್ರದೇಶದಲ್ಲಿ ಸಾಕಷ್ಟು ಕಸ ಬಿದ್ದಿದೆ. ನಗರದ ಹೊರವಲಯದಲ್ಲಿ ರಾಶಿ ಕಸ ಬಿದ್ದಿರುವುದರಿಂದ ನಾವು ತಲೆತಗ್ಗಿಸುವಂತಾಗಿದೆ. ಹೂಟಗಳ್ಳಿ ನಗರಸಭೆ, ಬೋಗಾದಿ, ಶ್ರೀರಾಂಪುರ, ಕಡಕೊಳ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 15 ದಿನಗಳಿಗೊಮ್ಮೆ ಅಭಿಯಾನ ನಡೆಸಿ, ಸ್ವಚ್ಛತೆಗೆ ಆದ್ಯತೆ ನೀಡಬೇಕು. ವರ್ಷಗಳಿಂದ ಬಿದ್ದಿರುವ ತ್ಯಾಜ್ಯವನ್ನು ಇನ್ನು 15 ದಿನಗಳಲ್ಲಿ ವಿಲೇವಾರಿ ಮಾಡಬೇಕು. ನಿರ್ಲಕ್ಷಿಸಿದರೆ ಸಂಬಂಧಪಟ್ಟವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು. ಹೊಸಹುಂಡಿ, ಉತ್ತನಹಳ್ಳಿ ಮಾರ್ಗದಲ್ಲಿ ಕಸ ಸುರಿಯುವವರ ವಾಹನಗಳನ್ನು ವಶಪಡಿಸಿಕೊಂಡು, ಪ್ರಕರಣ ದಾಖಲಿಸಿ. ಚಾಮುಂಡಿಬೆಟ್ಟ ತಪ್ಪಲಿನ ಜೆಎಸ್‌ಎಸ್ ಆಯುರ್ವೇದ ಕಾಲೇಜು ರಸ್ತೆಯಲ್ಲೂ ಇದೇ ಪರಿಸ್ಥಿತಿ ಇದೆ. ಕಸ ಹಾಕುವವರಿಗೆ ದಂಡ ವಿಧಿಸುವಂತೆ ಹೇಳಿದರೂ ಈವರೆಗೆ ಆ ಕೆಲಸ ಮಾಡಿಲ್ಲ ಎಂದು ತರಾಟೆ ತೆಗೆದುಕೊಂಡರು.

ಸಭೆಯಲ್ಲಿ ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಪಾಲಿಕೆ ಅಧೀಕ್ಷಕ ಇಂಜಿನಿಯರ್ ಮಂಜುನಾಥ್, ಹೂಟಗಳ್ಳಿ ನಗರ ಸಭೆ ಪೌರಾಯುಕ್ತ ಬಿ.ಎನ್.ಚಂದ್ರಶೇಖರ್, ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿಗಳಾದ ಹೆಚ್.ಎಂ.ಸುರೇಶ್, ಸುಜಯ್, ಮಹೇಶ್ ಹೆಚ್.ಆರ್. ದೀಪಾ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಪಾಲಕ ಇಂಜಿನಿಯರ್ ಮೊಹಮ್ಮದ್ ಆಸಿಫ್ ಇಕ್ಬಾಲ್, ಪಾಲಿಕೆ ಒಳಚರಂಡಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಎ.ಎಂ.ಮೊಹಮ್ಮದ್ ಮುಸ್ತಫಾ, ಕಾರ್ಯಪಾಲಕ ಇಂಜಿನಿಯರ್ ನಾಗರಾಜು ಮತ್ತಿತರರು ಹಾಜರಿದ್ದರು.

> "ನಗರ ಪಾಲಿಕೆ ಹಾಗೂ ಇತರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಂಚಿಕೆಯಾದ ಪ್ರಮಾಣದ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಬೇಕು. ತುಂಬಾ ಸಮಸ್ಯೆ ಉಂಟಾದರೆ ಅಂತಹ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು. ಅಗತ್ಯವಿದ್ದರೆ ಹೆಚ್ಚುವರಿ ಟ್ಯಾಂಕರ್‌ಗಳನ್ನು ಖರೀದಿಸಲು ಕ್ರಮ ವಹಿಸಬೇಕು.
> –ಜಿ.ಟಿ.ದೇವೇಗೌಡರು, ಶಾಸಕರು

> "ಬೃಹತ್ ಮೈಸೂರು ಮಹಾನಗರ ಪಾಲಿಕೆ ಎಂದು ಅಧಿಕೃತ ಆದೇಶ ಈವರೆಗೆ ಪ್ರಕಟವಾಗದಿದ್ದರೂ ಅಧಿಕಾರಿಗಳು ಅನುಷ್ಠಾನವಾಗಿದೆ ಎಂಬ ಭಾವನೆಯಿಂದಲೇ ಕಾರ್ಯ ನಿರ್ವಹಿಸಬೇಕು. ನಗರಪಾಲಿಕೆ ಅಧಿಕಾರಿಗಳು ಸ್ಥಳೀಯ ಸಂಸ್ಥೆಗಳ ಸಮಸ್ಯೆಗಳನ್ನು ಅರಿತು ಕೆಲಸ ಮಾಡಬೇಕು.
> –ಜಿ.ಲಕ್ಷ್ಮೀಕಾಂತ್ ರೆಡ್ಡಿ, ಜಿಲ್ಲಾಧಿಕಾರಿ

ಡಾ.ಶಿವಕುಮಾರ ಸ್ವಾಮೀಜಿ ಸ್ಮರಣೆ: ಸಾಧಕರಿಗೆ ಸನ್ಮಾನ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಡಾ.ಶಿವಕುಮಾರ ಸ್ವಾಮೀಜಿ ಸ್ಮರಣೆ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಡಾ.ಗುರುಬಸವರಾಜು, ಪ್ರಭಾಮಣಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು,ಏ.9(ಜಿಎ)–ಜಯಶಂಕರ್ ಸ್ನೇಹ ಬಳಗದ ವತಿಯಿಂದ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಡಾ.ಶಿವಕುಮಾರ ಸ್ವಾಮೀಜಿ ಸ್ಮರಣೆ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿನ ಸೇವೆಗಾಗಿ ಡಾ.ಗುರುಬಸವರಾಜು ಹಾಗೂ ವೃದ್ಧಾಶ್ರಮ ನಡೆಸುತ್ತಿರುವ ಪ್ರಭಾಮಣಿ ಅವರನ್ನು ಅಭಿನಂದಿಲಾಯಿತು.

ಈ ವೇಳೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಡಾ.ಶಿವಕುಮಾರ ಸ್ವಾಮೀಜಿ ಅವರನ್ನು ನಡೆದಾಡುವ ದೇವರು ಎಂದು ಕರೆಯುವುದು ಅವರು 111 ವರ್ಷ ಬದುಕಿದ್ದರು ಎಂಬ ಕಾರಣಕ್ಕಲ್ಲ. ಅವರಿಗಿಂತಲೂ ಹೆಚ್ಚು ವರ್ಷ ಬದುಕಿದವರು ಹಲವರಿದ್ದಾರೆ. ಆದರೆ ಶಿವಕುಮಾರ್ ಸ್ವಾಮೀಜಿ ಎಲ್ಲರಂತೆ ತಮಗಾಗಿ ಬದುಕದೇ ಇಡೀ ಸಮಾಜದ ಉದ್ಧಾರಕ್ಕಾಗಿ ಬದುಕುತ್ತ ಅನ್ನ, ಅಕ್ಷರ, ಆಶ್ರಯ ದಾಸೋಹ ನೀಡಿದ ಕಾರಣ ಇಂದಿಗೂ ಆ ರೀತಿ ಕರೆಯಲ್ಪಡುತ್ತಿದ್ದಾರೆ ಎಂದರು.

ಸ್ವಾತಂತ್ರ್ಯ ಪೂರ್ವದಲ್ಲಿಯೇ ಮಠದ ಪೀಠಾಧಿಪತಿಗಳಾದ ಅವರು ಅಂದಿನ ಭಾರತದಲ್ಲಿದ್ದ ಜ್ವಲಂತ ಸಮಸ್ಯೆ ಅರಿತಿದ್ದರು. ಹೀಗಾಗಿಯೇ ಶಿಕ್ಷಣ ನೀಡಿದರು. ಕಾಯಕ, ಶ್ರಮ ಸಂಸ್ಕೃತಿ ಮೈಗೂಡಿಸಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರಿಪಿಸಿದರು. ಹೀಗಾಗಿ ಇವರು ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ನಡುವೆ ಸಾಮ್ಯತೆಯಿದೆ ಎಂದರು. ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಪ್ರೊ.ಶಿವರಾಜಪ್ಪ, ಮ.ಗು.ಸದಾನಂದಯ್ಯ ಮತ್ತಿತರರು ಉಪಸ್ಥಿತರಿದ್ದರು.

ಅಭಿನಂದನೆ...


ಮೈಸೂರು ತಾಲೂಕು ಜಯಪುರ ಹೋಬಳಿಯ ಮಾರ್ಬಳ್ಳಿಹುಂಡಿ ಗ್ರಾಮದಲ್ಲಿ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ 119ನೇ ಜನ್ಮದಿನಾಚರಣೆ ಆಚರಿಸಲಾಯಿತು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಗ್ರಾಮಸ್ಥರು ಅಭಿನಂದಿಸಿದರು. ಗ್ರಾಮದ ಯಜಮಾನರು, ಮುಖಂಡರು ಉಪಸ್ಥಿತರಿದ್ದರು.

ಮೈಸೂರು ನಗರ ಜೆಡಿಎಸ್ ಮಹಿಳಾ ಅಧ್ಯಕ್ಷೆಯಾಗಿ ಹೇಮಾವತಿ ನೇಮಕ



ಮೈಸೂರು: ಮೈಸೂರು ನಗರ (ಜಿಲ್ಲಾ) ಜನತಾದಳ (ಜಾತ್ಯತೀತ) ಮಹಿಳಾ ವಿಭಾಗದ ಅಧ್ಯಕ್ಷರಾಗಿ ಮೈಸೂರು ನಗರ (ಜಿಲ್ಲಾ) ಜನತಾದಳ (ಜಾತ್ಯತೀತ)ದ ಅಧ್ಯಕ್ಷ ಎಸ್.ಬಿ.ಎಂ. ಮಂಜು ಅವರ ಶಿಫಾರಸ್ಸಿನನ್ವಯ ರಾಜ್ಯಾಧ್ಯಕ್ಷೆ ರಶ್ಮಿ ರಾಮೇಗೌಡ ನೇಮಕ ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಅಂಬೇಡ್ಕರ್ ಕಪ್' ಕ್ರಿಕೆಟ್, ಥ್ರೋಬಾಲ್ ಪಂದ್ಯಾವಳಿಗೆ ಚಾಲನೆ


'ಅಂಬೇಡ್ಕರ್ ಕಪ್' ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಗೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಅವರು ಗುರುವಾರ ಚಾಲನೆ ನೀಡಿದರು.

ಮೈಸೂರು,ಏ.9(ಎಂಕೆ)– ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನ ರಾಂ ಅವರ ಜಯಂತಿ ಅಂಗವಾಗಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೈಸೂರು ಜಿಲ್ಲೆಯ ವಿವಿಧ ಇಲಾಖೆಗಳ ಸರ್ಕಾರಿ ನೌಕರರಿಗಾಗಿ ಆಯೋಜಿಸಿರುವ 2 ದಿನಗಳ 'ಅಂಬೇಡ್ಕರ್ ಕಪ್' ಟೆನಿಸ್ ಬಾಲ್ ಕ್ರಿಕೆಟ್, ಥ್ರೋ ಬಾಲ್ ಪಂದ್ಯಾವಳಿಗೆ ಗುರುವಾರ ಚಾಲನೆ ನೀಡಲಾಯಿತು.

ಮೈಸೂರು ವಿವಿ ಮಾನಸ ಗಂಗೋತ್ರಿಯ ಕಾಫಿ ಬೋರ್ಡ್ ಮೈದಾನ ಹಾಗೂ ಗೌತಮ್ ಹಾಸ್ಟೆಲ್ ಮೈದಾನದಲ್ಲಿ ಆಯೋಜಿಸಿದ್ದ ಪಂದ್ಯಾವಳಿಯ ಮೊದಲ ಪಂದ್ಯಕ್ಕೆ ಟಾಸ್ ಹಾಕುವ ಮೂಲಕ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಮೊದಲ ಬಾರಿಗೆ ಮೈಸೂರು ಜಿಲ್ಲೆಯಲ್ಲಿ ಅಂಬೇಡ್ಕರ್ ಕಪ್ ಪಂದ್ಯಾವಳಿ ಆಯೋಜನೆ ಮಾಡಿರುವುದು ಶ್ಲಾಘನೀಯ. ಪ್ರತಿ ದಿನ ಕೆಲಸದ ಒತ್ತಡದಲ್ಲಿರುವ ಸರ್ಕಾರಿ ಅಧಿಕಾರಿ–ಸಿಬ್ಬಂದಿಯ ರಿಲ್ಯಾಕ್ಸ್‌ಗಾಗಿ ಇಂತಹ ಪಂದ್ಯಾವಳಿಗಳು ಹೆಚ್ಚೆಚ್ಚು ನಡೆಯುತ್ತಿರಬೇಕು. ಎರಡು ದಿನದ ಕ್ರೀಡೆಯ ನಂತರ ಮತ್ತೆ ಹೊಸ ಉತ್ಸಾಹದೊಂದಿಗೆ ಸಾರ್ವಜನಿಕರ ಕೆಲಸದಲ್ಲಿ ತೊಡಗಿಕೊಳ್ಳಲು ಅನುಕೂಲವಾಗುತ್ತದೆ. ಕ್ರಿಕೆಟ್ ಪಂದ್ಯಾವಳಿಗೆ ವಿವಿಧ ಇಲಾಖೆಯ 26 ತಂಡಗಳು ಹಾಗೂ ಮಹಿಳೆಯರ ವಿಭಾಗದ ಥ್ರೋಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿರುವ 4 ತಂಡಗಳು ಉತ್ಸಾಹದಿಂದ ಭಾಗವಹಿಸಿವೆ ಎಂದರು. ಅಲ್ಲದೆ ಉಭಯ ತಂಡಗಳಿಗೆ ಶುಭಕೋರಿದರು.

ಗಣಿ ಮತ್ತು ಭೂ ಮಾಪನ ಇಲಾಖೆ ಜಂಟಿ ನಿರ್ದೇಶಕಿ ಡಾ.ಲಕ್ಷ್ಮಮ್ಮ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಸಹಾಯಕ ನಿರ್ದೇಶಕ ಜನಾರ್ಧನ್, ಸಮಾಜ ಕಲ್ಯಾಣ ಇಲಾಖೆ ಸಿಬ್ಬಂದಿಗಳಾದ ಅನಿಲ್, ಶಿವನಾಗ್, ರವಿಚಂದ್ರ, ಶ್ರೀನಿವಾಸ್ ಪ್ರಸಾದ್, ನಂಜುಂಡಸ್ವಾಮಿ, ಶಿವಕುಮಾರ್, ವಾರ್ಡನ್ ಮಾಂತೇಶ್ ಮಾಟೋಳಿ ಮತ್ತಿತರರು ಉಪಸ್ಥಿತರಿದ್ದರು.


ಯೋಗೇಶ್‌ಗೌಡ ಕೊಲೆ ಪ್ರಕರಣ: ಏ.15ಕ್ಕೆ ತೀರ್ಪು ಮುಂದೂಡಿಕೆ

ಧಾರವಾಡ: ಕಳೆದ 8 ವರ್ಷಗಳಿಂದ ರಾಜ್ಯ ರಾಜಕೀಯದಲ್ಲಿ ಭಾರೀ ಸಂಚಲನ ಮೂಡಿಸಿದ್ದ ಜಿಪಂ ಮಾಜಿ ಸದಸ್ಯ ಯೋಗೇಶ್‌ಗೌಡ ಕೊಲೆ ಪ್ರಕರಣದ ಅಂತಿಮ ತೀರ್ಪು ಮುಂದೂಡಿಕೆಯಾಗಿದೆ. ಗುರುವಾರ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಂತಿಮ ತೀರ್ಪು ನೀಡಲಿದೆ ಎನ್ನಲಾಗಿತ್ತಾದರೂ, ಬಳಿಕ ತೀರ್ಪನ್ನು ಏಪ್ರಿಲ್ 15ಕ್ಕೆ ಮುಂದೂಡಿದೆ. ಆದೇಶ ಪ್ರಕಟವಾಗುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ ಎಲ್ಲಾ 21 ಆರೋಪಿಗಳು ನ್ಯಾಯಾಲಯಕ್ಕೆ ಇಂದು ಹಾಜರಾಗಿದ್ದರು.

ಕೋರ್ಟ್‌ಗೆ ತೆರಳುವ ಮೊದಲು ಪ್ರತಿಕ್ರಿಯಿಸಿದ ವಿನಯ್ ಕುಲಕರ್ಣಿ, ದೇವರ ಮೇಲೆ ಭರವಸೆ ಇದೆ. ಸತ್ಯಕ್ಕೆ ಯಾವತ್ತೂ ಜಯ ಸಿಗಲಿದೆ. ಕೋರ್ಟ್ ಮೇಲೆ ಭರವಸೆ ಇದೆ. ಪ್ರಕರಣ ನ್ಯಾಯಾಲಯದಲ್ಲಿ ಇರುವಾಗ ಮಾಧ್ಯಮದ ಮುಂದೆ ಮಾತನಾಡುವುದು ಸರಿಯಲ್ಲ. ಕೋರ್ಟ್ ತೀರ್ಪು ಪ್ರಕಟಿಸಲಿ ಎಂದು ತಿಳಿಸಿದ್ದರು.

ಧಾರವಾಡದ ಜಿಪಂ ಮಾಜಿ ಸದಸ್ಯ ಯೋಗೇಶ್‌ಗೌಡ ಅವರನ್ನು 2016ರ ಜೂ.15ರಂದು ಭೀಕರವಾಗಿ ಕೊಚ್ಚಿ ಹತ್ಯೆ ಮಾಡಲಾಗಿತ್ತು. ಈ ಸಂಬಂಧ ಧಾರವಾಡದ ಉಪನಗರ ಪೊಲೀಸರು ತನಿಖೆ ನಡೆಸಿ, ಆಸ್ತಿ ವಿವಾದದ ಹಿನ್ನೆಲೆಯಲ್ಲಿ ಈ ಕೊಲೆ ನಡೆದಿದೆ ಎಂದು ಆರು ಮಂದಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ರೈಲ್ವೆ ನೇಮಕಾತಿ ಪರೀಕ್ಷೆಗಳ ಇನ್ನು ಕನ್ನಡದಲ್ಲೇ ಬರೆಯಬಹುದು: ಸಚಿವ ಸೋಮಣ್ಣ ಮಾಹಿತಿ


ವಿ.ಸೋಮಣ್ಣ

ಬೆಂಗಳೂರು, ಏ.9(ಕೆಎಂಶಿ)– ರೈಲ್ವೆ ನೇಮಕಾತಿ ಪರೀಕ್ಷೆಗಳನ್ನು ಕರ್ನಾಟಕದವರು ಇನ್ನು ಮುಂದೆ ಕನ್ನಡದಲ್ಲೇ ಬರೆಯಲು ಕೇಂದ್ರ ಸರ್ಕಾರ ಅವಕಾಶ ಮಾಡಿಕೊಟ್ಟಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಇಂದಿಲ್ಲಿ ತಿಳಿಸಿದ್ದಾರೆ.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಜೊತೆಗೂಡಿ ನಗರದ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಮೈಸೂರುವರೆಗೆ ಪರಿವೀಕ್ಷಣೆಗೆ ತೆರಳುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ನಡೆದ ಇಲಾಖಾ ನೇಮಕಾತಿ ಪರೀಕ್ಷೆ ಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಮಾಡಿಕೊಡಲಾಗಿದೆ ಎಂದರು.

ಇಲಾಖಾ ಬಡ್ತಿಯಲ್ಲೂ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸಬೇಕೆಂಬ ವಿಚಾರ ಚರ್ಚೆ ಹಂತದಲ್ಲಿದೆ. ರಾಜ್ಯದ 51 ರೈಲು ನಿಲ್ದಾಣಗಳನ್ನು 1900 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುವುದು. ಈಗಾಗಲೇ 23 ನಿಲ್ದಾಣಗಳ ಕಾಮಗಾರಿ ಕೈಗೊಳ್ಳಲು ಸಿದ್ಧತೆ ನಡೆದಿದೆ. ಬೆಂಗಳೂರು–ಮೈಸೂರು ರೈಲು ಪ್ರಯಾಣಿಕರಿಗೆ ಅಗತ್ಯ ಸೌಕರ್ಯ ಕಲ್ಪಿಸುವ ಉದ್ದೇಶದಿಂದ ನಾವು ಎರಡೂ ನಗರಗಳ ನಡುವೆ ರೈಲಿನಲ್ಲೇ ಪ್ರಯಾಣಿಸುತ್ತಿದ್ದೇವೆ. ಇದರಿಂದ ಪ್ರಯಾಣಿಕರ ಸಮಸ್ಯೆ ಅರಿತು, ಯಾವ ಸೌಕರ್ಯ ಕಲ್ಪಿಸಬೇಕೆಂಬ ಕುರಿತು ತೀರ್ಮಾನಿಸಲಾಗುವುದು ಎಂದರು.

ಚಲನಚಿತ್ರಗಳು ಪ್ರೇಕ್ಷಕರ ತಪ್ಪು ದಾರಿಗೆಳೆಯುವಂತಿರಬಾರದು

'ಸಿನೆರಮಾ' 8ನೇ ರಾಷ್ಟ್ರ ಮಟ್ಟದ ಕಿರುಚಿತ್ರೋತ್ಸವದಲ್ಲಿ ಹಿರಿಯ ನಟ ಶ್ರೀನಿವಾಸ ಪ್ರಭು ಕಿವಿಮಾತು


ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂನಲ್ಲಿ ಗುರುವಾರ 'ಸಿನೆರಮಾ' 8ನೇ ರಾಷ್ಟ್ರ ಮಟ್ಟದ ಕಿರುಚಿತ್ರೋತ್ಸವ ನಡೆಯಿತು.

ಮೈಸೂರು, ಏ.9(ಎಂಕೆ)– ಪ್ರೇಕ್ಷಕರ ಮನಸ್ಸನ್ನು ಪರಿವರ್ತಿಸುವ ಶಕ್ತಿ ಚಲನಚಿತ್ರಗಳಿಗಿದ್ದು, ಸದ್ಬಳಕೆ ಮಾಡಿಕೊಳ್ಳಬೇಕೇ ವಿನಃ ಪ್ರೇಕ್ಷಕರನ್ನು ತಪ್ಪು ದಾರಿಗೆ ನಿರ್ದೇಶಕರು ದೂಡಬಾರದು ಎಂದು ಹಿರಿಯ ನಟ ಶ್ರೀನಿವಾಸ್ ಪ್ರಭು ಹೇಳಿದರು.

ಮೈಸೂರಿನ ಬೋಗಾದಿಯಲ್ಲಿರುವ ಅಮೃತ ವಿಶ್ವವಿದ್ಯಾಪೀಠಂನಲ್ಲಿ 'ಸಿನೆರಮಾ' 8ನೇ ರಾಷ್ಟ್ರ ಮಟ್ಟದ ಕಿರುಚಿತ್ರೋತ್ಸವ ಉದ್ಘಾಟಿಸಿ ಮಾತನಾಡಿ, ಸಿನಿಮಾ ಕ್ಷೇತ್ರದಲ್ಲಿ ಸಾಧನೆ ಸುಲಭವಲ್ಲ. ಪ್ರತಿ ಹೆಜ್ಜೆಗಳು ಸವಾಲುಗಳಿಂದ ತುಂಬಿರಲಿದೆ. ಅವುಗಳನ್ನು ಎದುರಿಸಲು ಧೈರ್ಯ, ಸಹನೆ ಮತ್ತು ಧನಾತ್ಮಕ ಮನಸ್ಥಿತಿ ಇರಬೇಕು ಎಂದು ಸಲಹೆ ನೀಡಿದರು.

ನಾಟಕಗಳಲ್ಲಿ ರಿಟೇಕ್‌ಗಳಿಲ್ಲ. ನಟನೆಯಲ್ಲಾಗುವ ತಪ್ಪುಗಳಿಗೂ ಅವಕಾಶವಿಲ್ಲ. ಹಾಗಾಗಿ ರಂಗಭೂಮಿ ನಟನನ್ನು ನೈಜ ಪರೀಕ್ಷೆಗೆ ತೆಗೆದುಕೊಳ್ಳುತ್ತದೆ. ಆದರೆ, ಸಿನಿಮಾಗಳಲ್ಲಿ ರಿಟೇಕ್‌ಗಳಿಗೆ ಅವಕಾಶವಿದ್ದು ನಿರ್ದೇಶಕರೇ ಸಾರಥಿಯಾಗಿರುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಸಿನಿಮಾ ಪ್ರೇಕ್ಷಕರನ್ನು ಆಕರ್ಷಿಸಲು ಟಿವಿ ಶೋಗಳು ವಿಕಸನಗೊಂಡವು ಎಂದರು.

ಯುವ ಚಲನಚಿತ್ರಕಾರರು ತಿಳುವಳಿಕೆ, ಜಾಣ್ಮೆ ಮತ್ತು ಎಚ್ಚರಿಕೆಯಿಂದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಅದೇ ರೀತಿ ಯುವ ನಿರ್ದೇಶಕರು ಕೂಡ ಪ್ರೇಕ್ಷಕರನ್ನು ತಮ್ಮ ಸ್ನೇಹಿತರಂತೆ ಭಾವಿಸಿ ಸಲಹೆ ನೀಡಬೇಕೇ ಹೊರತು ವಿನಾ ಕಾರಣ ಉಪದೇಶ ಮಾಡಬಾರದು ಎಂದು ಅವರು ಅಭಿಪ್ರಾಯಪಟ್ಟರು.

ಬಳಿಕ ಸ್ಪರ್ಧೆಗೆ ದೇಶಾದ್ಯಂತ ವಿವಿಧ ಭಾಷೆಗಳ ಸುಮಾರು 80 ಕಿರುಚಿತ್ರಗಳು ಸಲ್ಲಿಕೆಯಾಗಿದ್ದವು. ಆಯ್ಕೆಯಾದ ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು. ಹಾಗೆಯೇ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್ ನಿರ್ದೇಶಕ ಬ್ರಹ್ಮಚಾರಿ ಅನಂತಾನಂದ ಚೈತನ್ಯ, ಪ್ರಾಂಶುಪಾಲ ಡಾ.ಜಿ.ರವೀಂದ್ರನಾಥ್, ಅಸೋಸಿಯೇಟ್ ಡೀನ್ ಪ್ರೊ.ಶೇಖರ್ ಬಾಬು, ಶೈಕ್ಷಣಿಕ ಸಂಯೋಜಕಿ ಡಾ.ರೇಖಾ ಭಟ್, ದೃಶ್ಯ ಸಂವಹನ ವಿಭಾಗದ ಮುಖ್ಯಸ್ಥೆ ಡಾ.ಕೆ.ರಮ್ಯಾ ಇನ್ನಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಭಾರತಕ್ಕೆ 15 ಸಾವಿರ ಟನ್ LPG ಹೊತ್ತು ತಂದ ಗ್ರೀನ್ ಆಶಾ ನೌಕೆ



ಮುಂಬೈ: ಪಶ್ಚಿಮ ಏಷ್ಯಾ ಸಂಘರ್ಷದ ಮಧ್ಯೆ ಭಾರತದ ಧ್ವಜ ಹೊಂದಿರುವ 15,400 ಟನ್ ಎಲ್‌ಪಿಜಿ ಹೊತ್ತ ಟ್ಯಾಂಕರ್ ಹಾರ್ಮುಜ್ ಜಲಸಂಧಿಯನ್ನು ದಾಟಿ ಸುರಕ್ಷಿತವಾಗಿ ಬಂದಿರುವುದಾಗಿ ನವಿ ಮುಂಬೈನ ಜವಾಹರಲಾಲ್ ನೆಹರು ಬಂದರು ಪ್ರಾಧಿಕಾರ ತಿಳಿಸಿದೆ. ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಮತ್ತು ಕದನ ವಿರಾಮದ ಹಿನ್ನೆಲೆ ಜವಾಹರಲಾಲ್ ನೆಹರು ಬಂದರು ಪ್ರಾಧಿಕಾರವು ಈ ಬೆಳವಣಿಗೆಯನ್ನು ಗಮನಾರ್ಹ ಎಂದು ಬಣ್ಣಿಸಿದೆ. ಇಂದು, ಹಾರ್ಮುಜ್ ಜಲಸಂಧಿಯನ್ನು ದಾಟಿ ಭಾರತದ ಧ್ವಜ ಹೊತ್ತ ಎಲ್‌ಪಿಜಿ ಹಡಗಾದ ಗ್ರೀನ್ ಆಶಾ ಜವಾಹರಲಾಲ್ ನೆಹರು ಬಂದರನ್ನ ತಲುಪಿದೆ. ಇದನ್ನು ನಾವು ಹೆಮ್ಮೆಯಿಂದ ಸ್ವಾಗತಿಸಿದ್ದೇವೆ ಎಂದು ಜವಾ ಹರಲಾಲ್ ನೆಹರು ಬಂದರು ಪ್ರಾಧಿಕಾರ ತಿಳಿಸಿದೆ. ಯುದ್ಧ ಪ್ರಾರಂಭವಾದ ನಂತರ ಜವಾಹರಲಾಲ್ ನೆಹರು ಬಂದರು ತಲುಪಿದ ಮೊದಲ ಹಡಗು ಇದಾಗಿದೆ. ಹಡಗು ಮತ್ತು ಸಿಬ್ಬಂದಿ ಸುರಕ್ಷಿತರಾಗಿ ದ್ದಾರೆ. ಹಡಗು 15,400 ಟನ್ ಎಲ್‌ಪಿಜಿ ತಂದಿದೆ ಎಂದು ತಿಳಿಸಿದೆ.

ಪಶ್ಚಿಮ ಏಷ್ಯಾ ಕದನ; ಆಹಾರ ಬೆಲೆ ಹೆಚ್ಚಳ: ಐಎಂಎಫ್ ಎಚ್ಚರಿಕೆ



ವಾಷಿಂಗ್ಟನ್: ಇರಾನ್ ಮತ್ತು ಅಮೆರಿಕ ಯುದ್ಧ ಸೇರಿದಂತೆ ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಉಂಟಾಗಿರುವ ಬಿಕ್ಕಟ್ಟಿನ ಪರಿಣಾಮ ಜಾಗತಿಕವಾಗಿ ಆಹಾರದ ಬೆಲೆ ಏರಿಕೆಯಾಗಲಿದೆ ಎಂದು ಅಂತರ ರಾಷ್ಟ್ರೀಯ ಹಣಕಾಸು ನಿಧಿ, ವಿಶ್ವ ಬ್ಯಾಂಕ್ ಮತ್ತು ವಿಶ್ವ ಆಹಾರ ಕಾರ್ಯಕ್ರಮ ಸಂಸ್ಥೆಗಳು ಎಚ್ಚರಿಕೆ ನೀಡಿವೆ. ಪಶ್ಚಿಮ ಏಷ್ಯಾ ಯುದ್ಧವು ತನ್ನ ವ್ಯಾಪ್ತಿಯನ್ನು ಮೀರಿ ಜಗತ್ತಿನ ಸಾಮಾನ್ಯ ಜನರ ಮೇಲೂ ಗಂಭೀರ ಪರಿಣಾಮ ಬೀರುತ್ತಿದೆ. ಇಂಧನ ಮಾರುಕಟ್ಟೆಗಳಲ್ಲಿ ಉಂಟಾದ ಸಮಸ್ಯೆ ಅದರಲ್ಲಿ ಒಂದಾಗಿದೆ. ತೈಲ, ಗ್ಯಾಸ್, ರಸಗೊಬ್ಬರಗಳ ಬೆಲೆ ಏರಿಕೆಯಾಗಿದೆ, ಜತೆಗೆ ಅವುಗಳ ಸಾಗಾಣಿಕೆಗೂ ತೊಂದರೆಯಾಗಿದೆ. ಇದು ನೇರವಾಗಿ ಆಹಾರ ಪದಾರ್ಥಗಳ ಬೆಲೆ ಏರಿಕೆಗೆ ಕಾರಣವಾಗಲಿದೆ ಜಾಗತಿಕ ಸಂಸ್ಥೆಗಳ ಜಂಟಿ ಹೇಳಿಕೆ ತಿಳಿಸಿದೆ.

ಈ ಬೆಲೆ ಏರಿಕೆ ಹೊರೆಯು ದೇಶದ ಜನಸಂಖ್ಯೆಯ ಮೇಲೆ ಬೀಳಲಿದೆ. ಅದರಲ್ಲೂ ಕಡಿಮೆ ಆದಾಯ, ಹೆಚ್ಚ ಆಮದಿನ ಮೇಲೆ ಅಲಂಬಿತವಾಗಿರುವ ದೇಶಗಳ ಆರ್ಥಿಕತೆ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಮುಖ್ಯವಾಗಿ ಹಣಕಾಸಿನ ಸಂಪನ್ಮೂಲಗಳು ಸೀಮಿತವಾಗಿರುವ ಮತ್ತು ಸಾಲದ ಹೊರೆ ಈಗಾಗಲೇ ಹೆಚ್ಚಾಗಿರುವ ದೇಶಗಳಲ್ಲಿ ಇದು ತೀವ್ರ ಪರಿಣಾಮ ಬೀರಲಿದೆ. ಮೂರು ಸಂಸ್ಥೆಗಳು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿ ತೊಂದರೆಗೀಡಾಗುವ ದೇಶಗಳಿಗೆ ನೆರವಿನ ಹಸ್ತ ಚಾಚಲಿದೆ ಎಂದು ತಿಳಿಸಿದೆ.


ಸಿಲಿಂಡರ್ ಸ್ಫೋಟ: ಗರ್ಭಿಣಿ ಸೇರಿ 10 ಜನರ ಸ್ಥಿತಿ ಗಂಭೀರ



ಹರಿಯಾಣ: ಜಿಲ್ಲೆಯ ಸಲೆಂಪುರ್‌ದ ಮನೆಯೊಂದರಲ್ಲಿ ಇಂದು ಬೆಳಗ್ಗೆ ಎಲ್‌ಪಿಜಿ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ನಾಲ್ವರು ಮಕ್ಕಳು ಮತ್ತು ಇಬ್ಬರು ಮಹಿಳೆಯರು ಸೇರಿದಂತೆ ಹತ್ತು ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. ಸ್ಫೋಟದ ತೀವ್ರತೆಗೆ ಮನೆಗೋಡೆ ಛಿದ್ರವಾಗಿದೆ. ಲಿಂಟಲ್ ಕೂಡ ಬಿರುಕು ಬಿಟ್ಟಿದೆ. ಸ್ಫೋಟದ ಶಬ್ಧದಿಂದ ಸ್ಥಳೀಯರು ಬೆಚ್ಚಿ ಬಿದ್ದಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ಬಂದ ರಕ್ಷಣಾ ಸಿಬ್ಬಂದಿ ಗಾಯಾಳುಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಿದರು.

ಅನಿಲವನ್ನು ವರ್ಗಾಯಿಸುತ್ತಿದ್ದಾಗ ಸ್ಫೋಟ: ಮನೆಯೊಳಗಿನ ದೊಡ್ಡ ಸಿಲಿಂಡರ್‌ನಿಂದ ಸಣ್ಣ ಸಿಲಿಂಡರ್‌ಗೆ ಅನಿಲವನ್ನು ವರ್ಗಾಯಿಸಲಾಗುತ್ತಿತ್ತು. ಈ ವೇಳೆ ಇದ್ದಕ್ಕಿದ್ದಂತೆ, ಪ್ರಬಲವಾದ ಸ್ಫೋಟ ಸಂಭವಿಸಿದೆ. ಹತ್ತಿರದಲ್ಲೇ ಒಲೆ ಇತ್ತು. ಘಟನೆಗೆ ಬೆಂಕಿಯ ಸ್ಪರ್ಶ ಕಾರಣ ಕೂಡ ಇರಬಹುದು. ಸ್ಫೋಟದಿಂದಾಗಿ ಮನೆಯ ಮುಕ್ಕಾಲು ಭಾಗದ ನಡುವಿನ ಎರಡು ಗೋಡೆಗಳು ಕುಸಿದು ಬಿದ್ದಿವೆ. ಲಿಂಟೆಲ್ ಮತ್ತು ಪಕ್ಕದ ಗೋಡೆಗಳು ಸಹ ಬಿರುಕು ಬಿಟ್ಟಿವೆ. ಕೋಣೆಯಲ್ಲಿ ಎರಡು ತುಂಬಿದ ಸಿಲಿಂಡರ್‌ಗಳನ್ನು ಸಂಗ್ರಹಿಸಿಡಲಾಗಿತ್ತು. ಅದೃಷ್ಟವಶಾತ್ ಅವುಗಳು ಸ್ಫೋಟಗೊಂಡಿಲ್ಲ. ಇಲ್ಲದಿದ್ದರೆ, ಹಾನಿ ಇನ್ನಷ್ಟು ವಿನಾಶಕಾರಿಯಾಗುತಿತ್ತು ಎಂದು ಪ್ರತ್ಯಕ್ಷದರ್ಶಿಯೊಬ್ಬರು ಘಟನೆಯ ಭೀಕರತೆಯನ್ನು ವಿವರಿಸಿದ್ದಾರೆ.

ಇಸ್ರೇಲಿ ದಾಳಿಯಲ್ಲಿ ಹಿಜ್ಬುಲ್ಲಾ ಮುಖ್ಯಸ್ಥ ಖಾಸಿಮ್ ಹತ್ಯೆ



ಇಸ್ರೇಲ್: ಇರಾನ್ ಮತ್ತು ಅಮೆರಿಕ ನಡುವೆ 14 ದಿನಗಳ ಕದನ ವಿರಾಮ ಘೋಷಣೆಯಾಗಿರುವ ನಡುವೆ, ಇಸ್ರೇಲ್ ಹಿಜ್ಬುಲ್ಲಾ ಮುಖ್ಯಸ್ಥ ನಯೀಮ್ ಖಾಸಿಮ್‌ನನ್ನು ಕೊಂದಿರುವುದಾಗಿ ಹೇಳಿಕೊಂಡಿದೆ. ಯುದ್ಧದ ಹೊರತಾಗಿ, ಇಸ್ರೇಲ್ ಲೆಬನಾನ್‌ನಲ್ಲಿ ಹಿಜ್ಬೊಲ್ಲಾ ಮೇಲೆ ಭಾರೀ ದಾಳಿ ನಡೆಸುತ್ತಿದೆ. ಈ ದಾಳಿಗಳಲ್ಲಿ ಖಾಸಿಮ್ ಸಾವನ್ನಪ್ಪಿದ್ದಾನೆ ಎಂದು ಶಂಕಿಸಲಾಗಿದೆ.ಬೈರುತ್‌ನಲ್ಲಿ ನಡೆದ ಗುರಿ ದಾಳಿಯಲ್ಲಿ ಖಾಸಿಮ್ ಸಾವನ್ನಪ್ಪಿದ್ದಾನೆ. ಈ ದಾಳಿಗಳಲ್ಲಿ 250ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಫೆ.28ರಂದು ಭುಗಿಲೆದ್ದ ಈ ಸಂಘರ್ಷವು ಅದೇ ದಿನ ನಡೆದ ಬೃಹತ್ ವಾಯುದಾಳಿಯಲ್ಲಿ ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಖಮೇನಿ ಸಾವನ್ನಪ್ಪಿದ್ದರು. ಅವರ ಮಗ ಮೊಜ್ತಬಾ ಖಮೇನಿಯನ್ನು ಮಾರ್ಚ್ 8ರಂದು ಸುಪ್ರೀಂ ಲೀಡರ್ ಎಂದು ಘೋಷಿಸಲಾಯಿತು.

ಇದರ ನಂತರ ಇರಾನ್‌ನ ರಾಷ್ಟ್ರೀಯ ಭದ್ರತಾ ಮಂಡಳಿಯ ಮುಖ್ಯಸ್ಥ ಅಲಿ ಲಾರಿಜಾನಿ ನಿಧನರಾದರು. ಐಆರ್‌ಜಿಸಿ ಕಮಾಂಡರ್–ಇನ್–ಚೀಫ್ ಮೊಹಮ್ಮದ್ ಪಕ್‌ಪೂರ್ ಕೂಡ ಹತ್ಯೆಗೀಡಾದರು.

ಧಾರ್ಮಿಕ ಕಾರ್ಯಕ್ರಮದಲ್ಲಿ ಆಹಾರ ಸೇವಿಸಿ 60ಕ್ಕೂ ಹೆಚ್ಚು ಮಂದಿ ಅಸ್ವಸ್ಥ



ಗುಜರಾತ್: ರಾಜ್ಯದ ಅಹಮದಾಬಾದ್ ಜಿಲ್ಲೆಯ ರಾಜ್‌ಪುರ ಗ್ರಾಮದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಆಹಾರ ಸೇವಿಸಿ 60ಕ್ಕೂ ಹೆಚ್ಚು ಜನರು ಅಸ್ವಸ್ಥರಾಗಿದ್ದಾರೆ. ಎಲ್ಲರನ್ನೂ ತಕ್ಷಣ ಹತ್ತಿರದ ಆಸ್ಪತ್ರೆ ಮತ್ತು ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಇತರ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ವರದಿಗಳ ಪ್ರಕಾರ, ರಾಜ್‌ಪುರದ ಒಂದು ಕುಟುಂಬ ಧಾರ್ಮಿಕ ಕಾರ್ಯಕ್ರಮವನ್ನು ಆಯೋಜಿಸಿತ್ತು. ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಮತ್ತು ಸಂಬಂಧಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅತಿಥಿಗಳಿಗೆ ಸೇವ್–ಖಮ್ನಿ ಖಾದ್ಯ ಬಡಿಸಲಾಗಿದೆ. ಇದನ್ನು ಸೇವಿಸಿದ ಸ್ವಲ್ಪ ಸಮಯದ ನಂತರ ಜನರಿಗೆ ಹೊಟ್ಟೆ ನೋವು, ವಾಕರಿಕೆ, ವಾಂತಿ ಮತ್ತು ಅತಿಸಾರ ಉಂಟಾಗಿದೆ. ಕೆಲವೇ ಹೊತ್ತಲ್ಲಿ 60ಕ್ಕೂ ಹೆಚ್ಚು ಜನರಲ್ಲಿ ಈ ರೀತಿಯ ಲಕ್ಷಣ ಕಾಣಲಾರಂಭಿಸಿತು. ಎಲ್ಲಾ ರೋಗಿಗಳನ್ನು 108 ಆಂಬ್ಯುಲೆನ್ಸ್ ಮತ್ತು ಖಾಸಗಿ ವಾಹನಗಳನ್ನು ಬಳಸಿಕೊಂಡು ಆಸ್ಪತ್ರೆಗೆ ಸೇರಿಸಲಾಗಿದೆ.

ರಾಜ್‌ಪುರ ಗ್ರಾಮದಿಂದ ಸುಮಾರು 40ರಿಂದ 50 ಆಹಾರ ವಿಷದ ಪ್ರಕರಣಗಳ ರೋಗಿಗಳನ್ನು ನಮ್ಮ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಎಲ್ಲರಿಗೂ ತಕ್ಷಣದ ಚಿಕಿತ್ಸೆ ನೀಡಲಾಯಿತು. ಎಲ್ಲಾ ರೋಗಿಗಳ ಸ್ಥಿತಿ ಸಂಪೂರ್ಣವಾಗಿ ನಿಯಂತ್ರಣದಲ್ಲಿದೆ. ಯಾರೂ ಗಂಭೀರ ಸ್ಥಿತಿಯಲ್ಲಿಲ್ಲ" ಎಂದು ಭಾಗ್ಯೋದಯ ಆಸ್ಪತ್ರೆಯ ಡಾ.ಕೆವಿನ್ ನಾಯ್ ತಿಳಿಸಿದರು.

ಮಂಡ್ಯ ಜಿಲ್ಲೆ ರೈಲ್ವೆ ನಿಲ್ದಾಣಗಳಲ್ಲಿ ವಿಂಡೋ ಟ್ರೇಲಿಂಗ್ ಪರಿವೀಕ್ಷಣೆ

● ಕೇಂದ್ರ ಸಚಿವರಾದ ಹೆಚ್ಡಿಕೆ, ಸೋಮಣ್ಣ ಭಾಗಿ ● ಕನಕಪುರ-ಮಳವಳ್ಳಿ ರೈಲ್ವೆ ಯೋಜನೆಗೆ ಸಿಎಂ ಅಡ್ಡಗಾಲು: ಸೋಮಣ್ಣ ಕಿಡಿ

ಮಂಡ್ಯ, ಏ.9– ಕೇಂದ್ರದ ಭಾರೀ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಕೇಂದ್ರ ರಾಜ್ಯ ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ ನಗರದ ರೈಲ್ವೆ ನಿಲ್ದಾಣ ಸೇರಿದಂತೆ ಜಿಲ್ಲೆಯ ವಿವಿಧ ರೈಲ್ವೆ ನಿಲ್ದಾಣಗಳಲ್ಲಿ ವಿಂಡೋ ಟ್ರೇಲಿಂಗ್ ಪರಿವೀಕ್ಷಣೆ ನಡೆಸಿದರು.

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಆರಂಭಗೊಂಡ ಪರಿವೀಕ್ಷಣೆ ಬೆಂಗಳೂರು ದಕ್ಷಿಣ ಜಿಲ್ಲೆ ಮೂಲಕ ಮಂಡ್ಯ ಪ್ರವೇಶಿಸಿತು. ಜಿಲ್ಲೆಯ ನಿಡಘಟ್ಟ, ಮದ್ದೂರು, ಹನಕೆರೆ ರೈಲ್ವೆ ನಿಲ್ದಾಣಗಳ ಹಳಿಗಳ ಪರಿಶೀಲನೆ ಬಳಿಕ ಮಂಡ್ಯ ನಗರದ ರೈಲ್ವೆ ನಿಲ್ದಾಣ ಪ್ರವೇಶಿಸಿದರು.

ಮಂಡ್ಯ ರೈಲ್ವೆ ನಿಲ್ದಾಣದಲ್ಲಿ ಸುಮಾರು 15 ನಿಮಿಷಗಳ ಕಾಲ ರೈಲ್ವೆ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ ಉಭಯ ಸಚಿವರು, ನಿಲ್ದಾಣದ ಸಮಸ್ಯೆ, ಪ್ರಮುಖ ರೈಲುಗಳು, ಪ್ರಮುಖ ರೈಲುಗಳ ಪೈಕಿ ಯಾವ ನಿಲ್ದಾಣದಲ್ಲಿ ರೈಲುಗಳು ನಿಲ್ಲಬೇಕಾದ ಅವಶ್ಯಕತೆಗಳ ಬಗ್ಗೆ ಮಾಹಿತಿ ಪಡೆದರು.



ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ, ವಿ.ಸೋಮಣ್ಣ ಮಂಡ್ಯದ ರೈಲ್ವೆ ನಿಲ್ದಾಣಗಳನ್ನು ಪರಿವೀಕ್ಷಣೆ ನಡೆಸಿದರು.

ನಂತರ ಜಿಲ್ಲೆಯ ಯಲಿಯೂರು, ಬ್ಯಾಡರಹಳ್ಳಿ, ಪಾಂಡವಪುರ, ಶ್ರೀರಂಗಪಟ್ಟಣ ರೈಲ್ವೆ ನಿಲ್ದಾಣಗಳನ್ನು ಪರಿಶೀಲಿಸಿ ನಂತರ ಮೈಸೂರಿಗೆ ತೆರಳಿದರು. ಮಾರ್ಗದುದ್ದಕ್ಕೂ ಕೆಳ ಹಾಗೂ ಮೇಲ್ಸುತುವೆಗಳ ನಿರ್ಮಾಣ, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಖುದ್ದು ವೀಕ್ಷಣೆ ಹಾಗೂ ಪರಿಶೀಲನೆ ನಡೆಸಿದರು.

ಮಂಡ್ಯ ರೈಲ್ವೆ ನಿಲ್ದಾಣದಲ್ಲಿ ಕೇಂದ್ರ ರಾಜ್ಯ ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ ಮಾತನಾಡಿ, ಬೆಳಗ್ಗೆ 10 ಗಂಟೆಯಿಂದ ಬೆಂಗಳೂರಿನಿಂದ ಮೈಸೂರಿನವರೆಗೆ ರೈಲ್ವೆ ಪರಿವೀಕ್ಷಣೆ ನಡೆಸಲಾಗುತ್ತಿದೆ. ನಗರದಲ್ಲಿ ಯಾವ್ಯಾವ ರೈಲುಗಳು ನಿಲ್ಲಬೇಕೆಂಬ ಮಾಹಿತಿ ಪಡೆದುಕೊಂಡಿದ್ದೇವೆ. ಇಲ್ಲಿ ರೈಲ್ವೆ ಇಲಾಖೆಯ ಹೊಸ ಯೋಜನೆಗಳ ತರುವ ಬಗ್ಗೆಯೂ ಅಧಿಕಾರಗಳೊಂದಿಗೆ ಚರ್ಚಿಸಿದ್ದೇನೆ. ಮಂಡ್ಯ ರೈಲ್ವೆ ನಿಲ್ದಾಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರು 25 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ ಎಂದರು.

ಬೆಂಗಳೂರಿನಿಂದ ಮೈಸೂರಿನವರೆಗೆ ರೈಲ್ವೆ ನಿಲ್ದಾಣಗಳ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಲು ಕೇಂದ್ರ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್, ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ನಾನು ಚರ್ಚೆ ನಡೆಸಿದ್ದು, ಸಾರ್ವಜನಿಕರ ಸಮಸ್ಯೆಗಳನ್ನು ಶೀಘ್ರ ಬಗೆಹರಿಸಲಾಗುವುದು. ಇಲ್ಲಿನ ಸಮಸ್ಯೆಗಳ ಬಗ್ಗೆ ಮೈಸೂರಿನಲ್ಲಿ ಖುದ್ದು ಮೇಲಧಿಕಾರಿಗಳ ಸಭೆ ನಡೆಸಿ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತೇವೆ ಎಂದು ಸ್ಪಷ್ಟಪಡಿಸಿದರು.

ಹಲವು ವರ್ಷಗಳ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಲು ನಾನು, ಕುಮಾರಸ್ವಾಮಿ, ಯದುವೀರ್ ಅವರು ಒಗ್ಗಟ್ಟಾಗಿ ಚರ್ಚೆ ನಡೆಸಿ ಬಗೆಹರಿಸಲು ಕ್ರಮ ವಹಿಸಲಾಗುವುದು. ಮಹತ್ವದ ಬೆಂಗಳೂರು–ಕನಕಪುರ–ಮಳವಳ್ಳಿ–ಕೊಳ್ಳೇಗಾಲ–ಮಲೆಮಹದೇಶ್ವರಬೆಟ್ಟದ ರೈಲ್ವೆ ಮಾರ್ಗದ ಕಾಮಗಾರಿ ಕೈಗೆತ್ತಿಕೊಳ್ಳಲು ನಾನು ಸಿದ್ಧನಿದ್ದೇನೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಮಗಾರಿಗೆ ಹಣ ಇಲ್ಲ ಎಂದು ತಡೆಯೊಡ್ಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸಂಸದ ಯದುವೀರ್, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಮಾಜಿ ಶಾಸಕ ಕೆಟಿ.ಶ್ರೀಕಂಠೇಗೌಡ, ಮುಖಂಡರಾದ ಡಿ.ರಮೇಶ್, ಬಿ.ಆರ್.ರಾಮಚಂದ್ರು, ಎಸ್.ಸಚ್ಚಿದಾನಂದ ಸೇರಿದಂತೆ ರೈಲ್ವೆ ಇಲಾಖೆಯ ಉನ್ನತಮಟ್ಟದ ಅಧಿಕಾರಿಗಳು ಹಾಗೂ ಜೆಡಿಎಸ್–ಬಿಜೆಪಿ ಪಕ್ಷದ ಹಲವರಿದ್ದರು.

ಪರಿವೀಕ್ಷಣೆ ನಡೆಸಿದ್ದು ವಿಶೇಷ ಅನುಭವ: ಹೆಚ್ಡಿಕೆ

ಮಂಡ್ಯ: ಐದು ಗಂಟೆಗಳ ಕಾಲ ಬೆಂಗಳೂರಿನಿಂದ ಮೈಸೂರಿಗೆ ವಿಶೇಷ ರೈಲಿನಲ್ಲಿ ಪ್ರಯಾಣ ಮಾಡಿ ಆ ಮಾರ್ಗದಲ್ಲಿ ನಡೆಯುತ್ತಿರುವ ರೈಲ್ವೆ ಇಲಾಖೆಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಗಳನ್ನು ಪರಿವೀಕ್ಷಣೆ ನಡೆಸಿದ್ದು ನನಗೆ ವಿಶೇಷ ಅನುಭವ ನೀಡಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ರೈಲು ಪ್ರಯಾಣದ ನಡುವೆ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ನಾನು ಮೊದಲು ಹೆಚ್ಚಾಗಿ ರೈಲಿನಲ್ಲಿಯೇ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೆ. ಕೆಲ ವರ್ಷಗಳಿಂದ ರೈಲಿನಲ್ಲಿ ಪ್ರಯಾಣಿಸುವ ಅವಕಾಶ ಸಿಕ್ಕಿರಲಿಲ್ಲ. ಈಗ ಮತ್ತೊಮ್ಮೆ ರೈಲಿನಲ್ಲಿ ಪ್ರಯಾಣಿಸಿ ಜನರ ಸಮಸ್ಯೆ ಆಲಿಸುವ ಅವಕಾಶ ಸಿಕ್ಕಿರುವುದು ಸಂತೋಷ ತಂದಿದೆ. ಕೇಂದ್ರ ಸಚಿವನಾಗಿ ರೈಲಿನಲ್ಲಿ ಸಂಚರಿಸಿದ್ದು, ಆ ಸಂದರ್ಭದಲ್ಲಿ ಜನತೆಯನ್ನು ಮಾರ್ಗದುದ್ದಕ್ಕೂ ಭೇಟಿಯಾಗಿದ್ದು ರೋಮಾಂಚನ ಉಂಟು ಮಾಡಿದೆ ಎಂದರು.

ಸಾಮೂಹಿಕ ಸಾರಿಗೆ ವ್ಯವಸ್ಥೆಗಳಲ್ಲಿ ರೈಲು ಸಾರಿಗೆಗೆ ಅತ್ಯಂತ ಮಹತ್ವವಿದೆ. ಪ್ರಯಾಣಿಕರ ಸಂಚಾರ ಮಾತ್ರವಲ್ಲದೆ ವಾಣಿಜ್ಯ ದೃಷ್ಟಿಯಿಂದಲೂ ರೈಲು ವ್ಯವಸ್ಥೆ ದೇಶದ ಬೆನ್ನೆಲುಬಾಗಿದೆ. ಮುಖ್ಯವಾಗಿ ಬೆಂಗಳೂರು ಮತ್ತು ಮೈಸೂರು ನಗರಗಳ ನಡುವೆ ರೈಲು ಸಂಚಾರ ಈಗಾಗಲೇ ಉತ್ತಮವಾಗಿದ್ದು, ಅದನ್ನು ಮತ್ತಷ್ಟು ಉತ್ತಮಗೊಳಿಸುವ ನಿಟ್ಟಿನಲ್ಲಿ ನಾನು ಮತ್ತು ಸೋಮಣ್ಣನವರು ಚರ್ಚೆ ನಡೆಸಿದ್ದೇವೆ. ಪ್ರಧಾನಿ ನರೇಂದ್ರ ಮೋದಿಯವರ ಮಾರ್ಗ ದರ್ಶನದಲ್ಲಿ ಈ ಭಾಗದಲ್ಲಿ ಮತ್ತಷ್ಟು ಪರಿವರ್ತನಾತ್ಮಕ ಬೆಳವಣಿಗೆಯನ್ನು ಕಾಣುವ ದಿನಗಳು ದೂರವಿಲ್ಲ ಎಂದರು.

ಪ್ರಮುಖವಾಗಿ ನಾನು ರಾಮನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಹಾದು ಹೋಗುವ ರೈಲು ಮಾರ್ಗದ ವ್ಯಾಪ್ತಿ ಬರುವ ನಿಲ್ದಾಣಗಳ ಅಭಿವೃದ್ಧಿ, ಹೆಚ್ಚುವರಿ ರೈಲುಗಳ ಸಂಚಾರ, ಪ್ರಮುಖ ರೈಲುಗಳ ನಿಲುಗಡೆ, ವಾಣಿಜ್ಯ ಚಟುವಟಿಕೆಗಳ ವೃದ್ಧಿ ಹಾಗೂ ಉದ್ಯೋಗ ಸೃಷ್ಟಿಸುವ ನಿಟ್ಟಿನಲ್ಲಿ ಸಚಿವ ಸೋಮಣ್ಣ ಅವರೊಂದಿಗೆ ವಿಸ್ತೃತ ಮಾತುಕತೆ ನಡೆಸಿದ್ದೇನೆ ಎಂದರು.

ಮುಖ್ಯವಾಗಿ ಎಲ್ಲಾ ಲೆವೆಲ್ ಕ್ರಾಸಿಂಗ್‌ಗಳನ್ನು ಪರಿಶೀಲಿಸಿ ಅಗತ್ಯವಿರುವ ಕಡೆ ಅಂಡರ್ ಪಾಸ್‌ಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ಸಚಿವ ಸೋಮಣ್ಣ ಅವರೊಂದಿಗೆ ಚರ್ಚಿಸಲಾಗಿದೆ. ಜೊತೆಗೆ ಈ ಮಾರ್ಗದ ಮದ್ದೂರು, ಶ್ರೀರಂಗಪಟ್ಟಣ, ಪಾಂಡವಪುರ ಸೇರಿದಂತೆ ಹಲವು ರೈಲು ನಿಲ್ದಾಣಗಳನ್ನು ಅಭಿವೃದ್ಧಿಪಡಿಸಿ ಮೇಲ್ದರ್ಜೆಗೇರಿಸುವ ಬಗ್ಗೆ ರೈಲ್ವೆ ಸಚಿವರು ಮತ್ತು ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲಾಗಿದೆ ಎಂದರು.

ರವೀಂದ್ರ ಶ್ರೀಕಂಠಯ್ಯ ಬೆಂಬಲಿಗರಿಂದ ಹೆಚ್‌ಡಿಕೆಗೆ ಧಿಕ್ಕಾರ

ನಾನು ಬಂದಿರುವುದು ಅಭಿವೃದ್ಧಿಗೆ, ರಾಜಕಾರಣ ಮಾಡಲು ಅಲ್ಲ: ಹೆಚ್‌ಡಿಕೆ ತಿರುಗೇಟು



ರವೀಂದ್ರ ಶ್ರೀಕಂಠಯ್ಯ ಬೆಂಬಲಿಗರನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತರಾಟೆಗೆ ತೆಗೆದುಕೊಂಡರು.

ಶ್ರೀರಂಗಪಟ್ಟಣ, ಏ.9– ಇಲ್ಲಿನ ರೈಲು ನಿಲ್ದಾಣಕ್ಕೆ ಆಗಮಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಬೆಂಬಲಿಗರು ಧಿಕ್ಕಾರ ಕೂಗಿದ ಘಟನೆ ಗುರುವಾರ ನಡೆಯಿತು.

ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ, ಸಂಸದ ಯದುವೀರ್ ಇತರೆ ಗಣ್ಯರು ಪಟ್ಟಣದ ರೈಲು ನಿಲ್ದಾಣಕ್ಕೆ ಆಗಮಿಸಿದಾಗ ರವೀಂದ್ರ ಶ್ರೀಕಂಠಯ್ಯ ಬೆಂಬಲಿಗರು ಕುಮಾರಸ್ವಾಮಿ ಮತ್ತು ರವೀಂದ್ರ ಶ್ರೀಕಂಠಯ್ಯ ಪರ ಘೋಷಣೆ ಕೂಗಿದರು. ರೈಲಿನ ಒಳಗೆ, ಕೇಂದ್ರ ಸಚಿವರ ಪಕ್ಕ ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಕುಳಿತಿರುವುದನ್ನು ಕಂಡ ಬಳಿಕ ಜೆಡಿಎಸ್ ಕಾರ್ಯಕರ್ತರ ವರಸೆ ಬದಲಾಯಿತು. ರವೀಂದ್ರ ಶ್ರೀಕಂಠಯ್ಯ ಅವರನ್ನೂ ರೈಲಿಗೆ ಹತ್ತಿಸಿಕೊಳ್ಳಿ ಎಂದು ಆಗ್ರಹಿಸಿದರು.

ರೈಲು ನಿಲ್ದಾಣಗಳಲ್ಲಿ ಜನರ ಅಹವಾಲು ಆಲಿಸುವ ಕುರಿತು ಸ್ಥಳೀಯ ಜೆಡಿಎಸ್ ಮತ್ತು ಬಿಜೆಪಿ ಮುಖಂಡರಿಗೆ ಮೊದಲೇ ತಿಳಿಸಲಾಗಿದೆ. ರವೀಂದ್ರ ಶ್ರೀಕಂಠಯ್ಯ ಅವರಿಗೂ ಮಾಹಿತಿ ನೀಡಲಾಗಿದೆ. ಅವರು ಬಂದಿಲ್ಲವೆ ಎಂದು ಕುಮಾರಸ್ವಾಮಿ ಕೇಳಿದರು. ತುಸು ದೂರದಲ್ಲಿ ನಿಂತಿದ್ದ ರವೀಂದ್ರ ಶ್ರೀಕಂಠಯ್ಯ ಅವರನ್ನು ಕೈ ಬೀಸಿ ಕರೆದರು. ಆದರೂ ರವೀಂದ್ರ ಶ್ರೀಕಂಠಯ್ಯ ಸ್ಥಳ ಬಿಟ್ಟು ಕದಲಲಿಲ್ಲ.

ರವೀಂದ್ರ ಶ್ರೀಕಂಠಯ್ಯ ಅವರು ಇರುವ ಸ್ಥಳಕ್ಕೆ ನೀವೇ ಬನ್ನಿ. ರೈಲಿನಿಂದ ಇಳಿಯಿರಿ ಎಂದು ಒತ್ತಾಯಿಸಿದರು. ಕುಮಾರಸ್ವಾಮಿ ಅವರು ರೈಲು ಇಳಿಯದಿದ್ದಾಗ ರವೀಂದ್ರ ಶ್ರೀಕಂಠಯ್ಯ ಬೆಂಬಲಿಗರು ಕುಮಾರಸ್ವಾಮಿ ವಿರುದ್ಧ ಧಿಕ್ಕಾರ ಕೂಗಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಅವರನ್ನು ತರಾಟೆ ತೆಗೆದುಕೊಂಡರು.

ಇದರಿಂದ ಕೋಪಗೊಂಡ ಕೇಂದ್ರ ಸಚಿವ ಕುಮಾರಸ್ವಾಮಿ, ‘ನಾನು ರಾಜಕಾರಣ ಮಾಡಲು ಇಲ್ಲಿಗೆ ಬಂದಿಲ್ಲ. ಜಿಲ್ಲೆಯ ಜನರ ಅಹವಾಲು ಆಲಿಸಿ ಸಮಸ್ಯೆಗಳನ್ನು ಪರಿಹರಿಸಲು ಬಂದಿದ್ದೇನೆ.’ ಇಂತಹ ನಡವಳಿಕೆ ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕ ಸುರೇಶಗೌಡ, ಜೆಡಿಎಸ್ ಮುಖಂಡರಾದ ಮುಕುಂದ, ಪಿ.ಎಚ್.ಚಂದ್ರಶೇಖರ್, ಬಿಜೆಪಿ ಮಂಡಲದ ಅಧ್ಯಕ್ಷ ರಮೇಶ್, ಪಕ್ಷದ ರಾಜ್ಯ ಕಾರ್ಯಕಾರಿಣಿ ಸದಸ್ಯ ಎಸ್.ಸಿದ್ದರಾಮಯ್ಯ, ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಶ್ರೀಧರ್, ನೂರಾರು ಮಂದಿ ರೈಲ್ವೆ ನಿಲ್ದಾಣದಲ್ಲಿದ್ದರು. ಚಾಮುಂಡಿ ಎಕ್ಸ್‌ಪ್ರೆಸ್, ರಾಜ ರಾಣಿ, ವಿಶ್ವಮಾನವ ಮತ್ತು ತಿರುಪತಿ ರೈಲುಗಳ ನಿಲುಗಡೆಗೆ ಕ್ರಮ ಕೈಗೊಳ್ಳಬೇಕು ಎಂದು ಮುಖಂಡರು ಒತ್ತಾಯಿಸಿದರು.

ಭ್ರಷ್ಟಾಚಾರ ತಡೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ

ಕೆ.ಆರ್.ಪೇಟೆ, ಏ.9– ತಾಲೂಕಿನ ಸರ್ಕಾರಿ ಕಚೇರಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ತಡೆಗಟ್ಟುವಂತೆ ಆಗ್ರಹಿಸಿ ತಾಲೂಕು ರೈತ ಸಂಘದ ನೂರಾರು ಕಾರ್ಯಕರ್ತರು ಪಟ್ಟಣದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಮಿನಿವಿಧಾನ ಸೌಧಕ್ಕೆ ಮುತ್ತಿಗೆ ಹಾಕಿದ ಪ್ರತಿಭಟನಾಕಾರರು ಭ್ರಷ್ಟ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಶಂಖ, ಜಾಗಟೆ ಮತ್ತು ತುತ್ತೂರಿ ಊದಿ ರೈತರ ಪಾಲಿಗೆ ಸರ್ಕಾರ ಸತ್ತಿದೆ ಗೋವಿಂದಾ.. ಗೋವಿಂದಾ... ಎಂದು ಕೂಗುವ ಮೂಲಕ ಮಿನಿ ವಿಧಾನ ಸೌಧದ ಮೆಟ್ಟಿಲುಗಳ ಮೇಲೆ ಕುಳಿತು ಪ್ರತಿಭಟನೆ ನಡೆಸಿದರು.



ಮಿನಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ರೈತ ಸಂಘದ ಮುಖಂಡರು ಪ್ರತಿಭಟನೆ ನಡೆಸಿದರು.

ಜಿಲ್ಲಾ ರೈತ ಸಂಘದ ಮಾಜಿ ಅಧ್ಯಕ್ಷ ಎಂ.ವಿ.ರಾಜೇಗೌಡ ಮಾತನಾಡಿ, ಶಿಕ್ಷಣ ಇಲಾಖೆ ಸೂಚನೆ ಮೇರೆಗೆ ತಾಲೂಕು ಟಿಎಪಿಸಿಎಂಎಸ್ ಗೋಡನ್‌ನಿಂದ ಎತ್ತುವಳಿಯಾಗಿ ಗವೀ ಮಠದ ವಸತಿ ಶಾಲೆಗೆ ಸೇರಬೇಕಾದ ಅಕ್ಕಿ ವಸತಿ ಶಾಲೆ ಸೇರುವ ಬದಲು ಪಟ್ಟಣದ ಖಾಸಗಿ ರೈಸ್ ಮಿಲ್‌ಗೆ ಹೋಗಿದೆ. ಮಾ.17ರಂದು ಖಾಸಗಿ ರೈಸ್ ಮಿಲ್‌ಗೆ ಹೋದ ಅಕ್ಕಿಯನ್ನು ಲಾರಿ ಸಮೇತ ಪತ್ತೆ ಹಚ್ಚಿ ತಾಲೂಕಿನ ರೈತ ಸಂಘದ ಕಾರ್ಯಕರ್ತರು ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿ 21 ದಿನ ಕಳೆದರೂ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ವಸತಿ ಶಾಲೆಗೆ ಸೇರಬೇಕಾದ ಅಕ್ಕಿ ಖಾಸಗಿ ರೈಸ್‌ಮಿಲ್‌ಗೆ ಸಾಗಿಸಿದ್ದು ಏಕೆ ಎಂಬುದರ ಬಗ್ಗೆ ತನಿಖೆ ನಡೆಸಬೇಕು. ಸೂಕ್ತ ದಾಖಲೆ ಒದಗಿಸಬೇಕು. ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಪುಟ್ಟೇಗೌಡ ಮಾತನಾಡಿ, ತಾಲೂಕಿನ ಸರ್ಕಾರಿ ಕಚೇರಿಗಳಲ್ಲಿ ರೈತರ ಕೆಲಸ ಆಗುತ್ತಿಲ್ಲ. ಬಹುತೇಕ ಅಧಿಕಾರಿಗಳು ದಲ್ಲಾಳಿಗಳನ್ನು ನೇಮಕ ಮಾಡಿಕೊಂಡಿದ್ದು, ಕಮೀಷನ್ ದಂಧೆಯಲ್ಲಿ ಮುಳುಗಿದ್ದಾರೆ. ಶೀಘ್ರ ಕೆಲಸ ಆಗಬೇಕಾದರೆ ರೈತರು ದಲ್ಲಾಳಿಗಳ ಮೂಲಕವೇ ಹೋಗಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಅಧಿಕಾರಿಗಳು ನಿರ್ಮಿಸಿದ್ದಾರೆ. ಸರ್ಕಾರಿ ಆಸ್ತಿಪಾಸ್ತಿಗಳು ರಾಜಾರೋಷವಾಗಿ ಬಲಾಢ್ಯರ ಅತಿಕ್ರಮಕ್ಕೆ ಒಳಗಾಗುತ್ತಿದ್ದರೂ, ಸರ್ಕಾರಿ ಆಸ್ತಿ ಸಂರಕ್ಷಣೆಗೆ ಅಧಿಕಾರಿಗಳು ಕ್ರಮ ವಹಿಸುತ್ತಿಲ್ಲ. ಭ್ರಷ್ಟ ಅಧಿಕಾರಿಗಳಿಂದ ರೈತರು ನೆಮ್ಮದಿಯ ಬದುಕು ಸಾಗಿಸುತ್ತಿಲ್ಲ. ಅಧಿಕಾರಿಗಳು ಮತ್ತು ರಾಜಕಾರಣಿಗಳು ಭ್ರಷ್ಟರ ರಕ್ಷಣೆಗೆ ನಿಂತಿದ್ದಾರೆ. ಉನ್ನತ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ತಪ್ಪಿತಸ್ಥ ನೌಕರರ ವಿರುದ್ಧ ಕಠಿಣ ಕ್ರಮ ಜರುಗಿಸುವವರೆಗೂ ನಾವು ಸ್ಥಳದಿಂದ ಕದಲುವುದಿಲ್ಲ ಎಂದರು.

ಸಂಧಾನ ವಿಫಲ: ಪ್ರತಿಭಟನಾ ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಡಾ.ಎಸ್.ಯು. ಅಶೋಕ್ ಏ.18ರಂದು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆಸಿ ರೈತರ ಸಮ್ಮುಖದಲ್ಲಿಯೇ ಸಭೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಅಲ್ಲಿವರೆಗೂ ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು. ಆದರೆ ತಾಲೂಕು ಆಡಳಿತದ ಮನವಿ ತಿರಸ್ಕರಿಸಿರುವ ರೈತರು ತಮ್ಮ ಪ್ರತಿಭಟನೆ ಮುಂದುವರಿಸಿದ್ದಾರೆ.

ಈ ವೇಳೆ ರಾಜ್ಯ ರೈತ ಸಂಘದ ಮಹಿಳಾ ಘಟಕದ ಮಾಜಿ ಅಧ್ಯಕ್ಷೆ ನಂದಿನಿ ಜಯರಾಂ, ರೈತ ಮುಖಂಡರಾದ ಕೆ.ಆರ್.ಜಯರಾಂ, ಎಲ್.ಬಿ.ಜಗದೀಶ್, ಜಿಲ್ಲಾ ರೈತಸಂಘದ ಉಪಾಧ್ಯಕ್ಷ ಶಂಕರ್, ನಾಗರಾಜು, ಪ್ರಕಾಶ್, ರಾಜಣ್ಣ, ಮುದ್ದುಕುಮಾರ್, ಕುಮಾರ್, ಹೊನ್ನೇಗೌಡ, ಶಿವಣ್ಣ ಕೃಷ್ಣೇಗೌಡ, ಮಹೇಶ್, ತಮ್ಮಯ್ಯ, ಬಸವರಾಜು, ನಾಗರಾಜು, ನಾರಾಯಣಸ್ವಾಮಿ, ಕೆ.ಆರ್.ಎಸ್ ನಾಗರಾಜು ಸೇರಿದಂತೆ ನೂರಾರು ರೈತ ಮುಖಂಡರು ಪ್ರತಿಭಟನೆಯಲ್ಲಿದ್ದರು.

ಇತಿಹಾಸ ಪುಟ ಸೇರಿದ ಟೌನ್‌ಹಾಲ್


ಕಾವೇರಿ ಕಲಾಕ್ಷೇತ್ರ ನೂತನ ಕಲಾಭವನ ನಿರ್ಮಾಣಕ್ಕೆ ಭೂಮಿಪೂಜೆ

ಮಡಿಕೇರಿ, ಏ.9– ನಗರದ ನಗರಸಭೆ ಆವರಣದಲ್ಲಿರುವ ಹಳೆಯ ಕಾವೇರಿ ಕಲಾಕ್ಷೇತ್ರ (ಟೌನ್ ಹಾಲ್) ಕಟ್ಟಡವನ್ನು ತೆರವುಗೊಳಿಸಿ ಸುಸಜ್ಜಿತವಾದ ಎರಡು ಅಂತಸ್ತಿನ ವಾಹನ ನಿಲುಗಡೆ ಹಾಗೂ 450 ಆಸನ ಒಳಗೊಂಡ ಸಭಾಭವನ ಕಟ್ಟಡ ನಿರ್ಮಾಣಕ್ಕೆ ಶಾಸಕರಾದ ಡಾ.ಮಂತರ್ ಗೌಡ ಅವರು ಗುರುವಾರ ಭೂಮಿ ಪೂಜೆ ನೆರವೇರಿಸಿದರು.

ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಡಾ.ಮಂತರ್ ಗೌಡ 9.50 ಕೋಟಿ ರೂ. ವೆಚ್ಚದಲ್ಲಿ ಮುಖ್ಯಮಂತ್ರಿ ಅವರ ಅಮೃತ ನಗರೋತ್ಥಾನ ಯೋಜನೆಯಡಿ ಹಳೇ ಕಾವೇರಿ ಕಲಾಕ್ಷೇತ್ರ ಕಟ್ಟಡ ತೆರವುಗೊಳಿಸಿ ನೂತನ ಕಟ್ಟಡ ನಿರ್ಮಾಣ ಮಾಡಲಾಗುತ್ತದೆ ಎಂದು ಹೇಳಿದರು.

1953ರಲ್ಲಿ ಆರಂಭವಾದ ಟೌನ್‌ಹಾಲ್, ಅಂದಿನ ಕಾಲದಲ್ಲಿ ಉನ್ನತ ಕಟ್ಟಡವಾಗಿತ್ತು. ಕಾಲಕ್ರಮೇಣ ಎಲ್ಲವೂ ಬದಲಾವಣೆ ಅನಿವಾರ್ಯ. ಆ ನಿಟ್ಟಿನಲ್ಲಿ ಟೌನ್‌ಹಾಲ್ ಇತಿಹಾಸ ಪುಟ ಸೇರುತ್ತಿದೆ ಎಂದು ಶಾಸಕರು ಹೇಳಿದರು.

2013ಕ್ಕೂ ಹಿಂದೆ ದಸರಾವನ್ನು ಕಾವೇರಿ ಕಲಾಕ್ಷೇತ್ರದಲ್ಲಿಯೇ ಆಯೋಜಿಸುತ್ತಿದ್ದರು. ನಂತರದ ದಿನಗಳಲ್ಲಿ ಗಾಂಧಿ ಮೈದಾನಕ್ಕೆ ಸ್ಥಳಾಂತರವಾಯಿತು. ಆ ನಿಟ್ಟಿನಲ್ಲಿ ಪ್ರವಾಸಿ ಕೇಂದ್ರವಾದ ರಾಜಾಸೀಟು ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಾರೆ. ರಜೆ ಅವಧಿಯ ವಾರಾಂತ್ಯದಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡುವುದು ಸೇರಿದಂತೆ ಹಲವು ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆ ನಿಟ್ಟಿನಲ್ಲಿ ನೂತನ ಕಾವೇರಿ ಕಲಾಕ್ಷೇತ್ರದಲ್ಲಿ ತಳ ಮಹಡಿಯಲ್ಲಿ ಎರಡು ಅಂತಸ್ತಿನಲ್ಲಿ 150 ಕಾರುಗಳು ಮತ್ತು 100 ಬೈಕ್‌ಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗುತ್ತದೆ. ಹಾಗೆಯೇ 500 ಜನರು ಕುಳಿತುಕೊಳ್ಳುವ ಸಭಾಭವನವನ್ನು ನಿರ್ಮಿಸಲಾಗುತ್ತದೆ ಎಂದು ಡಾ.ಮಂತರ್ ಗೌಡ ಅವರು ವಿವರಿಸಿದರು.



ಭೂಮಿ ಪೂಜೆ ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಗಣ್ಯರು.

ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ ಅವರು ಮಾತನಾಡಿ ಕೊಡಗು ಜಿಲ್ಲೆಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಆದ್ದರಿಂದ ಮಡಿಕೇರಿ ನಗರದಲ್ಲಿ ವಾಹನ ನಿಲುಗಡೆ, ಸುಗಮ ಸಾರಿಗೆ ಸಂಚಾರ, ಮತ್ತಿತರ ಮೂಲ ಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು. ಆ ನಿಟ್ಟಿನಲ್ಲಿ ಕಾವೇರಿ ಕಲಾಕ್ಷೇತ್ರ ಹಳೇ ಕಟ್ಟಡದ ಜಾಗದಲ್ಲಿ ಹೊಸ ಕಟ್ಟಡ ನಿರ್ಮಾಣವಾಗುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದರು.

ಮಾಜಿ ಸಚಿವರಾದ ಎಂ.ಪಿ.ಅಪ್ಪಚ್ಚುರಂಜನ್, ಮಾಜಿ ಸಚಿವರು ಎಂ.ಸಿ.ನಾಣಯ್ಯ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ಧರ್ಮಜ ಉತ್ತಪ್ಪ, ನಗರಸಭೆ ಉಪಾಧ್ಯಕ್ಷರಾದ ಮಹೇಶ್ ಜೈನಿ, ನಗರಸಭೆ ಸದಸ್ಯರಾದ ಅಮೀನ್ ಮೊಹಿಸಿನ್, ನಗರಸಭೆ ಪೌರಾಯುಕ್ತರಾದ ಎಚ್.ಆರ್.ರಮೇಶ್ ಮಾತನಾಡಿದರು.

ನಗರಸಭೆ ಸದಸ್ಯರಾದ ಅನಿತಾ ಪೂವಯ್ಯ, ಅರೆಭಾಷೆ ಅಕಾಡೆಮಿ ಸದಸ್ಯ ವಿನೋದ್ ಮೂಡಗದ್ದೆ, ಕಸಾಪ ರೇವತಿ ರಮೇಶ್, ಚೊಕ್ಕಾಡಿ ಪ್ರೇಮ ರಾಘವಯ್ಯ ಮತ್ತು ಸುಶೀಲ ಇದ್ದರು.

ಚಾ.ನಗರದಲ್ಲಿ ಕೆಲವೆಡೆ ನೀರಿಗೆ ಹಾಹಾಕಾರ

ಸಮಸ್ಯೆ ಬಗೆ ಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ ಶಾಸಕ ಪುಟ್ಟರಂಗ ಶೆಟ್ಟಿ

ಚಾಮರಾಜನಗರ, ಏ.9– ನಗರಸಭೆ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆ ಶಾಸಕ ಸಿ.ಪುಟ್ಟರಂಗಶೆಟ್ಟಿ ನಗರಸಭೆ ಸಭಾಂಗಣದಲ್ಲಿ ನಗರಸಭೆ ಅಧಿಕಾರಿಗಳ ಜತೆ ತುರ್ತು ಸಭೆ ನಡೆಸಿದರು.

ಇದೇ ವೇಳೆ ಶಾಸಕರು ಮಾತನಾಡಿ, 30ನೇ ವಾರ್ಡಿನ ಆದಿಜಾಂಬವರ ಬೀದಿ, ಕುರುಬರ ಬೀದಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ದೂರು ಬಂದಿವೆ. ಸೋಮವಾರಪೇಟೆಯಲ್ಲಿ ನೀರಿನ ಸಮಸ್ಯೆ ವ್ಯಾಪಕವಾಗಿದೆ. ಪಾಯಿಂಟ್ ಮಾಡಿಸಿದ ಜಾಗದಲ್ಲಿ ನೀರು ಬರುವ ಸಂಭವವಿದೆ ಎಂದಾದಲ್ಲಿ ಶೀಘ್ರವೇ ಕೊಳವೆಬಾವಿ ಕೊರೆಸಿ, ಪೈಪ್‌ಲೈನ್ ಕಾಮಗಾರಿ ನಡೆಸಿ, ನೀರು ಕೊಡಬೇಕು ಎಂದು ಸೂಚನೆ ನೀಡಿದರು.

ಇದೇ ವೇಳೆ 26ನೇ ವಾರ್ಡಿನ ನಿವಾಸಿಗಳು ತಮ್ಮ ವಾರ್ಡಿನಲ್ಲಿ ಉಲ್ಬಣವಾಗಿರುವ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕು ಎಂದು ನಗರಸಭೆ ಅಧಿಕಾರಿಗಳಿಗೆ ದೂರು ಸಲ್ಲಿಸಿದರು, ಇದೇ ವೇಳೆ ಶಾಸಕರ ಜತೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಮನವಿಮಾಡಿದರು.



ಅಧಿಕಾರಿಗಳ ಸಭೆ ನಡೆಸಿ ಸೂಚನೆ ನೀಡುತ್ತಿರುವ ಶಾಸಕ ಪುಟ್ಟರಂಗಶೆಟ್ಟಿ

ನಗರಸಭೆಯಲ್ಲಿ ಈಸ್ವತ್ತು, ಖಾತೆ ಬದಲಾವಣೆ ಸೇರಿದಂತೆ ಸಾರ್ವಜನಿಕರ ಕೆಲಸಗಳನ್ನು ವಿಳಂಬ ಮಾಡದಂತೆ ಜರೂರಾಗಿ ಮಾಡಬೇಕು, ಈಗ ಬೇಸಿಗೆ ಸಮಯವಾದ್ದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇದ್ದು, ಚರಂಡಿಯಲ್ಲಿ ಸಂಗ್ರಹವಾಗಿರುವ ಹೂಳನ್ನು ತೆರವು ಮಾಡಿ, ಅದರ ವಿಲೇವಾರಿಗೆ ಕ್ರಮವಹಿಸಬೇಕು. ಅಮೃತ್–2 ಯೋಜನೆಯಡಿ, ಮನೆಮನೆಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಸಂಬಂಧ ಬಾಕಿಯುಳಿದಿರುವ ಮನೆಗಳಿಗೆ ತ್ವರಿತಗತಿಯಲ್ಲಿ ನಲ್ಲಿಗಳ ಅಳವಡಿಕೆಗೆ ನಗರನೀರು ಸರಬರಾಜು ಮಂಡಳಿಯವರು ಕ್ರಮಕೈಗೊಳ್ಳಬೇಕು, ಕುಡಿ ಯುವ ನೀರುಪೂರೈಕೆ ವೇಳೆ ಸೆಸ್ಕ್‌ನಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ಗಮನಹರಿಸಬೇಕು ಎಂದರು.

ನಗರಸಭೆ ಆಯುಕ್ತ ಪರಶುರಾಂಭಲವಾದಿ, ಎಇಇ ಪ್ರಕಾಶ್, ಜೆಇ ಶಿವಶಂಕರ ಆರಾಧ್ಯ, ರಾಜು, ಸಿಎಂಸಿ ಸಂಘಟನಾಧಿಕಾರಿ ವೆಂಕಟನಾಯಕ್, ಆರೋಗ್ಯನಿರೀಕ್ಷಕ ಮಂಜು, ಅಧಿಕಾರಿಗಳು ಇದ್ದರು.

ಮಡಿಕೇರಿಯಲ್ಲಿ ಗ್ಯಾರಂಟಿಯೊಂದಿಗೆ ಕ್ಷೇತ್ರದ ಅಭಿವೃದ್ಧಿಯೂ ನಡೆಯುತ್ತಿದೆ

ಶಾಸಕ ಡಾ.ಮಂತರ್ ಗೌಡ ಪ್ರತಿಪಾದನೆ



ಮಡಿಕೇರಿ,ಏ.9– ರಾಜ್ಯ ಸರಕಾರ ಘೋಷಿಸಿದ ಗ್ಯಾರಂಟಿ ಯೋಜನೆಗಳ ಸಹಿತ ಕ್ಷೇತ್ರದ ಅಭಿವೃದ್ಧಿಯೂ ಯಾವುದೇ ಅಡೆತಡೆ ಇಲ್ಲದೇ ನಿರಂತರವಾಗಿ ಸಾಗುತ್ತಿದೆ ಎಂದು ಮಡಿಕೇರಿ ಕ್ಷೇತ್ರ ಶಾಸಕ ಡಾ. ಮಂತರ್ ಗೌಡ ಹೇಳಿದ್ದಾರೆ.

‘ಮೈಸೂರು ಮಿತ್ರ’ ಜೊತೆ ಮಾತನಾಡಿದ ಶಾಸಕ ಡಾ.ಮಂತರ್ ಗೌಡ, ಗ್ಯಾರಂಟಿ ಯೋಜನೆಗಳನ್ನು ಎಲ್ಲಾ ವರ್ಗದ ಜನರು ಸಂತೋಷದಿಂದ ಪಡೆಯುತ್ತಿದ್ದಾರೆ. ಅರ್ಹ ಪ್ರತಿಯೊಬ್ಬರು ಈ ಯೋಜನೆಗಳ ಲಾಭ ಪಡೆಯುವಂತೆ ಮಾಡಲು ತಾಲೂಕು ಅಧ್ಯಕ್ಷರುಗಳ ಮೂಲಕ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆಗಳ ನಡುವೆ ಕ್ಷೇತ್ರದ ಅಭಿವೃದ್ಧಿ ಕಾರ್ಯವೂ ನಡೆಯುತ್ತಿದೆ. ಕಳೆದ 25 ವರ್ಷಗಳಿಂದ ನಡೆಯದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಹಲವು ಕಾಮಗಾರಿಗಳು ಮುಕ್ತಾಯವಾಗಿದ್ದರೆ, ಮತ್ತೆ ಕೆಲವು ಪ್ರಗತಿಯಲ್ಲಿದೆ. ಕಳೆದ 3 ವರ್ಷಗಳ ಅವಧಿಯಲ್ಲಿ ಕ್ಷೇತ್ರಕ್ಕೆ 1000 ಕೋಟಿ ರೂ. ಹೆಚ್ಚಿನ ಅನುದಾನ ದೊರಕಿದೆ ಎಂದು ಹೇಳಿದರು. ಕಳೆದ 20 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಸೋಮವಾರಪೇಟೆ ಶತಮಾನೋತ್ಸವ ಭವನ ಪೂರ್ಣಗೊಳಿಸಲು 2 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಮಡಿಕೇರಿ ನಗರದ ಕಾವೇರಿ ಕಲಾ ಕ್ಷೇತ್ರವನ್ನು ಒಟ್ಟು 16 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಇದಕ್ಕೆ 7 ಕೋಟಿ ರೂ. ಅನುದಾನವನ್ನೂ ಒದಗಿಸಲಾಗುವುದು. ಕಳೆದ 20 ವರ್ಷಗಳಿಂದ ಇದು ಯಾಕೆ ಸಾಧ್ಯವಾಗಿರಲಿಲ್ಲ ಎಂದು ಅವರು ಪ್ರಶ್ನಿಸಿದರು. ಇಂದು ಆ ಕಾಮಗಾರಿಗೆ ಚಾಲನೆ ನೀಡಲಾಗಿದೆ. 18 ತಿಂಗಳಲ್ಲಿ ಕಾಮಗಾರಿ ಮುಕ್ತಾಯಕ್ಕೂ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಮಡಿಕೇರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯನ್ನು 40 ಕೋಟಿ ರೂ ವೆಚ್ಚದಲ್ಲಿ ಉನ್ನತೀಕರಿಸಲಾಗಿದೆ. ಸೋಮವಾರಪೇಟೆ, ಮಡಿಕೇರಿ, ಕುಶಾಲನಗರಕ್ಕೆ 50 ಕೋಟಿ ರೂ ವೆಚ್ಚದಲ್ಲಿ ಕುಡಿಯುವ ನೀರು ಒದಗಿಸುವ ಕಾಮಗಾರಿ ನಡೆಸಲಾಗುತ್ತಿದೆ. ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಮೂಲಕ ಐಗೂರು ಸೇತುವೆಯನ್ನು 10 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸುವ ಕಾರ್ಯ ನಡೆಯುತ್ತಿದೆ. ನನ್ನ ಕ್ಷೇತ್ರದಲ್ಲಿರುವ ರಾಜ್ಯ ರಸ್ತೆಗಳ ಅಭಿವೃದ್ಧಿ ಮಾಡಲಾಗುತ್ತಿದೆ. ಬಜೆಟ್‌ನಲ್ಲಿ ಕೆ–ಶಿಪ್ ಯೋಜನೆ ಅಡಿಯಲ್ಲಿ ಮಡಿಕೇರಿ–ಸೋಮವಾರಪೇಟೆ–ದೋಣಿಗಲ್ ಹೆದ್ದಾರಿ ನಿರ್ಮಾಣ ಕಾರ್ಯವೂ ಸದ್ಯದಲ್ಲಿಯೇ ಪ್ರಾರಂಭವಾಗಲಿದೆ. ವೈದ್ಯಕೀಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡುವ ಸಲುವಾಗಿ ಕುಶಾಲನಗರದ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು. ಈ ಹಿಂದಿನ ಸರಕಾರದ ಅವಧಿಯಲ್ಲಿ ಆರಂಭಿಸಲಾಗಿರುವ ಎಲ್ಲಾ ಕಾಮಗಾರಿಗಳ ಮುಕ್ತಾಯಕ್ಕೆ ಕ್ರಮ ಕೈಗೊಳ್ಳಲಾಗಿದೆ. ಯಾವುದೇ ಯೋಜನೆಯನ್ನೂ ಕೈ ಬಿಟ್ಟಿಲ್ಲ. ಅಂತಹ ಸಣ್ಣತನದ ರಾಜಕೀಯ ಮಾಡಲ್ಲ ಎಂದು ಸ್ಪಷ್ಟಪಡಿಸಿದರು. ಕೆಲವು ಯೋಜನೆಗಳ ಕಾಮಗಾರಿಯೂ ಪ್ರಗತಿಯಲ್ಲಿದೆ. ಕೆಲವು ಕಟ್ಟಡಗಳ ನಿರ್ಮಾಣ ಕಾಮಗಾರಿಯೂ ನಡೆಯಬೇಕಿದೆ. ಮುಖ್ಯಮಂತ್ರಿಗಳ ಮೂಲಕವೇ ಅನುದಾನ ತರುವ ಎಲ್ಲಾ ಪ್ರಯತ್ನ ನಡೆಸಲಾಗುತ್ತಿದೆ ಎಂದು ಹೇಳಿದರು.

ವಕೀಲ ಉಮ್ಮತ್ತೂರು ಇಂದುಶೇಖರ್‌ಗೆ ನ್ಯಾಷನಲ್ ಜಸ್ಟಿಸ್ ಅವಾರ್ಡ್



ಚಾಮರಾಜನಗರ: ವಕೀಲ ವೃತ್ತಿಯಲ್ಲಿನ ಸೇವೆ ಹಾಗೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಅವರಿಗೆ ರಾಯಚೂರು ಬೆಳಕು ಟ್ರಸ್ಟ್ ಪ್ರತಿಷ್ಠಿತ ಇಂಟರ್‌ನ್ಯಾಷನಲ್ ಜಸ್ಟಿಸ್ ಅವಾರ್ಡ್ ಘೋಷಣೆ ಮಾಡಿದೆ.

ಮೇ 9ರಂದು ಗಣಿನಾಡು ಬಳ್ಳಾರಿಯ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ನಡೆದ ಸಮ್ಮೇಳನದಲ್ಲಿ ಉಮ್ಮತ್ತೂರು ಇಂದುಶೇಖರ್ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು ಎಂದು ಬೆಳಕು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು. ನ್ಯಾಯಾಂಗ ಕ್ಷೇತ್ರದಲ್ಲಿ ವಕೀಲರಾಗಿ ದೀರ್ಘ ಕಾಲ ಸೇವೆ ಸಲ್ಲಿಸಿ, ನ್ಯಾಯ ಸೇವೆಯ ಮೂಲಕ ಸಮಾಜಕ್ಕೆ, ಬಡವರಿಗೆ ನ್ಯಾಯ ಕೊಡಿಸುವಂತಹ ಕೊಡುಗೆ ನೀಡಿರುವುದು ಹಾಗೂ ವಕೀಲರ ಸಂಘದಲ್ಲಿ ಒಂದು ಬಾರಿ ಪ್ರಧಾನ ಕಾರ್ಯದರ್ಶಿಯಾಗಿ, ನಾಲ್ಕು ಬಾರಿ ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿರುವ ಹಿನ್ನೆಲೆಯಲ್ಲಿ ಅವರ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು ಎಂದು ತಿಳಿಸಿದ್ದಾರೆ.

ಬಿಳಿಗಿರಿರಂಗನಾಥಸ್ವಾಮಿ ಸೇವಾ ಸಮಿತಿ ಪದಾಧಿಕಾರಿಗಳ ಆಯ್ಕೆ




ಚಾಮರಾಜನಗರ: ಶ್ರೀಬಿಳಿಗಿರಿ ರಂಗನಾಥಸ್ವಾಮಿ ಸೇವಾ ಸಮಿತಿ ಮತ್ತು ಮಹರ್ಷಿ ವಾಲ್ಮೀಕಿ ಟ್ರಸ್ಟ್‌ನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ನಗರದಲ್ಲಿ ಇತ್ತೀಚೆಗೆ ನಡೆದ ಸೇವಾ ಸಮಿತಿಯ ಸರ್ವ ಸದಸ್ಯರ ಸಭೆಯಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದ್ದು, ಅಧ್ಯಕ್ಷರಾಗಿ ಆರ್. ಸುಂದರ್, ಗೌರವಾಧ್ಯಕ್ಷರಾಗಿ ಸಿ.ಆರ್. ಗೋವಿಂದರಾಜು, ಉಪಾಧ್ಯಕ್ಷರಾಗಿ ವಿ. ಮಾಲತಿ, ಬಿಳಿಗಿರಿರಂಗ, ವೆಂಕಟೇಶ್, ಪ್ರಧಾನ ಕಾರ್ಯದರ್ಶಿಯಾಗಿ ಸಿ.ಎನ್. ನಟರಾಜು, ಸಹಕಾರ್ಯದರ್ಶಿ ವಿ. ರಾಘವೇಂದ್ರ, ಶ್ಯಾಮ್‌ಕುಮಾರ್, ಖಜಾಂಚಿಯಾಗಿ ಜಯಕುಮಾರ್, ನಾಗೇಶ್, ನಿರ್ದೇಶಕರಾಗಿ ರಾಮು, ಲೋಕೇಶ್, ಸುರೇಶ್, ತೇಜಸ್ವಿನಿ, ರಾಧ ಅವರನ್ನು ಆಯ್ಕೆ ಮಾಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ನಿಸರ್ಗ ಕಾಲೇಜಿಗೆ ಶೇ99ರಷ್ಟು ಫಲಿತಾಂಶ



ಮನಶ್ರೀ



ಶ್ರೀಂಯಾ



ಅಯೇಷಾ,

ಕೊಳ್ಳೇಗಾಲ, ಏ.9– ಕೊಳ್ಳೇಗಾಲ ಪಟ್ಟಣದ ಪ್ರತಿಷ್ಠಿತ ಮಾನಸ ಶಿಕ್ಷಣ ಸಂಸ್ಥೆಯ ನಿಸರ್ಗ ವಿದ್ಯಾನಿಕೇತನ ಸ್ವತಂತ್ರ ಪದವಿ ಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡ 99ರಷ್ಟು ಫಲಿತಾಂಶ ಬಂದಿದ್ದು ಕಾಲೇಜಿನ ವಿಜ್ಞಾನ ವಿಭಾಗದ ಮನಶ್ರೀ 585, ವಾಣಿಜ್ಯ ವಿಭಾಗದ ಆಯೇಷಾ ಮತ್ತು ಎಂ ಶ್ರೀಯಾ ಎಂಬ ವಿದ್ಯಾರ್ಥಿಗಳಿಬ್ಬರು ತಲಾ 585 ಅಂಕಗಳಿಸಿದ್ದಾರೆ. ಕಲಾ ವಿಭಾಗದ ಅಪ್ರಿನ್ 583 ಅಂಕಗಳಿಸಿ ಸಾಧನೆಗೈದಿದ್ದಾರೆ. ವಿಜ್ಞಾನ ವಿಭಾಗದ ಎನ್. ಮನಶ್ರೀ 585 ಅಂಕಗಳಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಬಿ ಬಿ ಆಯೇಶಾ ಮತ್ತು ಶ್ರೀಯಾ ಎಂಬ ಇಬ್ಬರು ವಿದ್ಯಾರ್ಥಿಗಳು ತಲಾ 585 ಅಂಕಗಳಿಸುವ ಮೂಲಕ ಸಾಧನೆ ಗೈದಿದ್ದು ಸಂಸ್ಥೆಯ 166 ಮಂದಿ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆಂದು ಸಂಸ್ಥಾಪಕ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್ ತಿಳಿಸಿದ್ದಾರೆ.